ಆಗಸ್ಟ್ 10, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1997
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಜನಪ್ರತಿನಿಧಿಗಳ ನ್ಯಾಯಾಲಯ ಐತಿಹಾಸಿಕ ತೀರ್ಪು!

# ಸೈಕೋ ಪ್ರಜ್ವಲ್‌ಗೆ ಲೈಫ್‌ಟೈಂ ಜೈಲ್



ಇನ್ನೂ ಎರಡು ಕೇಸ್ ಬಾಕಿ ಇವೆ!!



## ಶಾಸಕರಿಂದ ಗೋಮಾಳವೇ ಗುಳುಂ ಸ್ವಾಹ!

## ಮಹಾರಾಷ್ಟ್ರ ಡ್ರಗ್ಸ್ ಪೆಡ್ಲರ್ಸ್ ಮೈಸೂರಿಗೆ ಬಂದ್ರಲ್ಲಾ ಸಿದ್ದಣ್ಣ!



## ಪ್ರೊಫೆಸರ್ ಮಗನ ಕಿಡ್ನ್ಯಾಪ್ ಅಂಡ್ ಮರ್ಡರ್!



## ಗೆಣೆಕಾರರಿಂದ ಗಂಡನ ಕೊಲ್ಲಿಸಿದ ಕೋಳಿ ಅಂಗಡಿ ಚಂದ್ರಕಲಾ!















# ಕಾಂಗ್ರೆಸ್ ಶಾಸಕರಿಂದ 150 ಕೋಟಿ ರೂ. ಕಿಮ್ಮತ್ತಿನ ಸರ್ಕಾರಿ ಗೋಮಾಳ ಗುಳುಂ ಸ್ವಾಹಾ!?




**ಬಿಜೆಪಿ ನಾಯಕ ಎನ್.ಆರ್. ರಮೇಶ್ ಅವರಿಂದ ಇನ್ನೊಂದು ದಾಖಲೆ ಬಿಡುಗಡೆ! ಬೆಂಗಳೂರು ದಕ್ಷಿಣ ತಾಲೂಕು, ತಾವರೆಕೆರೆ ಹೋಬಳಿಯ ಕುರುಬರಹಳ್ಳಿ ಗ್ರಾಮದ ಸರ್ಕಾರಿ ಗೋಮಾಳವನ್ನು ಗುಳುಂ ಸ್ವಾಹಾ... ಮಾಡಿ ಸುಮಾರು 150 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಸರ್ಕಾರಿ ಸ್ವತ್ತನ್ನು ಕಬಳಿಸಿರುವ ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ ಅವರ ಧರ್ಮಪತ್ನಿ ಶ್ರೀಮತಿ ರಾಧಾ ಬಾಲಕೃಷ್ಣ ಮತ್ತು ಮಾಜಿ ಸಚಿವ ಎಸ್.ಟಿ. ಸೋಮಶೇಖರ್ ಅವರ ಆಪ್ತರು.....?!**

ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ - ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158ರಲ್ಲಿ ಒಟ್ಟು 130.29 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ ಸರ್ಕಾರಿ ಗೋಮಾಳ ಪ್ರದೇಶವಾಗಿರುತ್ತದೆ. ಪ್ರಸ್ತುತ ಕುರುಬರ ಹಳ್ಳಿ ಗ್ರಾಮದ ಪ್ರತೀ ಎಕರೆ ಜಮೀನಿಗೆ ಕನಿಷ್ಟ ಆರು ಕೋಟಿ ರೂ.ಗಳಿಗೂ ಅಧಿಕವಿದ್ದು, ಒಟ್ಟಾರೆ 130.29 ಎಕರೆ ವಿಸ್ತೀರ್ಣದ ಜಮೀನಿನ ಮಾರುಕಟ್ಟೆ ಬೆಲೆ ಸುಮಾರು 800 ಕೋಟಿ ರೂ. ಗಳಿಗೂ ಅಧಿಕವಾಗಿರುತ್ತದೆ.



ದಾಖಲೆ ಬಿಡುಗಡೆ ಮಾಡಿದ ಎನ್.ಆರ್.ರಮೇಶ್

ಇಂತಹ ಅತ್ಯಮೂಲ್ಯ ಸರ್ಕಾರಿ ಸ್ವತ್ತಿನ ಮೇಲೆ ತಮ್ಮ ಕಾಕದೃಷ್ಟಿ ಬೀರಿರುವ ಪ್ರಭಾವೀ ಸರ್ಕಾರಿ ನೆಲಗಳ್ಳರು, ನಕಲಿ ದಾಖಲೆಗಳನ್ನು ಸೃಷ್ಟಿಸಿ - ಈ ಸರ್ಕಾರಿ ಗೋಮಾಳದ ಸ್ವತ್ತಿನಲ್ಲಿ ಸ್ವಲ್ಪ ಸ್ವಲ್ಪವೇ ಪ್ರಮಾಣದಲ್ಲಿ ಕಬಳಿಸುವ ಕಾನೂನುಬಾಹಿರ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿದ್ದಾರೆ! ಇಂತಹ ಪ್ರಭಾವೀ ಸರ್ಕಾರಿ ನೆಲಗಳ್ಳರ ಒತ್ತಡಗಳಿಂದಾಗಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ಕ್ಕೆ ಹೊಸದಾಗಿ ಸರ್ವೆ ನಂ: 233, 234, 235 ಮತ್ತು 236 ಎಂದು ಪೋಡಿ ಮಾಡಿ ಬದಲಾಯಿಸಲಾಗಿದೆ.

ಪ್ರಸ್ತುತ ಬೆಂಗಳೂರು ದಕ್ಷಿಣ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುವ ತಾವರೆಕೆರೆ ಹೋಬಳಿಯು ಈ ಮೊದಲು ಮಾಗಡಿ ತಾಲ್ಲೂಕು ಕಛೇರಿಯ ವ್ಯಾಪ್ತಿಗೆ ಒಳಪಟ್ಟಿತ್ತು.


ಶಾಸಕ ಬಾಲಕೃಷ್ಣ ಹಾಗೂ ಪತ್ನಿ ರಾಧಾ ಕೆ.ಎಸ್.

ಮಾಗಡಿ ತಾಲ್ಲೂಕು ಕಛೇರಿಯಲ್ಲಿದ್ದ ಬಹುತೇಕ ದಾಖಲೆಗಳನ್ನು ತಿದ್ದಿಸುವಂತಹ ಕಾನೂನು ಬಾಹಿರ ಕಾರ್ಯಗಳನ್ನು, ಆ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ / ನೌಕರರ ಮೂಲಕ ಪ್ರಭಾವೀ ರಾಜಕಾರಣಿಗಳು ಮಾಡಿಸಿದ್ದಾರೆ.

ಇದರಂತೆಯೇ ಸರ್ವೆ ನಂ: 233ರಲ್ಲಿ 3.00 ಎಕರೆ ಸರ್ಕಾರಿ ಗೋಮಾಳವನ್ನು ನರಸಿಂಹಯ್ಯ ಎಂಬುವವರಿಗೆ, ಸರ್ವೆ ನಂ: 234 ರಲ್ಲಿ 1.00 ಎಕರೆ ಸರ್ಕಾರಿ ಗೋಮಾಳವನ್ನು ಗಂಗೂಬಾಯಿ ಎಂಬುವವರಿಗೆ, ಸರ್ವೆ ನಂ: 235

☞ 12

## ಭೂಗಳ್ಳತನದ ಇನ್ನಷ್ಟು ದಾಖಲೆಗಳಿವೆ ಎಂದರು ಜೇಡರಹಳ್ಳಿ ಕೃಷ್ಣಪ್ಪ!

ಕಳೆದ ಜೂನ್‌ನಲ್ಲಿ ಮಾಗಡಿಯಲ್ಲಿ ಶಾಸಕ ಹೆಚ್.ಸಿ.ಬಾಲಕೃಷ್ಣ ವಿರುದ್ಧ ಭೂಕಬಳಿಕೆ ಮಾಡಿರುವ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಕೆಂಪೇಗೌಡ ಅಭಿವೃದ್ಧಿ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ. ಕೃಷ್ಣಮೂರ್ತಿ ಜೇಡರಹಳ್ಳಿ ಕೃಷ್ಣಪ್ಪ ಪ್ರೆಸ್ ಮೀಟ್ ಮಾಡಿ ಎಚ್ಚರಿಕೆ ರವಾನಿಸಿದ್ದರು!

ಮಾಗಡಿ ಪಟ್ಟಣದ ಸೋಮೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೆಂಪೇಗೌಡ ಅಭಿವೃದ್ಧಿ ಸಮಿತಿ ವತಿಯಿಂದ ಕೆಂಪೇಗೌಡರ ಕಂದಕ ಕೋಟೆ ಕೆರೆ, ಉಳಿವಿಗಾಗಿ ಮತ್ತು ಜನರ ಧ್ವನಿಯಿಂದ ನಮ್ಮ ಹೋರಾಟದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ್ದ ಕೃಷ್ಣಪ್ಪ, ಕಾಂಗ್ರೆಸ್ ಶಾಸಕ ಬಾಲಕೃಷ್ಣ ಹಾಗೂ ಅವರ ತಂದೆ ಚನ್ನಪ್ಪನವರು ಶಾಸಕರಾಗಿ 35 ವರ್ಷಗಳ ಕಾಲ ಕ್ಷೇತ್ರವನ್ನು ಆಳಿದ್ದಾರೆ.

ಬಾಲಕೃಷ್ಣರವರು ಈಗ ಅರಣ್ಯ ಇಲಾಖೆ ಜಮೀನುಗಳನ್ನು 20ರಿಂದ 30 ಎಕರೆಗಳವರೆಗೂ ಬೇನಾಮಿ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳುತ್ತಿದ್ದು ಇದಕ್ಕೆಲ್ಲ ಅಧಿಕಾರಿಗಳು ಶಾಮೀಲಾಗಿದ್ದಾರೆ. ತಹಸೀಲ್ದಾರ್ ಶರತ್‌ಕುಮಾರ್ ಈಗಾಗಲೇ 74 ಜನ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಸರ್ವೆ ಅಧಿಕಾರಿಗಳ ಜೊತೆ ಶಾಮೀಲಾಗಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳುತ್ತಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ. ಆದರೂ ಕೂಡ ಪೊಲೀಸ್ ಅಧಿಕಾರಿಗಳು ದೂರಿನ ಬಗ್ಗೆ ಯಾವುದೇ ರೀತಿ ತನಿಖೆ ಕೈಗೊಳ್ಳುತ್ತಿಲ್ಲ.... ಶೀಘ್ರದಲ್ಲೇ ಅಕ್ರಮಗಳ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿ ಬಾಲಕೃಷ್ಣರವರ ಬಂಡವಾಳವನ್ನು ಜನಗಳ ಬಳಿ ಬಿಡುವ ಕೆಲಸ ಮಾಡುತ್ತೇನೆ. ಬಾಲಕೃಷ್ಣ ಅವರನ್ನು ಇದೇ ರೀತಿ ಬಿಟ್ಟರೆ ತಾಲೂಕಿನಲ್ಲಿ ಅರಣ್ಯ ಭೂಮಿ, ಸ್ಮಶಾನ ಕೆರೆಗಳು ಇಲ್ಲದಂತೆ ಭೂ ದಾಖಲಾತಿಗಳನ್ನು ಮಾಡಿಸಿ ತಮಗೆ ಬೇಕಾದವರಿಗೆ ಮಾರಾಟ ಮಾಡಿಕೊಳ್ಳುತ್ತಾರೆ ಎಂದು ಹೆಚ್.ಎಂ. ಕೃಷ್ಣಮೂರ್ತಿ ಗಂಭೀರ ಆರೋಪ ಮಾಡಿದ್ದರು.


ಮಾಗಡಿಯಲ್ಲಿ ಹೆಚ್.ಎಂ. ಕೃಷ್ಣಮೂರ್ತಿ (ಜೇಡರಹಳ್ಳಿ ಕೃಷ್ಣಪ್ಪ)

ಕೆಂಪೇಗೌಡರ ನಾಡಿನಲ್ಲಿ ಕೆಂಪೇಗೌಡರ ಪಳವಳಿಕೆಗಳನ್ನು ಉಳಿಸಿಕೊಳ್ಳುವ ಕೆಲಸವನ್ನು ಶಾಸಕರು ಮಾಡಬೇಕು. ಪ್ರಾಚ್ಯ ವಸ್ತು ಇಲಾಖೆಯವರು ಮಾಗಡಿ ಕೋಟೆ ಒತ್ತುವರಿ ಬಗ್ಗೆ ಸರ್ವೆ ಅಧಿಕಾರಿಗಳಿಂದ ಸರ್ವೆ ಕಾರ್ಯ ಮಾಡಲು ಮುಂದಾದರೆ ಅಧಿಕಾರಿಗಳಿಗೆ ಯಾವುದೇ ದಾಖಲಾತಿಗಳನ್ನು ಕೊಡಬೇಡಿ ಅವರಿಗೆ ಸ್ಪಂದಿಸಬೇಡಿ ಎಂದು ಶಾಸಕ ಬಾಲಕೃಷ್ಣ ಅವರೇ ಹೇಳುತ್ತಿದ್ದಾರೆ. ಕೆಂಪೇಗೌಡರ ಕೋಟೆ ಒತ್ತುವರಿ ಉಳಿಸಲು ಸಹಕಾರ ನೀಡದ ಶಾಸಕ ಬಾಲಕೃಷ್ಣರವರು ಕ್ಷೇತ್ರಕ್ಕೆ ಯಾಕೆ ಬೇಕು? ಎಂದು ಕೃಷ್ಣಮೂರ್ತಿ ತುಂಬಿದ ಸಭೆಯಲ್ಲಿ ಸಾರ್ವಜನಿಕರ ಮಧ್ಯೆ ಪ್ರಶ್ನಿಸಿದ್ದರು.

ಅವತ್ತು ಅವರೊಂದಿಗೆ ದಲಿತ ಮುಖಂಡರಾದ ಮಾಡಬಾಳ್ ಜಯರಾಂ, ರೈತ ಸಂಘದ ಅಧ್ಯಕ್ಷ ಲೋಕೇಶ್, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಜಗನ್ನಾಥ್ ಗೌಡ, ಜೆಡಿಎಸ್ ಹಿರಿಯ ಮುಖಂಡ ತಮ್ಮಣ್ಣಗೌಡ, ಯುವ ಮುಖಂಡ ಆನಂದ್ ಗೌಡ, ಶಿವರಾಂ, ಗಂಗಾಧರ್, ಸೋಲೂರು ರಾಘವೇಂದ್ರ, ಮೋಹನ್, ಕೋಳಿ ಅಂಗಡಿ ಪುಟ್ಟಸ್ವಾಮಿ, ಆನಂದ್ ಮುಂತಾದವರು ಭಾಗವಹಿಸಿದ್ದರು.

ಅಂದು ಶಾಸಕ ಬಾಲಕೃಷ್ಣ ಅವರು ಭೂಗಳ್ಳತನ ಮಾಡಿರುವ ದಾಖಲೆಗಳನ್ನು ಅತಿ ಶೀಘ್ರದಲ್ಲೇ ಬಿಡುಗಡೆ ಮಾಡುತ್ತೇನೆ ಎಂದಿದ್ದ ಕೃಷ್ಣಪ್ಪನವರು ಇಂದಿಗೂ ಬಿಡುಗಡೆಗೊಳಿಸಿಲ್ಲ, ಅಥವಾ ಬಿಜೆಪಿ ಧುರೀಣ ಎನ್. ಆರ್. ರಮೇಶ್ ಈಗ ಬಿಡುಗಡೆ ಮಾಡಿರುವ ದಾಖಲೆಗಳು ಅವೇನಾ...?! ಅಥವಾ ಇನ್ನೂ ಬೇರೆ ಬೇರೆ ಇದ್ದಾವ??! ಇದ್ರೆ, ಬೇಗ ಬಿಡುಗಡೆ ಮಾಡಿ, ಸರ್ಕಾರಿ ಭೂಮಿಯನ್ನು ರಕ್ಷಿಸಿ!!!

# ಪ್ರೊಫೆಸರ್ ಮಗನ ಕಿಡ್ನಾಪ್ ಮಾಡಿ ಐದು ಲಕ್ಷ ಕೇಳಿದ್ರು! ಪೊಲೀಸ್‌ಗೆ ಹೇಳಿದ್ದಕ್ಕೆ ಕತ್ತು ಕೊಯ್ದು ಕೊಂದೇಬಿಟ್ರು!!


ಅನ್ಯಾಯವಾಗಿ ಕೊಲೆಯಾದ ನಿಶ್ಚಿತ್

**ಇದೊಂದು ಧಾರುಣ ಘಟನೆ. ಕೇವಲ 5 ಲಕ್ಷ ರೂ. ಹಣಕ್ಕಾಗಿ 12 ವರ್ಷದ ಬಾಲಕನನ್ನು ಕಿಡ್ನಾಪ್ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಅಪಹರಣಕಾರರು, ಆ ಹುಡುಗನ ತಂದೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದಕ್ಕೆ ಕುಪಿತಗೊಂಡು ಬಾಲಕನನ್ನು ಕತ್ತು ಕೊಯ್ದು ಭೀಕರವಾಗಿ ಕೊಂದು, ಹೆಣವನ್ನು ಬಂಡೆ ಮೇಲೆ ಮಲಗಿಸಿ ಪೆಟ್ರೋಲ್ ಸುರಿದು ಸುಟ್ಟು ಹಾಕಿರುವ ಅಮಾನುಷ ಘಟನೆ ಹುಳಿಮಾವು-ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ನಡೆದಿದೆ!**


ಹರಾಮಿ ಹಂತಕರಾದ ಗುರುಮೂರ್ತಿ ಹಾಗೂ ಗೋಪಾಲಕೃಷ್ಣ

ಮಾತೃ ದೇವೋ ಭವ, ಪಿತೃ ದೇವೋಭವ ಎಂಬ ನಾಣ್ಣುಡಿಯ ಜೊತೆ ಗುರುರ್ದೇವೋಭವ ಎನ್ನಲಾಗುತ್ತದೆ! ಗುರುವಿಗೆ ಇರುವ ಮಹತ್ವವೇ ಅಂಥದ್ದು. ಅಂಥ ಗುರುವಿನ ಮಗನನ್ನು ಹಣಕ್ಕಾಗಿ ಅಪಹರಿಸಿ ಕೊಂದಿರುವ ಘಟನೆ ಇದು!! ಬನ್ನೇರುಘಟ್ಟ ರೋಡ್, ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಅರೆಕೆರೆಯ ಶಾಂತಿನಿಕೇತನ ಬಡಾವಣೆಯ ಪ್ರೊಫೆಸರ್ ಅಚ್ಯುತ್‌ರವರಿಗೆ ಒಬ್ಬನೇ ಮಗ ನಿಶ್ಚಿತ್. 13ರ ಬಾಲಕ ಕ್ರೈಸ್ಟ್ ಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದ. ಶಾಲೆ ಮುಗಿದ ಮೇಲೆ ಸಾಯಂಕಾಲ ಟ್ಯೂಷನ್‌ಗೆ ಹೋಗಿ ಮನೆಗೆ ಹಿಂತಿರುಗುವಾಗ ದುಷ್ಕರ್ಮಿಬ್ಬರು ಅವನನ್ನು ಕಿಡ್ನಾಪ್ ಮಾಡಿದ್ರು. ನಂತರ ಅವನ ಮನೆಗೆ ಕಾಲ್ ಮಾಡಿ 5 ಲಕ್ಷ ರೂ ಒತ್ತೆ ಹಣ ಕೇಳಿದ್ರು! ಈ ವಿಚಾರವನ್ನ ಪೊಲೀಸರಿಗೆ ತಿಳಿಸಿದರೆ ನಿಮ್ಮ ಮಗನನ್ನ ಕೊಂದು ಬಿಡ್ತೇವೆ ಅಂತಾನೂ ಎಚ್ಚರಿಕೆ ನೀಡಿದ್ರು!


ಬಂಡೆಯ ಮೇಲೆ ಭೀಕರವಾಗಿ ಸುಟ್ಟಿದ್ದು

ಹಣ ಕೊಟ್ಟು ಮಗನನ್ನು ಬಿಡಿಸಿಕೊಳ್ಳಲು ಒಪ್ಪಿಕೊಂಡ ಪ್ರೊಫೆಸರ್, ಕಾನೂನಿನ ಮೇಲೆ ನಂಬಿಕೆ ಇಟ್ಟು ಹುಳಿಮಾವು ಪೊಲೀಸ್ ಠಾಣೆಗೆ ತೆರಳಿ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರಸ್ವಾಮಿ ಅವರಿಗೆ ಮಾಹಿತಿ ನೀಡಿ ದೂರು ದಾಖಲಿಸಿದ್ರು. ಅವರು ಪೊಲೀಸರಿಗೆ ದೂರು ನೀಡಿದ ವಿಚಾರವನ್ನು ಹೇಗೋ ತಿಳಿದುಕೊಂಡ ದುಷ್ಟ ಕಿಡ್ನಾಪರ್ಸ್ ಆ ಅಮಾಯಕ ಬಾಲಕನನ್ನು ಕುತ್ತಿಗೆ ಕೊಯ್ದು ಕೊಂದು, ಹೆಣವನ್ನು ಬನ್ನೇರುಘಟ್ಟ ಅರಣ್ಯದಲ್ಲಿ ಬಂಡೆಯೊಂದರ ಮೇಲೆ ಮಲಗಿಸಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಎಸ್ಕೇಪ್ ಆಗಿದ್ರು!

ಇತ್ತ, ಹುಳಿಮಾವು ಪೊಲೀಸರು ತನಿಖೆ ಆರಂಭಿಸಿ ಸಿಸಿಟಿವಿ ಫುಟೇಜ್, ಅಪಹರಣಕಾರರ ಮೊಬೈಲ್ ಟವರ್ ಲೊಕೇಶನ್ 'ಟ್ರ್ಯಾಕಿಂಗ್'ನಲ್ಲಿ ಮುಳುಗಿದ್ರು. ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಮತ್ತು ಸಿಬ್ಬಂದಿ ವರ್ಗ, ಬಾಲಕನನ್ನು ಪತ್ತೆಹಚ್ಚುವುದಕ್ಕೆ ನಿರಂತರ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾಗಲೇ, ಅತ್ತ ಬಾಲಕನ ಪೋಷಕರು 5 ಲಕ್ಷ ರೂ.ಹಣವನ್ನು ಸಿದ್ಧಪಡಿಸಿಕೊಂಡು, ಆ ಕಿಡ್ನಾಪರ್ಸ್‌ಗೆ ಕೊಟ್ಟು ಮಗನನ್ನು ಕರೆದುಕೊಂಡು ಬರಲು ಸಿದ್ಧತೆ ನಡೆಸಿದ್ದರು! ಅವರು ಸೂಚಿಸಿದ ಕಡೆಗೆಲ್ಲ ಹಣವನ್ನ ತೆಗೆದುಕೊಂಡು ಹೋಗಲಾಗಿತ್ತು. ಆದರೆ, ಅವರು ಹಣದ ಬ್ಯಾಗ್ ಪಡೆಯಲು ಬಾರದೆ, ಬೇರೆ ಬೇರೆ ಜಾಗ ಹೇಳುತ್ತಲೇ ಕಾಲ ದೂಡುತ್ತಿದ್ದರು!


ಎಸ್ಪಿ ಸಿ.ಕೆ. ಬಾಬಾ

**ಒಂದೆಡೆ ಪ್ರೊಫೆಸರ್, ಇನ್ನೊಂದೆಡೆ ಪೊಲೀಸ್!**

ಆ ಕಿಡ್ನಾಪರ್ಸ್ ಸಿಕ್ಕಿಬೀಳುವ ಭಯ ಹಾಗೂ ಗೊಂದಲಕ್ಕೆ ಸಿಲುಕಿ ಯಾವುದಾದರೂ ಒಂದು ನಿರ್ಧಾರಕ್ಕೆ ಬರದೆ, ವಿಲ ವಿಲ ಒದ್ದಾಡಿರಬೇಕು! ಬನ್ನೇರುಘಟ್ಟ - ಕಗ್ಗಲೀಪುರ ರಸ್ತೆಯಲ್ಲಿರೋ ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಧುರುಳರು ಕಡೆಗೆ ದುಡ್ಡಿನ ಆಸೆ ಬಿಟ್ಟು ಪೊಲೀಸರಿಗೆ ಸಿಗಬಾರದು ಎಂದುಕೊಂಡು ಅನ್ಯಾಯವಾಗಿ ಒತ್ತೆಯಾಳು ಬಾಲಕನನ್ನು ಕೊಲೆ ಮಾಡಿದ್ದಾರೆ! ಬಳಿಕ ಆ ರಸ್ತೆ ಬದಿಯ ಬಂಡೆಯೊಂದರ ಮೇಲೆ ಶವವಿಟ್ಟು ಸ್ವಲ್ಪ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಅಲ್ಲಿಂದ ಪರಾರಿಯಾಗಿದ್ದಾರೆ!!

ಹುಳಿಮಾವು ಪೊಲೀಸರು ದುಷ್ಕರ್ಮಿಗಳ ಮೊಬೈಲ್ ನಂಬರ್ ಟ್ರೇಸ್ ಮಾಡುತ್ತಾ, ಆ ಲೊಕೇಷನ್‌ಗೆ ಹೋದ ವೇಳೆ ಬನ್ನೇರುಘಟ್ಟ- ಕಗ್ಗಲೀಪುರ ರಸ್ತೆಯಲ್ಲಿರುವ ನಿರ್ಜನ ಪ್ರದೇಶದಲ್ಲಿ ಬಂಡೆ ಮೇಲೆ ಅರೆಬರೆ ಸುಟ್ಟ ನಿಶ್ಚಿತ್‌ನ ಶವ ಪತ್ತೆಯಾಗಿದೆ! ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ. ನಾರಾಯಣ ಹಾಗೂ ಬೆಂಗಳೂರು ಗ್ರಾಮಾಂತರ ಎಸ್ಪಿ ಸಿ.ಕೆ. ಬಾಬಾ ಇಬ್ಬರೂ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಾಲಕನ ಶವ ಪತ್ತೆಯಾದ ಸ್ಥಳದಲ್ಲಿ ಕ್ರೂರವಾಗಿ ಕೊಲೆ ಮಾಡಿರೊ ಕುರುಹುಗಳು ಪತ್ತೆಯಾಗಿವೆ!

**ಇಬ್ಬರ ಕಾಲಿಗೂ ಗುಂಡು!**

ಹುಳಿಮಾವು ಠಾಣೆಯ ಪೊಲೀಸರು ಬಾಲಕ ನಿಶ್ಚಿತ್‌ನನ್ನು ಅಪಹರಿಸಿ ಬನ್ನೇರುಘಟ್ಟ ಅರಣ್ಯದಲ್ಲಿ ಕೊಲೆ ಮಾಡಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಎಸ್ಕೇಪ್ ಆಗಿದ್ದ ರಕ್ಕಸರಾದ ಗುರುಮೂರ್ತಿ ಮತ್ತು ಎಸ್.ಜಿ. ಪಾಳ್ಯದ ಗೋಪಾಲಕೃಷ್ಣ ಇಬ್ಬರನ್ನೂ ಪತ್ತೆ ಹಚ್ಚಿ ಇಬ್ಬರ ಮಂಡಿಗೂ ಗುಂಡು ಹೊಡೆದು ಗವರ್ನಮೆಂಟ್ ಆಸ್ಪತ್ರೆ ಬೆಡ್‌ಗೆ ಬಿಸಾಕಿದ್ದಾರೆ!

ಪೊಲೀಸ್ ಕಾರ್ಯಾಚರಣೆ ವೇಳೆ ಬನ್ನೇರುಘಟ್ಟ ಠಾಣಾ ವ್ಯಾಪ್ತಿಯ ಕಗ್ಗಲಿಪುರ ರಸ್ತೆಯಲ್ಲಿ ಆರೋಪಿಗಳು ಅಡಗಿದ್ದರಂತೆ. ಈ ಕುರಿತು ದೊರೆತ ಖಚಿತ ಮಾಹಿತಿ ಮೇರೆಗೆ ಬನ್ನೇರುಘಟ್ಟ ಪೊಲೀಸರು ಸ್ಥಳಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ, ಆರೋಪಿಗಳು ಪೊಲೀಸರ ಮೇಲೆಯೇ ಮಾರಕಾಸ್ತ್ರಗಳಿಂದ ಹಲ್ಲೆಗೆ ಯತ್ನಿಸಿದ್ದಾರೆ. ಆಗ, ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಮತ್ತು ಪಿಎಸ್ಐ ಅರವಿಂದ್ ಆರೋಪಿಗಳ ಮೇಳೆ ಗುಂಡಿನ ದಾಳಿ ನಡೆಸಿದ್ದಾರೆ. ಸದ್ಯ ಬಂಧಿತ ಆರೋಪಿಗಳನ್ನು ಜಯನಗರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸೈಕೋ ಮನಸ್ಥಿತಿ ಹೊಂದಿದ್ದ ಈ ದುರುಳರು ಅನ್ಯಾಯವಾಗಿ ಬಾಲಕನ ಕೊಂದು ಅಟ್ಟಹಾಸ ಮೆರೆದಿದ್ದರು.

ಐನಾತಿ ಆರೋಪಿಗಳು ಆಧುನಿಕ ತಾಂತ್ರಿಕ ಕೌಶಲ್ಯ ಬಳಸಿಕೊಂಡು, ಪೊಲೀಸರ ದಾರಿ ತಪ್ಪಿಸಲು ಹೇಗೆ ಯತ್ನಿಸಿದ್ದರು ಎಂಬುದನ್ನು ತಿಳಿದರೆ ನೀವೇ ಮೂಕ

☞10




ಘಟನಾ ಸ್ಥಳದಲ್ಲಿ ಮಹಜರ್ ನಡೆಸುತ್ತಿರುವ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್ ಮತ್ತು ತಂಡ

## ಪೋಸ್ಕೊ ಕೇಸಲ್ಲಿ ಜೈಲು ಸೇರಿದ್ದ ಗುರುಮೂರ್ತಿ!

ಬನ್ನೆರುಘಟ್ಟದ ಕೋಳಿ ಫಾರಂ ಗೇಟ್ ಬಳಿ ಲೇಔಟ್‌ನಲ್ಲಿ ನೆಲೆಸಿದ್ದ ಗುರುಮೂರ್ತಿಯ ಮೇಲೆ 2020ರಲ್ಲಿ ಕೋಣನಕುಂಟೆ ಪೊಲಿಸ್ ಠಾಣೆಯಲ್ಲಿ ಪೋಸ್ಕೊ ಕೇಸ್ ದಾಖಲಾಗಿತ್ತು. 6 ತಿಂಗಳು ಸೆರೆವಾಸ ಅನುಭವಿಸಿ ನಂತರ ಬೇಲ್ ಮೇಲೆ ಬಿಡುಗಡೆಗೊಂಡಿದ್ದ. ಇವನ ಸ್ನೇಹಿತ ಗೋಪಾಲಕೃಷ್ಣ ಎಸ್.ಜಿ.ಪಾಳ್ಯ ನಿವಾಸಿಯಾಗಿದ್ದು, ಕೇಬಲ್ ಹೂಳುವ ಕೆಲಸ ಮಾಡುತ್ತಿದ್ದ. ಕಷ್ಟಪಡದೆ ದುಡ್ಡು ಮಾಡುವ ಪ್ಲಾನ್ ಹೂಡಿದ ಈ ರಾಸ್ಕಲ್ಸ್ ಈಗ ಇಂಥ ರಾಕ್ಷಸಿ ಕೃತ್ಯಗೈದು ಅನ್ಯಾಯವಾಗಿ ಒಬ್ಬ ವಿದ್ಯಾರ್ಥಿಯನ್ನು ಕೊಂದಿದ್ದಾರೆ!!

ಅಂದಹಾಗೆ, ಗುರುಮೂರ್ತಿ ಪ್ರೊಫೆಸರ್ ಅಚ್ಯುತ್ ಫ್ಯಾಮಿಲಿಗೆ ಪರಿಚಿತನೇ ಆಗಿದ್ದ! ಕಾರ್ ಡ್ರೈವರ್ ಆಗಿದ್ದ ಆಸಾಮಿ,'ಡ್ರೈವ್ ಯೂ' ಆ್ಯಪ್‌ನಲ್ಲಿ ಅಚ್ಯುತ್ ಫ್ಯಾಮಿಲಿಗೆ ಪರಿಚಯವಾಗಿ, ಸುಮಾರು 20 ದಿವಸ ಅವರಲ್ಲಿ ಕೆಲಸ ಮಾಡಿದ್ದಾನೆ. ಹೀಗಾಗಿ, ಈತ ಯಾವುದಾದರು ಹಳೇ ವೈಷಮ್ಯ ಇಟ್ಕೊಂಡು ಬಾಲಕನ ಕಿಡ್ನಾಪ್ ಮಾಡಿದ್ನ? ಎಂಬ ಡೌಟ್ ಇದೆ, ಈ ನಿಟ್ಟಿನಲ್ಲಿ ತನಿಖೆ ನಡೆಯುತ್ತಿದೆ!! ☯

# ಗೆಣೆಕಾರರಿಗೆ ಸುಫಾರಿ ಕೊಟ್ಟು ಅಮಾಯಕ ಗಂಡ ಲೋಕೇಶ್‌ನನ್ನೇ ಕೊಲೆ ಮಾಡಿಸಿದ ಗ್ರಾ.ಪಂ. ಸದಸ್ಯೆ ಕೋಳಿ ಅಂಗಡಿ ಚಂದ್ರಕಲಾ!


ಲೋಕೇಶ್ ಬದುಕಿದ್ದಾಗ

**ಚನ್ನಪಟ್ಟಣ**

✍ ಶಾಂತರಾಜು ಜಿ. ಕಲ್ಲಹಳ್ಳಿ

**ಬೆಂ**ಗಳೂರು ದಕ್ಷಿಣ ಜಿಲ್ಲೆ (ಈ ಹಿಂದೆ ರಾಮನಗರ)ಯ, ಚನ್ನಪಟ್ಟಣ ತಾಲ್ಲೂಕಿನ ಮಾಕಳಿ ಗ್ರಾಮದ ಶ್ರೀಮತಿ ಚನ್ನಮ್ಮ ಮೋಟೇಗೌಡ ದಂಪತಿಗಳಿಗೆ ಎರಡು ಗಂಡು, ಎರಡು ಎಲ್ಲರಿಗೂ ಮದುವೆಯಾಗಿ ಅವರವರ ಕುಟುಂಬ ನಿರ್ವಹಣೆಯಲ್ಲಿದ್ದರು. ಇವರಲ್ಲಿ ಮೂರನೇ ಮಗನಾದ ಲೋಕೇಶ್ ಬೆಂಗಳೂರಿನ ಕನ್ನಹಳ್ಳಿ ದಾಖಲೆ ಹೊಸಹಳ್ಳಿ ಗ್ರಾಮದ ಶ್ರೀಮತಿ ಮಂಗಮ್ಮ ನಂಜಪ್ಪ ದಂಪತಿಯ ಮಗಳಾದ ಚಂದ್ರಕಲಾಳನ್ನು 2008ರಲ್ಲಿ ಮದುವೆಯಾಗಿದ್ದು. ಇವರಿಗೂ ಇಬ್ಬರು ಮಕ್ಕಳು. ಒಂದನೇಯವನು ಹರ್ಷ ಎಂಬಾತ ಪಿಯುಸಿ ವ್ಯಾಸಂಗ, ಎರಡನೇಯವಳು ಭೂಮಿಕಾ 8ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರುವುದು ಬೆಂಗಳೂರಿನಲ್ಲೇ. ಮಗ ಹರ್ಷ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದ. ಲೋಕೇಶ್ ಸ್ವಗ್ರಾಮ ಮಾಕಳಿಯಲ್ಲಿ ಎಲ್ಲರ ಜೊತೆ ಪ್ರೀತಿ-ವಿಶ್ವಾಸ ಗಳಿಸಿದ್ದ ವ್ಯಕ್ತಿ. ಈತ ಜೆಡಿಎಸ್‌ನಲ್ಲಿ ಗುರುತಿಸಿಕೊಂಡು ಜನಸ್ನೇಹಿ ರಾಜಕಾರಣಿಯಾಗಿದ್ದರಿಂದ ಸುಮಾರು 15 ವರ್ಷಗಳಿಂದ ಮಾಕಳಿ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಮೊದಲ ಐದು ವರ್ಷ ಲೋಕೇಶ್ ಸದಸ್ಯನಾಗಿದ್ದು, ಉಳಿದ ಹತ್ತು ವರ್ಷ ಹೆಂಡತಿ ಚಂದ್ರಕಲಾ ಗ್ರಾಮ ಪಂಚಾಯಿತಿ ಸದಸ್ಯರಾಗಿ ಒಮ್ಮೆ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದು, ಹಾಲಿ ಸದಸ್ಯರಾಗಿರುವ ಚಂದ್ರಕಲಾ, ತನ್ನ ತಂದೆ ನಂಜಪ್ಪ 2015ರಲ್ಲಿ ತೀರಿಕೊಂಡ ನಂತರ ಬೆಂಗಳೂರಿನ ಹೊಸಹಳ್ಳಿಯಲ್ಲೇ ದಂಪತಿಗಳು ವಾಸವಿದ್ದರು. ಅಲ್ಲಿಯೂ ಎರಡು ಕೋಳಿ ಅಂಗಡಿಗಳನ್ನು ಹಾಕಿಕೊಂಡಿದ್ದರು. ಇತ್ತ ಮಾಕಳಿ ಗ್ರಾಮದಲ್ಲಿ ಒಂದು ಕೋಳಿ ಅಂಗಡಿ ಹಾಕಿಕೊಂಡು ವ್ಯವಹಾರ ನಡೆಸುತ್ತಿದ್ದರು.


ಚಂದ್ರಕಲಾ ಹಾಗೂ ಲೋಕೇಶ್


ಈಗ್ಗೆ ಸುಂದರವಾದ ಕುಟುಂಬ ಸುಖಕರವಾಗಿ ಜೀವನ ಸಾಗಿಸುತ್ತಿತ್ತು. ಲೋಕೇಶ್‌ಗೆ ವಯಸ್ಸಾದ ತಂದೆತಾಯಿ, ಇವರ ಪೋಷಣೆ ಮಾಡಲು ಪ್ರತಿನಿತ್ಯ ಮಾಕಳಿ ಗ್ರಾಮದಲ್ಲಿ ಇರುತ್ತಿದ್ದರು. ಜೊತೆಗೆ ಗ್ರಾ.ಪಂ. ಸದಸ್ಯರಾಗಿದ್ದ ಕಾರಣದಿಂದ ಜನರ ಕಷ್ಟಸುಖ ದಿನನಿತ್ಯ ಕೇಳುತ್ತಿದ್ದರು.


ಜಿಲ್ಲಾ ಎಸ್ಪಿ ಶ್ರೀನಿವಾಸಗೌಡ


ಎಎಸ್ಪಿ ಸುರೇಶ್


ಡಿವೈಎಸ್ಪಿ ಶ್ರೀಗಿರಿ

ಆದ ಕಾರಣ ಲೋಕೇಶ್ ಹೆಂಡತಿ ಚಂದ್ರಕಲಾ ಮತ್ತು ಮಕ್ಕಳು ವ್ಯವಹಾರ ನೋಡಲು ಬೆಂಗಳೂರಿನ ಹೊಸಹಳ್ಳಿಗೆ ವಾರಕ್ಕೆ ಒಮ್ಮೆ ಹೋಗಿ ಬರುತ್ತಿದ್ದರು. ಅದು ಸೋಮವಾರ ಬೆಳಿಗ್ಗೆ ಹೋಗುತ್ತಿದ್ದರಂತೆ.


ಶವವಾಗಿ ಬಿದ್ದಿರುವ ಲೋಕೇಶ್‌ನ ಮೃತದೇಹ

### ಪ್ರಿಯಕರ ಯೋಗೇಶನ ಜೊತೆ ಚಂದ್ರಕಲಾ ಸಿಕ್ಕಿಬಿದ್ದಳು

ಜೂನ್ 22ರಂದು ತನ್ನ ಗಂಡ ಲೋಕೇಶ್ ಮಾಕಳಿ ಗ್ರಾಮದಲ್ಲಿ ನಡೆದಿದ್ದ ವರ್ಷದ ತಿಥಿಯನ್ನು ಮುಗಿಸಿಕೊಂಡು ಸೋಮವಾರ ಬರುತ್ತಾನೆ ಎಂದುಕೊಂಡಿದ್ದ ಚಂದ್ರಕಲಾಗೆ ಲೋಕೇಶ್ ಭಾನುವಾರ ರಾತ್ರಿಯೇ ಬೆಂಗಳೂರಿನ ಹೊಸಹಳ್ಳಿ ಮನೆಗೆ ಬರುತ್ತಾನೆ ಎಂದು ತಿಳಿಯದೆ, ಭಾನುವಾರ ರಾತ್ರಿ ಮೊದಲನೇ ಪ್ರಿಯಕರ ಮಂಡ್ಯ ಜಿಲ್ಲೆಯ ನವಿಲೆ ಗ್ರಾಮದ ವಾಸಿ ಯೋಗೇಶ್ ಈತ ಬೆಂಗಳೂರಿನ ಅಂಚೆ ಇಲಾಖೆಯಲ್ಲಿ ನೌಕರನಾಗಿದ್ದ. ಈತನನ್ನು ಮನೆಗೆ ಕರೆಯಿಸಿಕೊಂಡಿದ್ದಳಂತೆ. ಆಕಸ್ಮಿಕವಾಗಿ ಬಂದ ಲೋಕೇಶ ಪತ್ನಿ ಚಂದ್ರಕಲಾಳ ರಹಸ್ಯ ಅನೈತಿಕ ಸಂಬಂಧವನ್ನು ಕಂಡು ಕೆಂಡಾಮಂಡಲವಾಗಿ ಜಗಳ ಮಾಡಿದ್ದಾನೆ ಎನ್ನಲಾಗಿದ್ದು, ಈ ವೇಳೆ ಪತ್ನಿ ಚಂದ್ರಕಲಾ ಮತ್ತು ಲೋಕೇಶ್ ನಡುವೆ ಸಾಕಷ್ಟು ವಾಗ್ವಾದ ನಡೆದು ವಿಕೋಪಕ್ಕೆ ಹೋದಾಗ ಲೋಕೇಶನೇ ಸೋತು ಮೌನವಹಿಸಿ ಮಾರನೆಯ ದಿನ ಸೋಮವಾರ ಮನೆಯಲ್ಲಿದ್ದ ಸ್ವಲ್ಪ ಹಣವನ್ನು ತೆಗೆದುಕೊಂಡು ತನ್ನ ಕಾರಿನಲ್ಲಿ ಚನ್ನಪಟ್ಟಣ ತಾಲ್ಲೂಕಿನ ಇರುಳಿಗರದೊಡ್ಡಿ ಗ್ರಾಮದಲ್ಲಿ ನಾಟಕ ನೋಡಲು ಬರುತ್ತಿದ್ದರಂತೆ. ಲೋಕೇಶ್ ತನ್ನ ಹೆಂಡತಿಯ ಅನೈತಿಕ ಸಂಬಂಧದ ಬಗ್ಗೆ ಸುಮ್ಮನಾದರೂ ಪತ್ನಿ ಚಂದ್ರಕಲಾ ಮಾತ್ರ ಸುಮ್ಮನೆ ಆಗಲಿಲ್ಲ. ಏಕೆಂದರೆ ಬೆಂಗಳೂರಿನಲ್ಲಿದ್ದ ಬೆಲೆಬಾಳುವ ಸೈಟು ಸುಮಾರು ಕೋಟಿಗಟ್ಟಲೆ ಬೆಲೆಯಿದ್ದ ಕಾರಣ ಕೆಲವು ಕಾರಣಾಂತರಗಳಿಂದ ಲೋಕೇಶ್ ಆ ಸೈಟ್ ಮಾರಾಟ ಮಾಡಲು ಮುಂದಾದಾಗ, ಲೋಕೇಶ್‌ಗೆ ಲಾಯರ್ ನೋಟಿಸ್ ಕಳುಹಿಸಿದ್ದ ಚಂದ್ರಕಲಾ ಮಾರಾಟ ಮಾಡಲು ಬಿಟ್ಟಿರಲಿಲ್ಲ. ಈ ವಿಚಾರದಲ್ಲೂ ಜಗಳಗಳು ಆಗಿದ್ದವಂತೆ. ಜೊತೆಗೆ ಚಂದ್ರಕಲಾಗೆ ಅಣ್ಣ-ತಮ್ಮ ಯಾರೂ ಇರಲಿಲ್ಲ. ಈಕೆಯ ಬಳಿ ಸುಮಾರು ಕೋಟಿಗಟ್ಟಲೆ ಆಸ್ತಿಯಿದೆ ಎಂಬುದು ತಿಳಿದು ಬಂದಿದೆ. ಈಕೆ ಹಣವಂತೆಯಾಗಿದ್ದಳು, ಗುಣವಂತೆಯಾಗಿರಲಿಲ್ಲ ಎಂಬುದಕ್ಕೆ ಮತ್ತೊಂದು ಸಾಕ್ಷಿ- 35 ವರ್ಷದ ಯುವಕನೊಂದಿಗೆ ಅನೈತಿಕ ಸಂಬಂಧ ಬೆಳೆಸಿದ್ದಳು ಎನ್ನಲಾಗಿದೆ. ಈತನಿಗೆ ಒಂದು ಬೈಕು ಕೊಡಿಸಿದ್ದಾಳಂತೆ ಎಂಬುದು ಗ್ರಾಮಸ್ಥರು ಹೇಳುತ್ತಾರೆ. ಈ ವಿಚಾರವು ತನ್ನ ಗಂಡ ಲೋಕೇಶ್‌ಗೆ ಗೊತ್ತಾದರೂ ಸಹ ಯಾರಿಗೂ ಹೇಳದೆ ಮರ್ಯಾದೆಗೆ ಅಂಜಿ ಸುಮ್ಮನಾಗಿರುತ್ತಾನೆ. ಚಂದ್ರಕಲಾನೂ ಕೋಟಿ ಕೋಟಿ ಇಟ್ಟಿದ್ದಳು. ಲೋಕೇಶ್‌ನು ಸಹ ಬೆಂಗಳೂರಿನಲ್ಲಿ 20 ಕೋಟಿ ಬೆಲೆಬಾಳುವ ಆಸ್ತಿ ಸಂಪಾದಿಸಿದ್ದ. ಈತ ಸಂಪಾದಿಸಿದ್ದ ಆಸ್ತಿ ಮಾರಾಟ ಮಾಡಿ ಬೇರೆಯವರಿಗೆ ಕೊಟ್ಟುಬಿಡುತ್ತಾನೆ ಎಂಬ ಆತಂಕದಲ್ಲಿ, ಆ 20 ಕೋಟಿ ಹಣ ಆಸ್ತಿಯನ್ನು ನಾನೇ ಅನುಭವಿಸಬೇಕು ಮತ್ತು ಪ್ರಿಯಕರರಾದ ಯೋಗೇಶ್ ಹಾಗೂ ವರಲಿಂಗನ ಜೊತೆಯಿದ್ದ ಅನೈತಿಕ ಸಂಬಂಧವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ತನ್ನ ಗಂಡ ಲೋಕೇಶ್‌ನನ್ನು ಕೊಲೆ ಮಾಡಿ, ಕೊಲೆ ವಿಚಾರ ಮರೆಮಾಚಲು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಬಿಂಬಿಸಲು ಸ್ಕೆಚ್ ಹಾಕಿಕೊಂಡಳು.

☞ 11


ಸುಫಾರಿ ಕಿಲ್ಲರ್ ಚಂದ್ರಕಲಾ


ಆರೋಪಿ ಚಂದ್ರಕಲಾಳ ಒಂದನೇ ಪ್ರಿಯಕರ ಯೋಗೇಶ್


ಆರೋಪಿ ಚಂದ್ರಕಲಾಳ ಎರಡನೇ ಪ್ರಿಯಕರ ವೀರಲಿಂಗ


ಸಿಪಿಐ ಪ್ರಕಾಶ್


ಪಿಎಸ್‌ಐ ಸಹನಾ ಪಾಟೀಲ್


ಮಾಕಲಿ ಗ್ರಾಮದಲ್ಲಿರುವ ಮೃತ ಲೋಕೇಶ್ ಮನೆ

# ಸೈಕೋ ಪ್ರಜ್ವಲ್‌ಗೆ ಲೈಫ್ ಟೈಂ ಜೈಲ್!



**ನಿಜವಾಗಿಯೂ ಇದು ಪ್ರಪಂಚವೇ ಖುಷಿಪಡುವ ಸುದ್ದಿ! ಕೆ.ಆರ್. ನಗರದ ಮನೆಗೆಲಸದ ವಯೋವೃದ್ಧ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವನಪರ್ಯಂತ ಜೈಲುವಾಸ ಹಾಗೂ 11.60 ಲಕ್ಷ ರೂ. ದಂಡ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಐತಿಹಾಸಿಕ ತೀರ್ಪು ಪ್ರಕಟಿಸಿದೆ! ವಿಕೃತಕಾಮಿ ಪ್ರಜ್ವಲ್ ವಿರುದ್ಧ ಇನ್ನೂ ಮೂರು ಪ್ರಕರಣ ಬಾಕಿ ಇದ್ದು, ಅವುಗಳ ತೀರ್ಪು ಇನ್ನಷ್ಟೇ ಬರಬೇಕಿದೆ....!!**

**✍ ಹೆಚ್.ಕೆ. ಮಹದೇವ್**

ಕೆ.ಆರ್. ನಗರದ ಮನೆಗೆಲಸದ ವಯೋವೃದ್ಧ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವನ ಪರ್ಯಂತ ಜೈಲು ಹಾಗೂ ಒಟ್ಟು 11.60 ಲಕ್ಷ ರೂ. ದಂಡ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಐತಿಹಾಸಿಕ ತೀರ್ಪು ಪ್ರಕಟಿಸಿದೆ. ತನ್ಮೂಲಕ ರಾಜ್ಯದ ಇತಿಹಾಸದಲ್ಲಿ ಮಾಜಿ ಸಂಸದನಂತಹ ರಾಜಕಾರಣಿಯೊಬ್ಬರು ಜೀವಾವಧಿ ಶಿಕ್ಷೆಗೆ ಗುರಿಯಾದ ಮೊದಲ ಪ್ರಕರಣ ದಾಖಲಾದಂತಾಗಿದೆ.

ಕೆ.ಆರ್. ನಗರದ ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಪ್ರಜ್ವಲ್ ಅಪರಾಧಿ ಎಂದು ಮಾನ್ಯ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಶುಕ್ರವಾರವೇ ತೀರ್ಪು ನೀಡಿದ್ದರು. ಮಾರನೇ ದಿವಸ ಶಿಕ್ಷೆಯ ಪ್ರಮಾಣವನ್ನು ಘೋಷಿಸುವುದಾಗಿ ತಿಳಿಸಿದ್ದು, ಅದರಂತೆ... ಶನಿವಾರ ಶಿಕ್ಷೆಯು ಪ್ರಮಾಣ ಪ್ರಕಟವಾಯಿತು. ಅಪರಾಧಿ ಪ್ರಜ್ವಲ್ ರೇವಣ್ಣಗೆ ಜೀವನ ಪರ್ಯಂತ ಜೈಲು ಶಿಕ್ಷೆಯಾಗಿದೆ!!


ಪ್ರಜ್ವಲ್ ರೇವಣ್ಣ ವಿರುದ್ಧ ಬಹಳಷ್ಟು ಸಾಕ್ಷಿಗಳಿವೆ ಆದ್ದರಿಂದ ಬಹುಷಃ ಹೈಕೋರ್ಟ್ ಮೊರೆ ಹೋದರೂ ಅಲ್ಲಿಯೂ ಬೇಲ್ ಸಿಗುವುದಿಲ್ಲ!! ಈ ತೀರ್ಪಿನಿಂದಾಗಿ ಕಳೆದ 14 ತಿಂಗಳಿಂದ ಜೈಲಿನಲ್ಲೇ ಇರುವ ಪ್ರಜ್ವಲ್ ರೇವಣ್ಣನಿಗೆ ಜೀವನಪರ್ಯಂತ ಜೈಲು ಶಿಕ್ಷೆ ಖಾಯಂ ಆಗಿದೆ! ದೇಶಾದ್ಯಂತ ಭಾರೀ ಚರ್ಚೆಗೆ ಗ್ರಾಸವಾಗಿದ್ದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಗ ಪ್ರಜ್ವಲ್ ರೇವಣ್ಣ ವಿರುದ್ಧದ ಈ ಗಂಭೀರ ಪ್ರಕರಣ ದಾಖಲಾದ ಕೇವಲ 14 ತಿಂಗಳೊಳಗೆ ವಿಚಾರಣೆ ಪೂರ್ಣಗೊಂಡು ಮಹತ್ವದ ತೀರ್ಪು ಹೊರಬಿದ್ದಿರೋದು ದಾಖಲೆಯಾಗಿದೆ! ನೆನಪಿರಲಿ, ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿರುವ ಮೂರು ಅತ್ಯಾಚಾರ ಪ್ರಕರಣಗಳ ಪೈಕಿ ಒಂದರಲ್ಲಿ ಮಾತ್ರ ತೀರ್ಪು-ಶಿಕ್ಷೆ ಪ್ರಕಟವಾಗಿದೆ!



ಹಿರಿಯ ನ್ಯಾಯವಾದಿ ಅಶೋಕ್ ನಾಯಕ್

### ಬಿಕ್ಕಿ ಬಿಕ್ಕಿ ಅತ್ತ ಪಾಪಿ ಪ್ರಜ್ವಲ್

ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಶಿಕ್ಷೆ ಪ್ರಕಟಿಸುವಾಗ ಕಟಕಟೆಯಲ್ಲಿ ಕೈ ಕಟ್ಟಿ ಸಪ್ಪೆ ಮೋರೆಯಲ್ಲಿ ನಿಂತಿದ್ದ ಪ್ರಜ್ವಲ್, ಜೀವನ ಪರ್ಯಂತ ಜೈಲು ಶಿಕ್ಷೆ ಎಂದು ನ್ಯಾಯಾಧೀಶರು ಘೋಷಿಸುತ್ತಿದ್ದಂತೆ ಬಿಕ್ಕಿ ಬಿಕ್ಕಿ ಕಣ್ಣೀರಿಟ್ಟ! ಕಣ್ಣೀರು ಸುರಿಸುತ್ತಲೇ ಜೈಲು ಅಧಿಕಾರಿಗಳೊಂದಿಗೆ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದತ್ತ ಪ್ರಯಾಣ ಬೆಳೆಸಿದ. ಇದಕ್ಕೂ ಮುನ್ನ ಶನಿವಾರ ಬೆಳಗ್ಗೆ ಜೈಲು ಅಧಿಕಾರಿಗಳು ಅಪರಾಧಿ ಪ್ರಜ್ವಲ್ ರೇವಣ್ಣನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾಗ, ನ್ಯಾಯಾಧೀಶರು ಶಿಕ್ಷೆಯ ಪ್ರಮಾಣ ಪ್ರಕಟಿಸುವ ಮುನ್ನ ಸಿಐಡಿ ಎಸ್‌ಐಟಿ ಪರ ಮತ್ತು ಪ್ರಜ್ವಲ್ ಪರ ವಕೀಲರಿಂದ ವಾದ-ಪ್ರತಿವಾದ ಆಲಿಸಿದ್ದರು.



ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್

### ಕಾನೂನಿನ ಅರಿವಿದ್ದೂ ಹೀನ ಕೃತ್ಯ!

ಮೊದಲಿಗೆ ಎಸ್‌ಐಟಿ ಪರ ಸರ್ಕಾರಿ ವಿಶೇಷ ಅಭಿಯೋಜಕ ಬಿ.ಎನ್. ಜಗದೀಶ್ ವಾದ ಮಂಡಿಸಿ, ಈ ಪ್ರಕರಣದಲ್ಲಿ ಸಂತ್ರಸ್ತೆಗೆ ಜೀವಕ್ಕಿಂತ ಹೆಚ್ಚಿನ ಹಾನಿಯಾಗಿದೆ. ಅಪರಾಧಿ ಪ್ರಜ್ವಲ್, ಅಮಾಯಕ ಮಹಿಳೆ ಮೇಲೆ ಬಲವಂತವಾಗಿ ಅತ್ಯಾಚಾರ ಮಾಡಿದ್ದಲ್ಲದೆ ಲೈಂಗಿಕ ಕ್ರಿಯೆಯನ್ನು ಚಿತ್ರೀಕರಣ ಮಾಡಿದ್ದಾನೆ. ಆಕೆಯನ್ನು ಬ್ಲಾಕ್‌ಮೇಲ್ ಮಾಡಿ ನಿರಂತರ ಅತ್ಯಾಚಾರ ಮಾಡಿದ್ದಾನೆ. ಅತ್ಯಾಚಾರದ ರೀತಿ ಆತನ ವಕ್ರ ಮನಸ್ಥಿತಿಯನ್ನು ತೋರಿಸುತ್ತದೆ. ಆತ ಸಂಸದನಾಗಿದ್ದೂ ಕಾನೂನಿನ ಅರಿವಿದ್ದರೂ ಇಂತಹ ದುಷ್ಕೃತ್ಯ ಎಸಗಿದ್ದಾನೆ. ಹೀಗಾಗಿ ಇದೊಂದು ಗಂಭೀರವಾದ ಪ್ರಕರಣವಾಗಿದೆ ಎಂದಿದ್ದರು.

### ಮಾಡಿದ ತಪ್ಪಿಗೆ ಪಶ್ಚಾತ್ತಾಪವೇ ಇಲ್ಲ!

ಈತನ ವಿರುದ್ಧ ಇದೇ ಮಾದರಿಯ ಹಲವು ಪ್ರಕರಣಗಳಿವೆ. ಬಹಳಷ್ಟು ಜನರ ಅಶ್ಲೀಲ ವಿಡಿಯೋ ಚಿತ್ರೀಕರಿಸಿದ್ದಾನೆ. ವಿಡಿಯೋ ಚಿತ್ರೀಕರಿಸುವುದು ಗಂಭೀರ ಅಪರಾಧವಾಗಿದೆ. ಹೀಗಾಗಿ ಅಪರಾಧಿ ಪ್ರಜ್ವಲ್ಗೆ ಗರಿಷ್ಠ ಶಿಕ್ಷೆ ವಿಧಿಸಬೇಕು. ಈ ಮೂಲಕ ಇದು ಇತರರಿಗೆ ಎಚ್ಚರಿಕೆಯಾಗುವಂತೆ ನೋಡಿಕೊಳ್ಳಬೇಕು. ಜೀವನ ಪರ್ಯಂತ ಸೆರೆವಾಸದ ಶಿಕ್ಷೆ ವಿಧಿಸಬೇಕು. ಸಾಕ್ಷ್ಯ ನಾಶಪಡಿಸಲು ಯತ್ನಿಸಿರುವುದೂ ಗಂಭೀರ ಅಪರಾಧ. ಈತ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಭಾವ ಹೊಂದಿಲ್ಲ. ಹೀಗಾಗಿ ಈತನಿಗೆ ಕಠಿಣ ಶಿಕ್ಷೆ ಒದಗಿಸಿ ಸಮಾಜಕ್ಕೆ ಸಂದೇಶ ನೀಡಬೇಕು ಎಂದು ಮನವಿ ಮಾಡಿದ್ದರು.

### ಸಂಸದನಾಗಿ ಈತ ಮಾಡಿದ್ದೇನು?

ಇದೇ ವೇಳೆ ಸಿಐಡಿ ಎಸ್‌ಐಟಿ ಪರ ಸರ್ಕಾರಿ ವಿಶೇಷ ಅಭಿಯೋಜಕ ಅಶೋಕ್ ನಾಯಕ್ ವಾದ ಮಂಡಿಸಿ, ಸಂಸದರೇ ಇಂತಹ ಹೀನ ಕೃತ್ಯ ಮಾಡಿರುವುದರಿಂದ ಗರಿಷ್ಠ ಶಿಕ್ಷೆ ವಿಧಿಸಬೇಕು. ಅಪರಾಧಿ ಪ್ರಜ್ವಲ್ ಕಿರಿಯ ವಯಸ್ಸಿಗೆ ರಾಜಕಾರಣಿಯಾಗಿ ಸಂಸದನಾಗಿದ್ದ. ಈತನನ್ನು ಜನ ಆಯ್ಕೆ ಮಾಡಿದ್ದು ಏಕೆ? ಈತ ಮಾಡಿದ್ದೇನು ಎಂಬುದನ್ನು ಗಮನಿಸಬೇಕು. ಈತನಿಗೆ ವಿಧಿಸುವ ಶಿಕ್ಷೆ ಸಮಾಜಕ್ಕೆ ಸಂದೇಶವಾಗಬೇಕು ಎಂದು ಮನವಿ ಮಾಡಿದ್ದರು.



ಸಿಂಹಿಣಿಯರಾದ ಸೀಮಾ ಲಾಟ್ಕರ್, ಸುಮನ್

ಜೀವಾವಧಿ ಶಿಕ್ಷೆ ಜತೆಗೆ ಅತಿ ಹೆಚ್ಚು ದಂಡ ವಿಧಿಸಬೇಕು. ಹಿಂದೆ ಪ್ರಕರಣವೊಂದರಲ್ಲಿ 25 ಲಕ್ಷ ರೂ. ದಂಡ ವಿಧಿಸಿದ ಉದಾಹರಣೆ ಇದೆ. ಇಲ್ಲಿ ಪ್ರಜ್ವಲ್ ಬಡವನಲ್ಲ, ಕೋಟ್ಯಧಿಪತಿ. ಹೀಗಾಗಿ ಹೆಚ್ಚಿನ ದಂಡ ವಿಧಿಸಿ, ಅದರ ದೊಡ್ಡ ಭಾಗವನ್ನು ಸಂತ್ರಸ್ತೆಗೆ ನೀಡಬೇಕು. ಏಕೆಂದರೆ, ವಿಡಿಯೋ ವೈರಲ್ ಆಗಿರುವುದರಿಂದ ಆಕೆ ದುಡಿಯಲು ಎಲ್ಲೂ ಹೋಗದಂತಹ ಸ್ಥಿತಿ ಇದೆ. ಹೀಗಾಗಿ ಆಕೆಗೆ ಪರಿಹಾರದ ಅಗತ್ಯವಿದೆ ಎಂದು ಅಶೋಕ್ ನಾಯಕ್ ತಮ್ಮ ವಾದ



ಅಪರಾಧಿ ಪ್ರಜ್ವಲ್‌ನ ಮಾತಾಪಿತರು ಹಾಗೂ ಆರೋಪಿಗಳಾದ ಶ್ರೀ ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ

☞ 6

## ಅಪರಾಧಿಗೆ ಯಾವ ಸೆಕ್ಷನ್ ಅಡಿ ಎಷ್ಟು ಶಿಕ್ಷೆ ಮತ್ತು ದಂಡ?

* ಐಪಿಸಿ ಸೆಕ್ಷನ್ 376 (2)(ಕೆ)- ಅತ್ಯಾಚಾರ-ಜೀವಾವಧಿ ಶಿಕ್ಷೆ ಹಾಗೂ 5 ಲಕ್ಷ ರೂ. ದಂಡ.

* ಐಪಿಸಿ ಸೆಕ್ಷನ್ 376(2)(ಎನ್)- ಸಾರ್ವಜನಿಕ ಸೇವಕ ಅಧಿಕಾರ ದುರ್ಬಳಕೆ ಮಾಡಿ ಅತ್ಯಾಚಾರ- ಜೀವನಪರ್ಯಂತ ಜೈಲು, 5 ಲಕ್ಷ ರೂ. ದಂಡ.

* ಐಪಿಸಿ ಸೆಕ್ಷನ್ 354(ಎ)-ಲೈಂಗಿಕ ಕಿರುಕುಳ, ಬಲವಂತದ ದೈಹಿಕ ಸಂಪರ್ಕ- 3 ವರ್ಷ ಜೈಲು, 25 ಸಾವಿರ ರೂ. ದಂಡ.

* ಐಪಿಸಿ ಸೆಕ್ಷನ್ 354 (ಬಿ)- ಬಲವಂತದಿಂದ ವಿವಸ್ತ್ರಗೊಳಿಸುವುದು- 7 ವರ್ಷ ಜೈಲು, 50 ಸಾವಿರ ರೂ. ದಂಡ.

* ಐಪಿಸಿ ಸೆಕ್ಷನ್ 354 (ಸಿ)- ಮಹಿಳೆಯ ಖಾಸಗಿ ಚಿತ್ರ ಸೆರೆ ಹಿಡಿಯುವುದು- 3 ವರ್ಷ ಜೈಲು, 25 ಸಾವಿರ ರೂ. ದಂಡ.

* ಐಪಿಸಿ ಸೆಕ್ಷನ್ 506- ಕ್ರಿಮಿನಲ್ ಬೆದರಿಕೆ- 2 ವರ್ಷ ಜೈಲು, 10 ಸಾವಿರ ರೂ . ದಂಡ.

* ಐಪಿಸಿ ಸೆಕ್ಷನ್ 201- ಸಾಕ್ಷ್ಯ ನಾಶ- 3 ವರ್ಷ ಜೈಲು 25 ಸಾವಿರ ರೂ.ದಂಡ.

* ಐಟಿ ಕಾಯ್ದೆ ಸೆಕ್ಷನ್ 66(ಇ)- ವ್ಯಕ್ತಿಯ ಗೌಪ್ಯತೆ ಉಲ್ಲಂಘನೆ- 3 ವರ್ಷ ಜೈಲು, 25 ಸಾವಿರ ರೂ. ದಂಡ.

ಅಂದಹಾಗೆ, ಪ್ರಜ್ವಲ್ ರೇವಣ್ಣ ವಿರುದ್ಧ ಇನ್ನೂ ಎರಡು ರೇಪ್ ಕೇಸ್ ಬಾಕಿ ಇವೆ! ಹೊಳೆನರಸಿಪುರದ ಮನೆಯಲ್ಲಿ ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಮಾಡಿದ ಸಂಬಂಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಪಂ ಮಾಜಿ ಸದಸ್ಯೆ ಮೇಲೆ ಅತ್ಯಾಚಾರ ಮಾಡಿದ ಆರೋಪದಡಿ ಸಿಐಡಿ ಸೈಬರ್ ಕ್ರೈಂ ಪೊಲೀಸ್ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಎರಡೂ ಪ್ರಕರಣಗಳ ತನಿಖೆ ನಡೆಸಿರುವ ಎಸ್‌ಐಟಿ ಅಧಿಕಾರಿಗಳು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ. ಈ ಎರಡೂ ಪ್ರಕರಣಗಳು ಹಾಗೂ ಸಿ.ಡಿ. ಹಂಚಿಕೆ ಪ್ರಕರಣ ವಿಚಾರಣೆಯ ಹಂತದಲ್ಲಿವೆ. ಈ ವರ್ಷಾಂತ್ಯದೊಳಗೆ ವಿಚಾರಣೆ ಪೂರ್ಣಗೊಂಡು ತೀರ್ಪು ಹೊರಬೀಳುವ ಸಾಧ್ಯತೆಯಿದೆ... ☯

5 ☞
ಮಂಡಿಸಿದ್ದರು.

**ಪ್ರಜ್ವಲ್ ಜನ ಸೇವೆ ಮಾಡಿದ್ದಾನೆ!**

ನಂತರ ಪ್ರಜ್ವಲ್ ರೇವಣ್ಣ ಪರ ವಾದ ಮಂಡಿಸಿದ ಹಿರಿಯ ವಕೀಲೆ ನಳಿನಿ ಮಾಯೇಗೌಡ, ಸರ್ಕಾರಿ ವಿಶೇಷ ಅಭಿಯೋಜಕರು ಸಮಾಜಕ್ಕೆ ಸಂದೇಶ ನೀಡಬೇಕು ಎಂದು ವಾದಿಸಿದ್ದಾರೆ, ಯುವ ಸಂಸದನಾಗಿ ಪ್ರಜ್ವಲ್ ಜನಸೇವೆ ಮಾಡಿದ್ದಾನೆ! ಹಣ ಮಾಡಲು ಆತ ರಾಜಕಾರಣಕ್ಕೆ ಬಂದಿಲ್ಲ! 2024ರ ಲೋಕಸಭಾ ಚುನಾವಣೆ ವೇಳೆಯೇ ವಿಡಿಯೋಗಳನ್ನು ವೈರಲ್ ಮಾಡಲಾಗಿದೆ. ಇದು ಪ್ರಜ್ವಲ್ ವಿರುದ್ಧದ ರಾಜಕೀಯ ಪ್ರೇರಿತ ಕ್ರಮ. ರಾಜಕೀಯ ಸ್ಥಾನಮಾನ ಶಿಕ್ಷೆಯ ಪ್ರಮಾಣ ನಿರ್ಧರಿಸುವಂತಾಗಬಾರದು. ಹಾಗೆ ಮಾಡಿದರೆ, ಇಷ್ಟು ದಿನದ ಒಳ್ಳೆ ಹೆಸರು ಏನಾಗಬೇಕು ಎಂದು ಪ್ರಶ್ನಿಸಿದ್ದರು!


ಎಸ್ಐಟಿ ಚೀಫ್ ಎಡಿಜಿಪಿ ಬಿ.ಕೆ. ಸಿಂಗ್ ಪತ್ರಿಕಾಗೋಷ್ಠಿ


ವಕೀಲರೊಂದಿಗೆ ವಾಗ್ವಾದ?!

ತಮ್ಮ ವಾದ ಮುಂದುವರೆಸಿ, ಪ್ರಜ್ವಲ್ ವಯಸ್ಸು ಕೇವಲ 34. ಸಂತ್ರಸ್ತೆ ಸಮಾಜದಿಂದ ತಿರಸ್ಕೃತಗೊಂಡಿಲ್ಲ, ಆಕೆ ತನ್ನ ಸಂಸಾರದೊಂದಿಗೆ ಎಂದಿನಂತೆ ಜೀವನ ಸಾಗಿಸುತ್ತಿದ್ದಾರೆ. ಆಕೆಗೆ ವಿವಾಹವಾಗಿ ಮಕ್ಕಳಾಗಿವೆ. ಜೀವನ ನಡೆಯುತ್ತಿದೆ. ಪ್ರಜ್ವಲ್ ಇನ್ನೂ ಯುವಕನಾಗಿದ್ದು, ಆತನ ಭವಿಷ್ಯವನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದ್ದರು.

**ವಿಶೇಷ ಅಭಿಯೋಜಕರ ಅಬ್ಜೆಕ್ಷನ್**

ಈಗಾಗಲೇ ಮಾಧ್ಯಮಗಳಲ್ಲಿ ಆತನ ತೇಜೋವಧೆಯಾಗಿದೆ. ಬಂಧನವಾದಂದಿನಿಂದಲೂ ಆತ ಜೈಲಿನಲ್ಲಿದ್ದಾನೆ. ಆತನಿಗೆ ವಯಸ್ಸಾದ ತಂದೆ-ತಾಯಿ ಇದ್ದಾರೆ. ತಾತ ಮಾಜಿ ಪ್ರಧಾನಿಯಾಗಿದ್ದಾರೆ. ಹೀಗಾಗಿ ಆತನ ರಾಜಕೀಯ ಸ್ಥಾನಮಾನ ತೀವ್ರ ಶಿಕ್ಷೆಗೆ ಕಾರಣವಾಗಬಾರದು. ಇಲ್ಲಿ ಸಂತ್ರಸ್ತೆಗಿಂತ ಅಪರಾಧಿಗೆ ಹೆಚ್ಚಿನ ಹಾನಿಯಾಗಿದೆ ಎಂದು ವಾದಿಸಿದರು. ಇದಕ್ಕೆ ಎಸ್ಪಿಪಿ ಬಿ.ಎನ್.ಜಗದೀಶ್ ಆಕ್ಷೇಪ ವ್ಯಕ್ತಪಡಿಸಿದ್ದರು.

**ಆಗಲೇ ಏಕೆ ಯಾರಿಗೂ ಹೇಳಲಿಲ್ಲ?**

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಧೀಶರು ಕಟಕಟೆಯಲ್ಲಿ ನಿಂತಿದ್ದ ಪ್ರಜ್ವಲ್‌ಗೆ ಕೊನೆಯದಾಗಿ ಏನಾದರೂ ಹೇಳುವಿರಾ? ಎಂದು ಕೇಳಿದರು. ಆಗ ಇಂಗ್ಲಿಷ್ನಲ್ಲಿ ಮಾತು ಆರಂಭಿಸಿದ ಪ್ರಜ್ವಲ್ ರೇವಣ್ಣ, ನಾನು ಹಲವು ಮಹಿಳೆಯರೊಂದಿಗೆ ಇಂತಹ ಕೃತ್ಯ ನಡೆಸಿದ್ದೇನೆ ಎಂದು ಆರೋಪಿಸಿದ್ದಾರೆ. ನಾನು ಸಂಸದನಾಗಿದ್ದಾಗ ಯಾರೂ ಇಂತಹ ಆರೋಪ ಮಾಡಲಿಲ್ಲ, ನಾನು ರೇಪ್ ಮಾಡಿದ್ದರೆ ಆಗಲೇ ಏಕೆ ಅವರು ಯಾರಿಗೂ ಹೇಳಲಿಲ್ಲ? ಚುನಾವಣೆ ಸಮಯದಲ್ಲಿ ಪೊಲೀಸರೇ ನನ್ನ ವಿರುದ್ಧ ಇಷ್ಟೆಲ್ಲಾ ಮಾಡಿದ್ದಾರೆ..... ಎಂದು ಆರೋಪಿಸಿ, ಈಗ ನ್ಯಾಯಾಲಯ ಏನೇ ತೀರ್ಮಾನ ಕೈಗೊಂಡರೂ ನಾನು ಒಪ್ಪಿಕೊಳ್ಳುತ್ತೇನೆ ಎಂದು ಕೈ ಮುಗಿದಿದ್ದ!!

**ನಾನು ಮೆರಿಟ್ ಸ್ಟೂಡೆಂಡ್?!**

ಅಲ್ಲದೆ, ಕಣ್ಣೀರುಡುತ್ತಾ... ಇಂಗ್ಲಿಷ್ ಬಿಟ್ಟು ಕನ್ನಡದಲ್ಲಿ ಮಾತು ಮುಂದುವರೆಸಿದ ಪ್ರಜ್ವಲ್, ನಾನು ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದಿದ್ದೇನೆ. ನಾನು ಮೆರಿಟ್ ವಿದ್ಯಾರ್ಥಿಯಾಗಿದ್ದೆ. ಇಷ್ಟಕ್ಕೆಲ್ಲ ನಾನು ರಾಜಕೀಯದಲ್ಲಿ ಬೇಗ ಬೆಳೆದಿದ್ದೇ ಕಾರಣ. ಕಳೆದ ಆರು ತಿಂಗಳಿಂದ ತಂದೆ-ತಾಯಿಯನ್ನು ನೋಡಿಲ್ಲ.... ಎಂದು ಗಳಗಳನೆ ಅತ್ತಿದ್ದ ಪ್ರಜ್ವಲ್! ಇಷ್ಟೆಲ್ಲಾ ಹೈ ಡ್ರಾಮಾ ನಡೆದರೂ, ಸೂಕ್ತ ಸಾಕ್ಷ್ಯಾಧಾರಗಳನ್ನು ಅದಾಗಲೇ ಪರಿಶೀಲಿಸಿದ್ದ ಮಾನ್ಯ ನ್ಯಾಯಮೂರ್ತಿಗಳು ನ್ಯಾಯವನ್ನೇ ಎತ್ತಿ ಹಿಡಿದರು. ಅಪರಾಧಿ ಪ್ರಜ್ವಲ್‌ಗೆ ಕಠಿಣ ಶಿಕ್ಷೆಯನ್ನೇ ವಿಧಿಸಿದರು....


ವಿದೇಶದಿಂದ ಬಂದು ಲಾಕ್ ಆದಾಗ

## ಚೂರು ಫ್ಲಾಷ್ ಬ್ಯಾಕ್...

ಕಳೆದ ಲೋಕಸಭಾ ಚುನಾವಣೆ ವೇಳೆ ಅಂದಿಗೆ ಹಾಸನದ ಸಂಸದರಾಗಿದ್ದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯದ ಹಲವು ವಿಡಿಯೋಗಳು ಹಾಗೂ ಅಶ್ಲೀಲ ಫೋಟೋಗಳು ಸಾಮಾಜಿಕ ತಾಲತಾಣದಲ್ಲಿ ವೈರಲ್ ಆಗಿದ್ದವು. ಈ ವಿಡಿಯೋಗಳ ಪೈಕಿ ಕೆ.ಆರ್.ನಗರ ಮೂಲದ 48 ವರ್ಷದ ಸಂತ್ರಸ್ತೆಯ ಖಾಸಗಿ ವಿಡಿಯೋ ಸಹ ಇತ್ತು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ಹಾಸನದ ಈ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆಗೆ ಎಸ್ಐಟಿ ರಚಿಸಿತ್ತು. ವಿಡಿಯೋ ವೈರಲ್ ಬೆನ್ನಲ್ಲೇ ಸಂತ್ರಸ್ತೆ ಮನೆಯಿಂದ ನಾಪತ್ತೆಯಾಗಿದ್ದರು. ಈ ವೇಳೆ ಸಂತ್ರಸ್ತೆ ಪುತ್ರ 2024ರ ಮೇ 2ರಂದು ಕೆ.ಆರ್. ನಗರ ಪೊಲೀಸ್ ಠಾಣೆಗೆ ಮಾಜಿ ಸಚಿವ ಎಚ್.ಡಿ. ರೇವಣ್ಣ ಮತ್ತು ಸಂಬಂಧಿ ಸತೀಶ್ ಬಾಬಣ್ಣ ವಿರುದ್ಧ ಅಪಹರಣ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣ ಭೇದಿಸಿದ ಎಸ್ಐಟಿ ಪೊಲೀಸರು ಸಂತ್ರಸ್ತೆಯನ್ನು ರಕ್ಷಿಸಿದ್ದರು.

ವಿಚಾರಣೆ ವೇಳೆ ಸಂತ್ರಸ್ತೆ ಸಂಸದ ಪ್ರಜ್ವಲ್ ರೇವಣ್ಣ 2021ರ ಕೊರೋನಾ ಸಮಯದಲ್ಲಿ ಹೊಳೆನರಸೀಪುರದ ಗನ್ನಿಕಡದ ತೋಡದ ಮನೆ ಹಾಗೂ ಬೆಂಗಳೂರಿನ ಬಸವನಗುಡಿಯ ಮನೆಯಲ್ಲಿ8 ತನ್ನ ಮೇಲೆ ಹಲವು ಬಾರಿ ಅತ್ಯಾಚಾರ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಅತ್ಯಾಚಾರದ ಜೊತೆಗೆ ಬೆದರಿಸಿ ವಿಡಿಯೋ ಸಹ ಚಿತ್ರೀಕರಿಸಿದ್ದರು ಎಂದು ಗಂಭೀರ ಆರೋಪ ಮಾಡಿದ್ದರು. ಈ ಸಂಬಂಧ ಸಿಐಡಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ಪ್ರಕರಣ ದಾಖಲಾಗಿತ್ತು. ಬಳಿಕ ಎಸ್ಐಟಿ ತನಿಖಾಧಿಕಾರಿಗಳು ಬಾಡಿ ವಾರೆಂಟ್ ಮೇಲೆ ಆರೋಪಿ ಪ್ರಜ್ವಲ್ ರೇವಣ್ಣ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.

ಬಳಿಕ ತನಿಖೆ ಪೂರ್ಣಗೊಳಿಸಿ ಸಂತ್ರಸ್ತೆ ಹೇಳಿಕೆ, ಆರೋಪಿ ಹೇಳಿಕೆ, 113 ಸಾಕ್ಷಿಗಳು, ಸಾಂದರ್ಭಿಕ ಸಾಕ್ಷಿಗಳು, ಡಿಜಿಟಲ್ ಸಾಕ್ಷಿಗಳು, ಎಫ್ಎಸ್ಎಲ್ ವರದಿ, ತಾಂತ್ರಿಕ ಸಾಕ್ಷಿಗಳು ಒಳಗೊಂಡಂತೆ ಸುಮಾರು 2 ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.


ಇದೀಗ ತೀರ್ಪು ಬಂದಾಗಿದೆ. ಅತ್ಯಾಚಾರ ಪ್ರಕರಣದಲ್ಲಿ ಜೀವನ ಪರ್ಯಂತ ಜೈಲು ಶಿಕ್ಷೆಗೆ ಗುರಿಯಾಗಿರುವ ಪ್ರಜ್ವಲ್ ರೇವಣ್ಣಗೆ ಮುಂದೆ ಸನ್ನಡತೆ ಆಧಾರದಡಿ ಬಿಡುಗಡೆಯಾಗುವ ಭಾಗ್ಯವೂ ಇಲ್ಲ! ಏಕೆಂದರೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸನ್ನಡತೆ ಅನ್ವಯವಾಗುವುದಿಲ್ಲ!! ಹೀಗಾಗಿ ಪ್ರಜ್ವಲ್‌ಗೆ ಜೀವನ ಪೂರ್ತಿ ಜೈಲು ಖಾಯಮ್ಮು!

## ಪೆನ್ ಡ್ರೈವ್ ಹಂಚಿದವರಿಗೂ ಕಾದಿದೆ ಮಾರಿಹಬ್ಬ...



ಈ ಪ್ರಕರಣದಲ್ಲಿ ಸಾಕ್ಷಿಗಳಲ್ಲದೆ, ಸಂತ್ರಸ್ತ ಮಹಿಳೆ (ಮನೆಗೆಲಸದವರು) ಬಂಡೆಯಂತೆ ನಮ್ಮೊಂದಿಗೆ ದಿಟ್ಟವಾಗಿ ನಿಂತದ್ದು, ಅಪರಾಧಿಗೆ ಶಿಕ್ಷೆ ಆಗುವುದಕ್ಕೆ ಸಹಕಾರಿಯಾಯಿತು... ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಬಿ.ಕೆ. ಸಿಂಗ್ ಅವರು ಹೇಳಿದ್ದಾರೆ. ಶನಿವಾರ ಅತ್ಯಾಚಾರಿ ಪ್ರಜ್ವಲ್ ರೇವಣ್ಣನಿಗೆ ಜೀವಾವಧಿ ಶಿಕ್ಷೆ ತೀರ್ಪು ಪ್ರಕಟಗೊಂಡ ಬಳಿಕ, ಸಂಜೆ ಸಿಐಡಿ ಕಚೇರಿಯಲ್ಲಿ ಪ್ರಕರಣದ ತೀರ್ಪಿನ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡೈನಾಮಿಕ್ ಆಫೀಸರ್ ಬಿ.ಕೆ ಸಿಂಗ್, ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಐದು ಪ್ರಕರಣಗಳ ತನಿಖೆ ನಡೆಸುವಂತೆ ರಾಜ್ಯ ಸರ್ಕಾರವು ವಿಶೇಷ ತನಿಖಾ ದಳಕ್ಕೆ (ಎಸ್ಐಟಿ) ಆದೇಶಿಸಿತ್ತು. ಈ ಒಂದು ಪ್ರಕರಣದಲ್ಲಿ ಸಂತ್ರಸ್ತೆ ಎಲ್ಲಿಯೂ ತನ್ನ ಹೇಳಿಕೆಯನ್ನು ಬದಲಿಸಲಿಲ್ಲ! ಸಂತ್ರಸ್ತೆಯನ್ನು ಮೂರು ದಿನ ವಿಚಾರಣೆ ನಡೆಸಲಾಯಿತು. ಅಪರಾಧಿ ಪ್ರಜ್ವಲ್ ರೇವಣ್ಣ ಪರ ವಕೀಲರು ಸತತ ಎರಡು ದಿನಗಳ ಕಾಲ, ಸುಧೀರ್ಘ ಎಂಟು ತಾಸು ಪ್ರಶ್ನೆ ಕೇಳಿದ್ದರು! ಸಂತ್ರಸ್ತೆ ಉದ್ವೇಗ, ಆತಂಕಕ್ಕೆ ಒಳಗಾಗದೇ ಧೈರ್ಯದಿಂದ ನಡೆದ ಘಟನೆಯನ್ನು ನ್ಯಾಯಾಧೀಶರ ಎದುರು ವಿವರಿಸಿದ್ದರು!

ಸಂತ್ರಸ್ತೆಯು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬಲಾಢ್ಯರಲ್ಲ, ಆದರೆ ಅಪರಾಧಿ ಆರ್ಥಿಕವಾಗಿ ಬಲಾಢ್ಯನಿದ್ದ! ರಾಜಕೀಯ ಪ್ರಭಾವ ಇತ್ತು. ಈ ವ್ಯತ್ಯಾಸವಿದ್ದರೂ ತನಗೆ ನ್ಯಾಯ ಬೇಕೇ ಬೇಕೆಂದು ಒಂದು ವರ್ಷದಿಂದ ಪ್ರಾಸಿಕ್ಯೂಷನ್ ಜತೆಗೆ ಆಕೆ ಧೈರ್ಯದಿಂದ ನಿಂತಿದ್ದರು! ತೀರ್ಪು ವಿಳಂಬವಾಗಿ ಬರುವಂತೆ ಮಾಡಲು ಕೆಲವರು ಷಡ್ಯಂತ್ರ ಮಾಡಿದ್ದರು ಕೂಡ!



ಅಂತೂ ಸತ್ಯಕ್ಕೆ ಜಯಸಂದಾಯವಾಗಿದೆ. ಸಂತ್ರಸ್ತೆಗೆ ನ್ಯಾಯ ಕೊಡಿಸಿದ ತೃಪ್ತಿ ನಮಗೆ ಐಮೀನ್ ತನಿಖಾ ತಂಡಕ್ಕಿದೆ. ಪ್ರಕರಣದಲ್ಲಿ ಮಹಿಳಾ ಅಧಿಕಾರಿಗಳಾದ ಸೀಮಾ ಲಾಟ್ಕರ್, ಸುಮನ್ ಡಿ. ಪನ್ನೇಕರ್ ಹಾಗೂ ಬೆಂಗಳೂರು ಪೂರ್ವ ವಿಭಾಗದ ಮಹಿಳಾ ಠಾಣೆಯ ಇನ್ಸ್ಪೆಕ್ಟರ್ ಎನ್.ಶೋಭಾ ಅವರು ಸಾಕಷ್ಟು ಪರಿಶ್ರಮದೊಂದಿಗೆ ತನಿಖೆ ನಡೆಸಿದ್ದರು ಎಂದು ಎಲ್ಲರಿಗೂ ಪ್ರಶಂಸಿಸಿದರು. ತನಿಖಾಧಿಕಾರಿ (ಐ.ಓ.) ಶೋಭಾ ತನಿಖೆಯ ನೇತೃತ್ವ ವಹಿಸಿದ್ದರು.

ಹಿರಿಯ ಅಧಿಕಾರಿ ಸುಮನ್ ಅದನ್ನು ಮೇಲ್ವಿಚಾರಣೆ ಮಾಡಿದರು. ಅಧಿಕಾರಿ ಮಮತಾ ತನಿಖೆಯಲ್ಲಿ ಸಹಾಯ ಮಾಡುವುದಲ್ಲದೆ ನ್ಯಾಯಾಲಯದ ವಿಚಾರಣೆಗಳನ್ನು ಸಹ ನಿರ್ವಹಿಸಿದರು. ಬಂಧನದಿಂದ ವಿಚಾರಣೆಯವರೆಗೆ, ಅವರು ಈ ಪ್ರಕರಣದ ಪ್ರಮುಖ ಆಧಾರಕರಾಗಿದ್ದರು. ಸಿಐಡಿ ಸೈಬರ್ ಅಪರಾಧ ಠಾಣೆಯಲ್ಲಿ ಮೂರು, ಹಾಸನ ಜಿಲ್ಲೆಯ ಹೊಳೆನರಸೀಪುರ ಹಾಗೂ ಮೈಸೂರಿನ ಕೆ.ಆರ್.ನಗರ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದ್ದವು. ಒಂದು ಪ್ರಕರಣದಲ್ಲಿ ತೀರ್ಪು ಬಂದಿದೆ. ಉಳಿದ ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ... ಎಂದು ಹೇಳಿದರು.


ಘಟನೆ ನಡೆದ ನಾಲ್ಕು ವರ್ಷದ ಬಳಿಕ ನಮಗೆ ಕೇಸ್ ಕೊಡಲಾಗಿತ್ತು. ಸಾಕ್ಷಿಗಳನ್ನ ನೀಡಿ, ಸರಿಯಾಗಿ ಕೆಲಸ ಮಾಡಿದ್ದಕ್ಕೆ ಶಿಕ್ಷೆ ಕೊಡಿಸಲು ಸಾಧ್ಯವಾಯಿತು. ಅಪರಾಧಿಗೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡುವ ಅವಕಾಶವಿದೆ. ಪ್ರಕರಣದಲ್ಲಿ ನಮಗೆ ಯಾವುದೇ ರಾಜಕೀಯ ಒತ್ತಡ ಇರಲಿಲ್ಲ, ಸರ್ಕಾರದ ಕೆಲಸವನ್ನ ಪ್ರಾಮಾಣಿಕವಾಗಿ ಮಾಡಿದ್ದೇವೆ. ಸರ್ಕಾರದ ಅಧಿಕಾರಿಗಳಾಗಿ ನಮ್ಮ ಕೆಲಸ ಮಾಡಿದ್ದೇವೆ. ನಮ್ಮ ಚಾರ್ಜ್‌ಶೀಟ್ ಕೋರ್ಟ್ ಎತ್ತಿ ಹಿಡಿದಿದೆ. ಹಾಗಾಗಿ, ನಮಗೆ ಹೆಮ್ಮೆ ಆಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪೊಲೀಸರು 100 ಕ್ಕೂ ಹೆಚ್ಚು ಲ್ಯಾಪ್‌ಟಾಪ್‌ಗಳು, ಮೊಬೈಲ್ ಫೋನ್‌ಗಳು ಮತ್ತು ಪೆನ್‌ಡ್ರೈವ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಮುಂದಿನ ಎರಡು ವಾರದಲ್ಲಿ ಪೆನ್‌ಡ್ರೈವ್ ಹಂಚಿಕೆ ಮಾಡಿದ ಪ್ರಕರಣದ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗುತ್ತದೆ. ಅದರಲ್ಲಿ ಯಾರೆಲ್ಲ ಆರೋಪಿಗಳಿದ್ದಾರೆ ಅನ್ನೋದು ನಿಮಗೆ ತಿಳಿಯುತ್ತೆ ಎಂದರು! ಅಲ್ಲಿಗೆ, ಊರು ಕೇರಿ ಇತರೆ ಕಡೆಗೆ ಪೆನ್ ಡ್ರೈವ್ ಹಂಚಿ ವಿಕೃತಿ ಮೆರೆದವರಿಗೂ ಕಾದಿದೆ.... ಮಾರಿ ಹಬ್ಬ ಎಂಬುದು ನಿಕ್ಕಿ ಯಾಗಿದೆ!!

# ಕನಕಪುರ ಬಿಎಸ್ಎಸ್ ಮೈಕ್ರೋ ಫೈನಾನ್ಸ್ ಸಿಬ್ಬಂದಿ ದರ್ಶನ್ ಆತ್ಮಹತ್ಯೆಯೋ? ಕೊಲೆಯೋ?

**ಕನಕಪುರ**

✍ ಶಾಂತರಾಜು ಜಿ. ಕಲ್ಲಹಳ್ಳಿ



ಮೃತ ದರ್ಶನ್ ಆರ್. ಬದುಕಿದ್ದಾಗ

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಅವಳಿಗಳಿಂದ ಅಂದರೆ ಈ ಮೈಕ್ರೋ ಫೈನಾನ್ಸ್‌ಗಳು ಗ್ರಾಮೀಣ ಭಾಗದ ಜನರನ್ನೇ ಟಾರ್ಗೆಟ್ ಮಾಡಿಕೊಂಡು ರೈತರು ಮತ್ತು ಬಡಜನರಿಗೆ ಆ ಲೋನ್, ಈ ಲೋನ್ ಅಂತ ಹೇಳಿ ಕಡಿಮೆ ಬಡ್ಡಿಯ ನೆಪವೊಡ್ಡಿ, ಕೆಲವು ಇವರಿಗೆ ಬೇಕಾದ ನಿಯಮಗಳ ಪೇಪರ್‌ಗಳಿಗೆ ಸಹಿ ಹಾಕಿಸಿಕೊಂಡು 50 ಸಾವಿರದಿಂದ ಲಕ್ಷಗಟ್ಟಲೆ ಲೋನ್‌ನಲ್ಲಿ ಹಣ ಕೊಡುತ್ತಿದ್ದು, ಆ ಹಣ ವಸೂಲಿ ಮಾಡಲು ಮೈಕ್ರೋ ಫೈನಾನ್ಸ್ ಸಿಬ್ಬಂದಿಯವರನ್ನು ಪದೇ ಪದೇ ಲೋನ್ ಪಡೆದವರ ಮನೆ ಬಾಗಿಲಿಗೆ ಹೋಗಿ ಹಣ ವಸೂಲಿ ಮಾಡುತ್ತಿದ್ದರು. ಕೂಲಿನಾಲಿ ಮಾಡಿ ಕೆಲವರು ಹಣ ಕಟ್ಟುತ್ತಿದ್ದರು. ಇನ್ನೂ ಕೆಲವರು ಅವರವರ ಕುಟುಂಬ ಸಮಸ್ಯೆಗಳಿಂದಾಗಿ ಹಣ ಕಟ್ಟಲು ಆಗದೆ, ಇತ್ತ ಮೈಕ್ರೋ ಫೈನಾನ್ಸ್ ಕಂಪನಿಯ ಸಿಬ್ಬಂದಿಯ ಕಾಟ ತಾಳಲಾರದೆ ಎಷ್ಟೋ ಗ್ರಾಮಗಳಲ್ಲಿ ಮನೆ ಬಿಟ್ಟು ಬೇರೆ ಕಡೆ ಹೋಗಿರುವ ಸನ್ನಿವೇಶಗಳಿವೆ. ಮತ್ತೆ ಕೆಲವರಿಗೆ ಅವರ ಮನೆ ಬಾಗಿಲಿಗೆ ಹಣ ಮರುಪಾವತಿ ಮಾಡದೇ ಹೋದಲ್ಲಿ ನಿಮ್ಮ ಮನೆಯನ್ನು ಹರಾಜು ಹಾಕುತ್ತೇವೆ ಎಂದು ನೋಟಿಸ್ ಅಂಟಿಸಿ ಹೋಗುತ್ತಿದ್ದ ಸಂದರ್ಭದಲ್ಲಿ ಆ ಮನೆಯ ಮಾಲೀಕ ಆತ್ಮಹತ್ಯೆಗೆ ಶರಣಾಗುತ್ತಿದ್ದ ಉದಾಹರಣೆಗಳು ಸುಮಾರಿವೆ.



ದರ್ಶನ್ ಕಚೇರಿಯಲ್ಲಿ ನೇಣು ಬಿಗಿದುಕೊಂಡಿರುವ ದೃಶ್ಯ

ಇದನ್ನೆಲ್ಲ ಗಮನಿಸಿದ ಕರ್ನಾಟಕ ಸರ್ಕಾರ ಮೈಕ್ರೋ ಫೈನಾನ್ಸ್‌ಗಳು ಹಣ ವಸೂಲಾತಿ ಮಾಡಬೇಕಾದರೆ ಕೆಲವು ನಿಬಂಧನೆಗಳು ಅನುಸರಿಸಬೇಕು ಮತ್ತು ಪದೇ ಪದೇ ಸಾಲ ಪಡೆದವರ ಮನೆ ಬಾಗಿಲಿಗೆ ಹೋಗಿ ಹಿಂಸೆ ಕೊಡಬಾರದು ಎಂದು ಕಟ್ಟುನಿಟ್ಟಿನ ನೀತಿ ಆದೇಶ ಮಾಡಿತ್ತು. ಈ ಆದೇಶವನ್ನು ಧಿಕ್ಕರಿಸಿ ಕಾನೂನು ಉಲ್ಲಂಘನೆ ಮಾಡಿದವರ ಮೈಕ್ರೋ ಫೈನಾನ್ಸ್ ಕಂಪನಿಗಳ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲು ಮುಂದಾಗಿದ್ದು, ಈ ರೀತಿ ಶಿಸ್ತುಬದ್ಧ ಕ್ರಮವನ್ನು ಸರ್ಕಾರ ತೆಗೆದುಕೊಂಡ ನಂತರ ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆದವರು ನಿಟ್ಟುಸಿರು ಬಿಟ್ಟುಕೊಂಡು ಅವರವರ ಆಯಮಗಳಲ್ಲಿ ಹಣ ಮರುಪಾವತಿ ಮಾಡುತ್ತಿದ್ದಾರೆ.

ಇದೆಲ್ಲಾ ಒಂದು ರೀತಿ ವಿಚಾರವಾದರೆ, ಮತ್ತೊಂದೆಡೆ ಮೈಕ್ರೋ ಫೈನಾನ್ಸ್ ಕಂಪನಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಕಥೆ ಹೇಳೋಕೆ ಹೋದರೆ, ಅವರು ಕಷ್ಟಪಟ್ಟು ಕೆಲಸ ಮಾಡಬೇಕು. ತಮ್ಮ ಕುಟುಂಬ ನಿರ್ವಹಣೆ ಮಾಡಲು ಕೆಲಸ ಹುಡುಕಾಟದಲ್ಲಿರುವ ಹುಡುಗರಿಗೆ ಯಾವುದೋ ಒಂದು ಕೆಲಸ ಸಿಕ್ಕಿದರೆ ಸಾಕು. ಕೆಲಸ ಮಾಡುವ ಅಂಬಲದಲ್ಲಿ, ಆ ಕೆಲಸ ಒಳ್ಳೆಯದೋ ಕೆಟ್ಟದ್ದೋ ಎಂದು ತಿಳಿಯುವಷ್ಟು ತಾಳ್ಮೆಯಿಲ್ಲದೆ, ಕೆಲಸ ಸಿಕ್ಕಿದ್ದೇ ತಡ ಖುಷಿಯಿಂದ ಕೆಲಸ ಮಾಡಲು ಮುಂದಾದಾಗ ಕೆಲವು ಮೈಕ್ರೋ ಫೈನಾನ್ಸ್ ಕಂಪನಿಗಳಲ್ಲಿ ಹಣ ವಸೂಲಾತಿ ಸಿಬ್ಬಂದಿಗಳನ್ನು ನೇಮಿಸಿರುತ್ತಾರೆ. ಆ ಸಿಬ್ಬಂದಿಗಳಿಗೆ ಒಬ್ಬ ಮ್ಯಾನೇಜರ್, ಸೂಪರ್‌ವೈಸರ್, ಕ್ಯಾಷಿಯರ್ ಎಂಬಿತ್ಯಾದಿ ಹುದ್ದೆಗಳಿಗೆ ನೇಮ ಮಾಡಿಕೊಂಡು, ಅವರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡದೆ, ಅವರಿಗೆ ಕೆಲಸದ ಒತ್ತಡದಲ್ಲಿ ಸಿಲುಕಿಸಿ, ಪ್ರತಿಯೊಬ್ಬ ಸಿಬ್ಬಂದಿಗೂ ಅವರದೇ ಆಟ ಟಾರ್ಗೆಟ್ ಕೆಲಸ ಕೊಟ್ಟು ಟಾರ್ಚರ್ ಕೊಡುತ್ತಿದ್ದರೂ ಸಹ ಅವರ ನೋವು-ದೂರು ಹೇಳಿಕೊಳ್ಳಲು ಮೈಕ್ರೋ ಫೈನಾನ್ಸ್ ಕಂಪನಿಗಳ ನಿಜವಾದ ಮ್ಯಾನೇಜರ್ ಯಾರು, ಆ ಕಂಪನಿಗೆ ಏನಾದರೂ ತೊಂದರೆಯಾದರೆ, ಅಂದರೆ ತಾಲೂಕು, ಹೋಬಳಿ, ಜಿಲ್ಲಾ ಕೇಂದ್ರದಲ್ಲಿ ಆಫೀಸ್ ತೆರೆದುಕೊಂಡು ಕಾರ್ಯನಿರ್ವಹಿಸುವ ಕೆಲವು ಮೈಕ್ರೋ ಫೈನಾನ್ಸ್ ಕಂಪನಿಗಳ ಕೇಂದ್ರ ಕಚೇರಿಯ ವಿಳಾಸವೇ ಗೊತ್ತಿರುವುದಿಲ್ಲ. ಆ ಕಂಪನಿಗಳ ಸಿಬ್ಬಂದಿಗಳಿಗೆ ಇನ್ನೂ ಕೆಲವು ಮೈಕ್ರೋ ಫೈನಾನ್ಸ್ ಕಂಪನಿಗಳು ಕಾಲ್ ಸೆಂಟರ್‌ಗಳನ್ನು ತೆರೆದು ಅಲ್ಲಿ ಕೆಲವು ಸಿಬ್ಬಂದಿಗಳನ್ನು ನೇಮಿಸಿಕೊಂಡು ಅವರ ಮುಖಾಂತರ ವಿಚಾರ ಪಡೆದು ಕೆಲವು ವಿಷಯಗಳಿಗೆ ಉತ್ತರ ನೀಡುತ್ತಾರೆ. ಇನ್ನು ಕೆಲವರಿಗೆ ಆಯಾ ಕಂಪನಿಗಳಲ್ಲಿ ಸಿಬ್ಬಂದಿಗಳಿಗೆ ಏನಾದರೂ ತೊಂದರೆಯಾದಲ್ಲಿ ಅಂದರೆ ಆತ್ಮಹತ್ಯೆ ಅಥವಾ ಕೊಲೆಗಳಾದಲ್ಲಿ, ಸಂಕಷ್ಟಕ್ಕೆ ಸಿಲುಕದದ ಕುಟುಂಬ ವರ್ಗ ಕೆಲಸ ಮಾಡುತ್ತಿದ್ದ ಕಂಪನಿಯ ಕೇಂದ್ರ ಕಚೇರಿಯಾಗಲೀ, ಆಡಳಿತ ಮಂಡಳಿಯ ವ್ಯವಸ್ಥಾಪಕರನ್ನು ಭೇಟಿ ಮಾಡುವುದಾಗಲೀ ಹರಸಾಹಸ ಪಡಬೇಕಾಗುತ್ತದೆ. ಕೊನೆಗೇ ಪೊಲೀಸ್ ಠಾಣೆ ಮೊರೆ ಹೋಗಿ ಅಲ್ಲಿ ನ್ಯಾಯ ಪಡೆದುಕೊಳ್ಳುವ ಸಾಧ್ಯತೆಗಳಿರುತ್ತವೆ.



ಬಿಎಸ್ಎಸ್-13 ಕಂಪನಿಯ ಮ್ಯಾನೇಜರ್ ರಾಜಶೇಖರ್



ಬಿಎಸ್ಎಸ್ ಮೈ. ಫೈ. ಕಂಪನಿ ಮ್ಯಾನೇಜರ್ ನಿಗರಾಜು

ಉದಾಹರಣೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರದಲ್ಲೊಂದು ಬಿಎಸ್ಎಸ್ ಮೈಕ್ರೋ ಫೈನಾನ್ಸ್ ಕಂಪನಿ ಕಚೇರಿ. ಆ ಕಚೇರಿಯಲ್ಲಿ ಒಬ್ಬ ಸಿಬ್ಬಂದಿ ದರ್ಶನ್ ಎಂಬಾತನಿಗೆ 20 ವರ್ಷ. ಈ ಚಿಕ್ಕವಯಸ್ಸಿನ ದರ್ಶನ್ ಮೂಲತಹ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಕೊಳತ್ತೂರು ಗ್ರಾಮದ ಶ್ರೀಮತಿ ರೂಪ ಮತ್ತು ರಾಜು ದಂಪತಿಯ ಮೇಗನೇ ಆರ್. ದರ್ಶನ್. ಈ ದರ್ಶನ್ ತನ್ನ ದೊಡ್ಡಮ್ಮನ ಮನೆ ಮೈಸೂರಿನಲ್ಲಿ ದ್ವಿತೀಯ ಪಿಯುಸಿ ಮುಗಿಸಿ, ಡಿಪ್ಲೊಮೊ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಕುಟುಂಬದಲ್ಲಿ ಕಷ್ಟ ಬಂದಾಗ ತಂದೆತಾಯಿಗೆ ನೆರವಾಗಲೆಂದು ಕೆಲಸ ಹುಡುಕಾಟದಲ್ಲಿದ್ದಾಗ ದರ್ಶನ್‌ಗೆ ಸಿಕ್ಕಿದ್ದೇ ಬಿಎಸ್ಎಸ್ ಮೈಕ್ರೋ ಫೈನಾನ್ಸ್ ಕಂಪನಿಯಲ್ಲಿ. ಮೊದಲು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರು ಬ್ರಾಂಚ್ ಕಚೇರಿಯಲ್ಲಿ ಸುಮಾರು ಒಂದು ವರ್ಷಗಳ ಕೆಲಸ ಮಾಡಿದ್ದು, ಇತ್ತೀಚೆಗೆ ಬಡ್ತಿಯ ನಂತರ ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರಕ್ಕೆ ವರ್ಗಾವಣೆಗೊಂಡಿದ್ದು, ಕನಕಪುರ ಟೌನಿನ ಗುಂಡಣ್ಣ ಬೀದಿಯಲ್ಲಿರುವ ಬಿಎಸ್ಎಸ್ ಮೈಕ್ರೋ ಫೈನಾನ್ಸ್ ಕಂಪನಿಯ ಕಚೇರಿಯಲ್ಲಿ ಸುಮಾರು ಆರು ತಿಂಗಳಿಂದ ದರ್ಶನ್ ಆರ್. ಎಂಬಾತ ಕ್ಯಾಷಿಯರ್ ಮತ್ತು ಸಾಲ ವಸೂಲಾತಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಈತ ಸಂಜೆ ಸಮಯ ಹಾಗೂ ರಾತ್ರಿ ವೇಳೆಯಲ್ಲಿ ಬಿಡುವು ಮಾಡಿಕೊಂಡು ತನ್ನ ತಂದೆತಾಯಿಗೆ ಕರೆ ಮಾಡುತ್ತಿದ್ದ. ಆಗ ಇಲ್ಲಿ ನಡೆಯುತ್ತಿದ್ದ ಅಂದರೆ ಕೆಲಸದ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದ. ಎಲ್ಲಾ ವಿಚಾರಗಳನ್ನು ಕೇಳುತ್ತಿದ್ದ ತಂದೆತಾಯಿ ಸರಿಯಾದ ಸಮಯಕ್ಕೆ ಸಿಪಿಐ ಇನ್ಸ್‌ಪೆಕ್ಟರ್ ಅನಂತರಾಮುರವರು ದೂರು ದಾಖಲಿಸಿಕೊಂಡು ಪ್ರಕರಣದ ತನಿಖೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ಹಾಗೂ ಚನ್ನಪಟ್ಟಣ ಡಿವೈಎಸ್ಪಿ ಶ್ರೀಗಿರಿರವರ ಮಾರ್ಗದರ್ಶನದಲ್ಲಿ ಆರಂಭಿಸಿ, ಘಟನೆ ನಡೆದ ಸ್ಥಳ ಮಹಜರ್ ಮಾಡಿ, ಮೃತ ದರ್ಶನ್‌ನ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ, ನಂತರ ವಾರಸುದಾರರಿಗೆ ಮೃತದೇಹವನ್ನು ಹಸ್ತಾಂತರಿಸಿ ದೂರಿನ ಆಧಾರದ ಮೇಲೆ ಆರೋಪಿಗಳಾದ ಎ1 ರೇವಣ್ಣ, ಎ2 ರೇಣುಕಾ ಶರ್ಮಾ, ಎ3 ಸಚಿನ್ ಎಂಬಾತರ ವಿರುದ್ಧ ಬಿಎನ್ಎಸ್ 2023

☞ 14



ಜಿಲ್ಲಾ ಎಸ್ಪಿ ಎಸ್. ಶ್ರೀನಿವಾಸಗೌಡ



ಎಎಸ್ಪಿ ಸುರೇಶ್



ಸಿಪಿಐ ಅನಂತರಾಮ್



ಮೃತ ದರ್ಶನ್ ತಂದೆ, ತಾಯಿ




ಕನಕಪುರದಲ್ಲಿರುವ ಕಚೇರಿ



ಮೃತ ದರ್ಶನ್ ನೇಣು ಬಿಗಿದುಕೊಂಡ ಕಚೇರಿ



ಕಚೇರಿಯ ಒಳಗಡೆ ದೃಶ್ಯ

# ಮುಂಬೈ ಡ್ರಗ್ಸ್ ಪೆಡ್ಲರ್ಸ್ ಮೈಸೂರಿನತ್ತ ಬೊಟ್ಟು ಮಾಡಿದರಲ್ಲ ಸಿದ್ದಣ್ಣ!

**ರಾಜ್ಯದಲ್ಲಿ ಆಗಾಗ್ಗೆ ಡ್ರಗ್ಸ್ ಪ್ರಕರಣಗಳು ಪತ್ತೆಯಾಗುವುದು ಹೊಸದೇನಲ್ಲ... ಅದರಲ್ಲೂ ಬೆಂಗಳೂರು, ಮೈಸೂರಿನಲ್ಲಿ ಇದರ ಜಾಲ ಬಲವಾಗಿ ಹರಡಿಕೊಂಡಿದೆ ಎಂದಷ್ಟೇ ಗೊತ್ತಿತ್ತು. ಆದರೆ ಸಿಎಂ ತವರು ಜಿಲ್ಲೆ ಮೈಸೂರೇ ಡ್ರಗ್ಸ್ ಫ್ಯಾಕ್ಟರಿ ಆಗಿದೆ ಎನ್ನುವುದು ಗೊತ್ತಿರಲಿಲ್ಲ. ಈಗ ಅದು ಬಹಿರಂಗಗೊಂಡಿದ್ದು ಜನ ಬೆಚ್ಚಿ ಬಿದ್ದಿದ್ದಾರೆ... ಇವತ್ತು ಓದುವ, ಕೆಲಸ ಮಾಡಿ ಬದುಕುವ ವಯಸ್ಸಿನಲ್ಲಿ ಯುವಕರು, ಯುವತಿಯರು ಹಾಳಾಗುತ್ತಿರುವುದೇಕೆ? ಎಂಬ ಪ್ರಶ್ನೆಗೆ ಇದೀಗ ಉತ್ತರ ಸಿಕ್ಕಂತಾಗಿದೆ.. ಅಷ್ಟೇ ಅಲ್ಲದೆ, ನಮ್ಮ ಸರ್ಕಾರ, ಪೊಲೀಸ್ ವ್ಯವಸ್ಥೆ ಎಲ್ಲವೂ ಇದರ ಹೊಣೆ ಹೊರಬೇಕಾಗಿದೆ.**



**ಮೈಸೂರು**

✍ ಬಿ.ಎಂ. ಲವಕುಮಾರ್

ಮೈಸೂರು ನಗರಕ್ಕೆ ತಾಗಿಕೊಂಡಂತಿರುವ ಬನ್ನಿ ಮಂಟಪ ಬಳಿಯ ರಿಂಗ್ ರಸ್ತೆಯ ನಿಗೂಢ ಸ್ಥಳದಲ್ಲಿ ಇಂತಹದೊಂದು ಫ್ಯಾಕ್ಟರಿ ಇತ್ತೆಂದರೆ ನಿಜಕ್ಕೂ ನಮ್ಮ ವ್ಯವಸ್ಥೆಗೆ ತುಕ್ಕು ಹಿಡಿದಿದೆ ಎಂಬುದು ಗೊತ್ತಾಗಿ ಬಿಡುತ್ತದೆ. ಸರ್ಕಾರ ಗ್ಯಾರಂಟಿ ಯೋಜನೆಗೆ ಹಣ ಹೊಂದಿಸುವುದರಲ್ಲಿ, ಅಸಮಾಧಾನಿತ ಶಾಸಕರ ಮನವೊಲಿಸುವುದರಲ್ಲಿ, ಸಮಾವೇಶ ಮಾಡುವುದರಲ್ಲಿ, ಸಿಎಂ ಕುರ್ಚಿಯನ್ನು ಉಳಿಸಿಕೊಳ್ಳುವುದರಲ್ಲಿ ಕಾಲ ಕಳೆಯುತ್ತಿದ್ದರೆ ಇನ್ನೇನಾಗುತ್ತದೆ? ಅಷ್ಟೇ ಅಲ್ಲದೆ ಬೇರೆಡೆಯಲ್ಲಿ ಏನಾದರು ಆದಾಗ ಗುಪ್ತಚರ ಇಲಾಖೆ ವೈಫಲ್ಯ ಎಂದು ಬೊಬ್ಬೆಹೊಡೆಯುವವರು ಇವತ್ತು ಸಿಎಂ ತವರಲ್ಲೇ ಇಂತಹೊಂದು ದೊಡ್ಡ ಪ್ರಕರಣ ಬೆಳಕಿಗೆ ಬಂದಿದ್ದರೂ ಆ ಬಗ್ಗೆ ಮಾತನಾಡದೆ ಮೌನವಹಿಸಿರುವುದೇಕೆ? ಎಂಬ ಪ್ರಶ್ನೆಗಳನ್ನು ಜನ ಕೇಳುತ್ತಿದ್ದಾರೆ.

ಮಾದಕ ವ್ಯಸನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕಷ್ಟೇ ಸೀಮಿತವಾದ ಕೆಲವು ಇಲಾಖೆಗಳು ಅದು ಎಲ್ಲಿಂದ ಬರುತ್ತಿದೆ? ಅದನ್ನು ಬೇರು ಸಹಿತ ಕಿತ್ತು ಹಾಕುವುದು ಹೇಗೆ? ಎಂದು ಯೋಚಿಸದ ಕಾರಣದಿಂದಾಗಿ ಇವತ್ತಿಗೂ ನಮಗೆ ಗೊತ್ತಿಲ್ಲದಂತೆ ಡ್ರಗ್ಸ್‌ಗಳನ್ನು ಎಲ್ಲಿಗೆ? ಹೇಗೆ? ತಲುಪಿಸಬೇಕೋ ಅದನ್ನು ತಲುಪಿಸುತ್ತಿದ್ದಾರೆ. ಹೀಗಾಗಿ ಸದ್ದಿಲ್ಲದಂತೆ ಯುವಜನತೆ ಡ್ರಗ್ಸ್ ವ್ಯಸನಿಗಳಾಗಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದಲ್ಲದೆ, ಹೆತ್ತವರಿಗೆ ಭಾರವಾಗುತ್ತಿದ್ದಾರೆ, ಕ್ರಿಮಿನಲ್‌ಗಳಾಗುತ್ತಿದ್ದಾರೆ.

ಬಹುಶಃ ಮಹಾರಾಷ್ಟ್ರದ ಮಾದಕ ವಸ್ತು ನಿಗ್ರಹ ದಳದ ಪೊಲೀಸರಿಗೆ ಮೈಸೂರು ಲಿಂಕ್ ಇರುವ ಡ್ರಗ್



ಪೆಡ್ಲರ್‌ಗಳು ಸಿಗದೆ ಹೋಗಿದ್ದರೆ ಮೈಸೂರಿನಲ್ಲಿ ಡ್ರಗ್ಸ್ ಉತ್ಪಾದಿಸೋ ಫ್ಯಾಕ್ಟರಿ ಇದೆ ಎಂಬುದೇ ಗೊತ್ತಾಗುತ್ತಿರಲಿಲ್ಲವೇನೋ? ಆದರೆ ಮಹಾರಾಷ್ಟ್ರದ ಮಾದಕ ವಸ್ತು ನಿಗ್ರಹ ದಳದ ಪೊಲೀಸರಿಗೆ ಸಿಕ್ಕ ಮಾಹಿತಿ ಮತ್ತು ಅವರು ನಮ್ಮ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಅವರ ಸಹಕಾರದಲ್ಲಿ ಸ್ಥಳೀಯ ಪೊಲೀಸರೊಂದಿಗೆ ನಡೆಸಿದ ಕಾರ್ಯಾಚರಣೆ ಮೈಸೂರಿನಲ್ಲಿ ಬರೀ ಡ್ರಗ್ಸ್ ಮಾತ್ರವಲ್ಲ ಡ್ರಗ್ಸ್ ಫ್ಯಾಕ್ಟರಿಯೇ ಇತ್ತು ಎಂಬುದನ್ನು ಬಯಲು ಮಾಡಿದೆ. ಅಷ್ಟೇ ಅಲ್ಲದೆ ಇಲ್ಲಿ ಸಿಕ್ಕಿದ್ದು ಬರೋಬ್ಬರಿ 390 ಕೋಟಿ ಮೌಲ್ಯದ ಡ್ರಗ್ಸ್!

## ಸಿಎಂ ತವರಲ್ಲೇ ಡ್ರಗ್ಸ್ ಫ್ಯಾಕ್ಟರಿ!

ಮೈಸೂರಿನಲ್ಲಿ ತಯಾರಾಗುತ್ತಿದ್ದ ಡ್ರಗ್ಸ್ ದೇಶದಾದ್ಯಂತ ಮಾರಾಟವಾಗುತ್ತಿತ್ತು ಎಂದರೆ ಅಚ್ಚರಿಯಾಗಬಹುದು ಆದರೆ ಇದು ಸತ್ಯ. ಮಹಾರಾಷ್ಟ್ರದ ಪೊಲೀಸರು ಆಳಕ್ಕಿಳಿದು ಡ್ರಗ್ಸ್ ಪ್ರಕರಣದ ತನಿಖೆ ನಡೆಸದೆ ಹೋಗಿದ್ದರೆ ಬಹುಶಃ ಇಲ್ಲಿಯವರೆಗೂ ಇಂತದಹೊಂದು ಮಹಾಜಾಲ ಮೈಸೂರಿನಲ್ಲಿ ಕಾರ್ಯಾಚರಿಸುತ್ತಿದೆ ಎಂಬುದು ಗೊತ್ತೇ ಆಗುತ್ತಿರಲಿಲ್ಲವೇನೋ? ನಾವು ಇವತ್ತು ಮಹಾರಾಷ್ಟ್ರದ ಪೊಲೀಸರಿಗೆ ಥ್ಯಾಂಕ್ಸ್ ಹೇಳಬೇಕಾಗಿದೆ. ಇನ್ನು ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಇದೆ ಎಂಬುದು ಗೊತ್ತಾಗಿದ್ದು ಹೇಗೆ ಎಂಬುದರ ಬಗ್ಗೆ ತಿಳಿದುಕೊಳ್ಳಬೇಕಾದರೆ ನಾವು ಮುಂಬೈ ಪೊಲೀಸರ ಕಾರ್ಯಾಚರಣೆ ಬಗ್ಗೆ ಹೇಳಬೇಕಾಗುತ್ತದೆ.



ಕಮೀಷನರ್ ಸೀಮಾ ಲಾಟ್ಕರ್

ಪಶ್ಚಿಮ ಮುಂಬೈನ ಬೈನಾ ಸಾಕಿನಾಕಾದಲ್ಲಿ ಕಳೆದ ಏಪ್ರಿಲ್‌ನಲ್ಲಿ ಅಲ್ಲಿನ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಹಳೆಯ ಡ್ರಗ್ ಪೆಡ್ಲರ್ ಸಿಕ್ಕಿಬಿದ್ದಿದ್ದನು. ಆತನ ಬಳಿ 52 ಗ್ರಾಂನಷ್ಟು ಮೆಫೆಡ್ರೋನ್ ಡ್ರಗ್ಸ್ ಸಿಕ್ಕಿತ್ತು. ಹೀಗಾಗಿ ಆತನನ್ನು ಮತ್ತಷ್ಟು ವಿಚಾರಣೆಗೊಳಪಡಿಸಿದಾಗ ಆತ ಇನ್ನು ಮೂವರ ಹೆಸರನ್ನು ಹೇಳಿದ್ದನು. ಅದರಂತೆ ಮೂವರನ್ನು ಬಂಧಿಸಿದಾಗ ಅವರ ಬಳಿ ಎಂಟು ಕೋಟಿ ಮೌಲ್ಯದ 4.53 ಕಿಲೋಗ್ರಾಂ ಮೆಫೆಡ್ರೋನ್ ಡ್ರಗ್ಸ್ ಪತ್ತೆಯಾಗಿತ್ತು. ಇದಾದ ಬಳಿಕ ಇದರ ಹಿಂದೆ ಭಾರೀ ದೊಡ್ಡ ಜಾಲ ಇರುವ ಸಂಶಯ ಪೊಲೀಸರಿಗೆ ವ್ಯಕ್ತವಾಗಿತ್ತು. ಹೀಗಾಗಿ ಇದರ ಹಿಂದಿನ ರಹಸ್ಯ ಬೇಧಿಸಲು ಅವರು ಮುಂದಾಗಿದ್ದರು.

ಅದರಂತೆ ಮುಂಬೈನ ಬಾಂದ್ರಾ ರಿಕ್ಲಮೇಷನ್‌ವಸತಿ ಪ್ರದೇಶದ ಸಲೀಂ ಇಮ್ತಿಯಾಜ್ ಶೇಖ್ ಅಲಿಯಾಸ್ ಸಲೀಂ ಲಾಂಗ್ಡಾ ಎಂಬಾತನನ್ನು ಬಂಧಿಸಲಾಗಿತ್ತು. ಆ ನಂತರ ಈತನನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಈ ಜಾಲ ಮಹಾರಾಷ್ಟ್ರ ಗುಜರಾತ್ ಸೇರಿದಂತೆ ದೇಶದ ಹಲವು ಕಡೆಗಳಿಗೆ ಹರಡಿರುವುದು ತಿಳಿದು ಬಂದಿತ್ತು. ಅದಕ್ಕಿಂತ ಹೆಚ್ಚಾಗಿ ಡ್ರಗ್ಸ್ ಕರ್ನಾಟಕದ ಮೈಸೂರಿನಿಂದ ಸರಬರಾಜಾಗುತ್ತಿದೆ ಎಂಬ ಬಹುದೊಡ್ಡ ಸ್ಫೋಟಕ ಮಾಹಿತಿಯೂ ಅವರಿಗೆ ಲಭ್ಯವಾಗಿತ್ತು. ಹೀಗಾಗಿ ಪೊಲೀಸರು ಅಲರ್ಟ್ ಆಗಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಅಲ್ಲಿನ ಪೊಲೀಸ್ ಹಿರಿಯ ಅಧಿಕಾರಿಗಳು ಮುಂಬೈನ ಡಿಸಿಪಿ ದತ್ತನಲವಾಡೆ, ಇನ್ಸ್‌ಪೆಕ್ಟರ್ ಗಳಾದ ಪ್ರಮೋದ್ ದಾವ್ಡೆ, ಸಬ್ ಇನ್ಸ್‌ಪೆಕ್ಟರ್ ದಯಾನಂದ ವಾಲ್ವೆ ಮತ್ತು ಸಿಬ್ಬಂದಿಗಳನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದ್ದರು. ಈ ತಂಡ ತನಿಖೆಯನ್ನು ಆರಂಭಿಸಿತ್ತು. ಅದರಂತೆ ಜುಲೈ 25ರಂದು ಕರ್ನಾಟಕದಿಂದ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದಲ್ಲದೆ, ಜುಲೈ 26ರಂದು ಮುಂಬೈ ಪೊಲೀಸರ ತಂಡ ಮೈಸೂರಿಗೆ ಬಂದಿಳಿದಿತ್ತು. ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾಲಾಟ್ಕರ್ ಅವರ ಜೊತೆ ಸಮಾಲೋಚಿಸಿ, ಬನ್ನಿ ಮಂಟಪದ ರಿಂಗ್ ರಸ್ತೆ ಬಳಿಯ ಗ್ಯಾರೇಜ್ ರೂಪದಲ್ಲಿದ್ದ ಶೆಡ್ ಡ್ರಗ್ ತಯಾರಿಕಾ ಫ್ಯಾಕ್ಟರಿಯಾಗಿತ್ತು ಇದರ ಮೇಲೆ ಸಂಜೆ 7ರ ಸಮಯದಲ್ಲಿ ದಾಳಿ ಮಾಡಿತ್ತು.



## ಡ್ರಗ್ಸ್ ಸಾಗಾಣಿಕೆ ಕೇಸ್‌ನಲ್ಲಿ ಕಲಬುರಗಿ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರೆಸ್ಟ್!




ಕಲಬುರಗಿ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜ್ ಕಣ್ಣಿಯನ್ನು ಹೀಗ್ಗೆ ವಾರದ ಹಿಂದೆ ಮಾದಕ ದ್ರವ್ಯ ಸಾಗಣಿಕೆ ಪ್ರಕರಣದಲ್ಲಿ ಮುಂಬೈ ಪೊಲೀಸರು ಬಂಧಿಸಿದ್ದಾರೆ. 120ಕ್ಕೂ ಹೆಚ್ಚು ನಿಷೇಧಿತ 'ಕೊಡೈನ್' ಸಿರಪ್ ಬಾಟಲ್‌ಗಳನ್ನು ಸಾಗಿಸುತ್ತಿದ್ದಾಗ ರೆಡ್ ಹ್ಯಾಂಡ್ ಆಗಿ ಹಿಡಿಯಲಾಗಿದೆ! ಈ ನಿಷೇಧಿತ ಸಿರಪ್ ಬೆಲೆ ಮೇಲ್ನೋಟಕ್ಕೆ 27 ಸಾವಿರ ರೂ. ಆದ್ರೂ, ಡ್ರಗ್ ಮಾಫಿಯಾ ಲೋಕದಲ್ಲಿ ಕೋಟ್ಯಂತರ ರೂ. ಕಿಮ್ಮತ್ತಿದೆ ಎನ್ನಲಾಗಿದೆ!! ಲಿಂಗರಾಜ್ ಕಣ್ಣಿ ಗ್ರಾಮೀಣ ಶಾಸಕರಾದ ಅಲ್ಲಮ ಪ್ರಭು ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಆಪ್ತನಾಗಿರುವುದರಿಂದ ಈ ಘಟನೆ ಭಾರಿ ಸಂಚಲನ ಸೃಷ್ಟಿಸಿ, ವಿರೋಧ ಪಕ್ಷದವರು ಆಳುವ ಸರ್ಕಾರಕ್ಕೆ ಚೀಮಾರಿ ಹಾಕುತ್ತಿದ್ದಾರೆ!

ಈ ಪ್ರಕರಣದಲ್ಲಿ ತೌಸಿಫ್ ಆಸಿಫ್ ತುರವೇ (ಎ1) ಆರೋಪಿಯಾಗಿದ್ದು, ಲಿಂಗರಾಜ್ ಕಣ್ಣಿ(ಎ2) ಮತ್ತು ಕಲಬುರಗಿಯ ಸಯ್ಯದ್ ಇರ್ಫಾನ್ (ಎ3) ಮೂವರನ್ನ ಮುಂಬೈನ ಬಜಾರ್ ಪೇಠ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಘಟನೆ ಕಲಬುರಗಿ ರಾಜಕೀಯ ವಲಯದಲ್ಲಿ ಭಾರೀ ಬಿರುಗಾಳಿ ಎಬ್ಬಿಸಿದ್ದು, ಮುಂಬೈ ಪೊಲೀಸರು ಕಣ್ಣಿ ಗ್ಯಾಂಗ್‌ನ ಡ್ರಗ್ಸ್ ಜಾಲದ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ!

ಅಂದಹಾಗೆ, ಲಿಂಗರಾಜ್ ಕಣ್ಣಿ ಈ ಮೊದಲು ಬಿಜೆಪಿಯಲ್ಲಿದ್ದ.ಅಲ್ಲಿ ತನಗೆ ಸರಿಯಾದ ಸ್ಥಾನ ಮಾನ ಸಿಗುತ್ತಿಲ್ಲವೆಂದು, 2023 ರಲ್ಲಿ ಕಾಂಗ್ರೆಸ್ ಪಕ್ಷ ಸೇರಿಕೊಂಡು ಪ್ರಿಯಾಂಕ್ ಅವರಿಗೆ ಕ್ಲೋಸ್ ಆಗಿದ್ದ! ಗ್ರಾಮೀಣ ಶಾಸಕ ಅಲ್ಲಮಪ್ರಭು ಅವರಿಗಂತೂ ಕುಚಿಕ್ಕೂ....!!

ಇಂಥ ದೊಡ್ಡ ದೋಸ್ತಿ ಹೊಂದಿದ್ದ ಕಣ್ಣಿ ಇದೀಗ ಮುಂಬೈ ಪೊಲೀಸರಿಂದ ಅರೆಸ್ಟ್ ಆಗಿ ಜೈಲು ಸೇರಿದ್ದಾನೆ. ಇತ್ತ, ಬಿಜೆಪಿ ಮುಖಂಡರು ಸಚಿವ ಪ್ರಿಯಾಂಕ್ ಖರ್ಗೆ ಗೆ ಛೇಡಿಸುತ್ತಿದ್ದಾರೆ! ಹೀಗಾಗಿ, ಖರ್ಗೆ ಅವರು ಕಣ್ಣಿಯನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿದ್ದಾರೆ!! ☯



ಸಚಿವ ಪ್ರಿಯಾಂಕ್ ಖರ್ಗೆ ಜೊತೆ ಲಿಂಗರಾಜ್ ಕಣ್ಣಿ



ಶಾಸಕ ಅಲ್ಲಮಪ್ರಭು ಜೊತೆ





ಈ ವೇಳೆ ಮೆಫೆಡ್ರೋನ್ (ಎಂಡಿ) ಕ್ಯಾಥಿನೋನ್ ಗೆ ಸಂಬಂಧಿಸಿದ ರಾಸಾಯನಿಕ ವಸ್ತುಗಳು ಪತ್ತೆಯಾಗಿದ್ದು, ಈ ರಾಸಾಯನಿಕದಿಂದ ಎಂಡಿಎಂಎ ಮತ್ತು ಕೋಕೇನ್ ನಂತಹ ಡ್ರಗ್ಸ್ ತಯಾರಿಸುತ್ತಿರುವುದು ಕಂಡು ಬಂದಿತ್ತು. ಸುಮಾರು 390 ಕೋಟಿ ಮೌಲ್ಯದ ಡ್ರಗ್ಸ್‌ಗೆ ಸಂಬಂಧಿಸಿದ ರಾಸಾಯನಿಕಗಳು ಮತ್ತು ಪರಿಕರಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈನ ಅಂಧೇರಿಯ ಫಿರೋಜ್ ಮೌಲಾ ಶೇಕ್, ಗುಜರಾತ್‌ನ ಸೂರತ್ ನಿವಾಸಿ ಶೇಕ್ ಆದಿಲ್, ಬೈರೋಚ್‌ನ ಸೈಯದ್ ಮಹಪೂಜ್ ಅಲಿ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಮುಂಬೈ ವಲಯ ಡಿಸಿಪಿ ದತ್ತ ನಾಲ್ವಡೆ ಪ್ರಕಾರ ಸೈಯದ್ ರಸಾಯನ ವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಮಾಡಿದ್ದಾನೆ.



ಡಿಸಿಪಿ ದತ್ತ ನಲವಾಡೆ, ಮುಂಬೈ

ಮೈಸೂರಿನಲ್ಲಿ ತಯಾರಾಗುತ್ತಿದ್ದ ಮಾದಕ ವಸ್ತುವನ್ನು ಮಹಾರಾಷ್ಟ್ರ, ಗುಜರಾತ್‌ಗೆ ಪೂರೈಕೆ ಮಾಡಲಾಗುತ್ತಿತ್ತು ಎಂಬುದು ಪೊಲೀಸರ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತು ಪತ್ತೆಯಾಗಿರುವುದು ರಾಜ್ಯದಲ್ಲಿ ಇದೇ ಮೊದಲು. ಮಹಾರಾಷ್ಟ್ರ ಪೊಲೀಸರು ಡ್ರಗ್ ಪೆಡ್ಲರ್ ಸಲೀಂ ಇಂತಿಯಾಜ್ ಶೇಖ್‌ನನ್ನು ಬಂಧಿಸಿ ತೀವ್ರ ವಿಚಾರಣೆಗೊಳಪಡಿಸದೆ ಹೋಗಿದ್ದರೆ ಮೈಸೂರಿನಲ್ಲಿದ್ದ ಡ್ರಗ್ ಫ್ಯಾಕ್ಟರಿಯ ಮಾಹಿತಿಯೇ ಹೊರ ಬರುತ್ತಿರಲಿಲ್ಲವೇನೋ?

ಇನ್ನು ಡ್ರಗ್ ಜಾಲ ನಡೆಸುತ್ತಿದ್ದವರ ಕುರಿತಂತೆ ಮಾಹಿತಿ ಕಲೆ ಹಾಕಲಾಗಿದ್ದು, ಪೊಲೀಸ್ ಮೂಲಗಳ ಪ್ರಕಾರ ಇವರು ಎರಡು ತಿಂಗಳಿಗೊಮ್ಮೆ ಡ್ರಗ್ಸ್ ಫ್ಯಾಕ್ಟರಿ ಉದ್ದೇಶಕ್ಕೆ ಸ್ಥಳ ಬದಲಾವಣೆ ಮಾಡುತ್ತಿದ್ದರು. ಈ ಹಿಂದೆ ಕೇರಳದ ಪಾಲಕ್ಕಾಡ್, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮಾದಕ ವಸ್ತು ತಯಾರಿಸುತ್ತಿದ್ದರು. ಪೊಲೀಸರು ದಾಳಿ ನಡೆಸಿದಾಗ ಅಲ್ಲಿಂದ ತಪ್ಪಿಸಿಕೊಂಡು ಮೂರು ವಾರಗಳ ಹಿಂದೆ ಬನ್ನಿಮಂಟಪದ ರಿಂಗ್ ರಸ್ತೆಯ ಗ್ಯಾರೇಜ್‌ಗೆ ಬಂದು ಎಂಡಿಎಂಎ ತಯಾರಿಕೆಯಲ್ಲಿ ತೊಡಗಿದ್ದರಂತೆ. ಇವರಿಗೆ ಅಜ್ಮಲ್ ಎಂಬಾತ ಈ ಶೆಡ್‌ನ್ನು ಬಾಡಿಗೆ ನೀಡಿದ್ದನು.

ಸುಮಾರು ಇಪ್ಪತ್ತು ದಿನಗಳ ಹಿಂದೆ ಮಹೇಶ್ ಎಂಬುವವರಿಗೆ ಸೇರಿದ್ದ ಈ ಜಾಗವನ್ನು 20 ಸಾವಿರ ರೂ. ಬಾಡಿಗೆಗೆ ಪಡೆದಿದ್ದ ಅಜ್ಜಲ್ ಅಲ್ಲಿ ಗ್ಯಾರೇಜ್ ನಿರ್ಮಿಸಿದ್ದ. ಬಳಿಕ ಜಾಗವನ್ನು ಎಂಡಿಎಂಎ ಡ್ರಗ್ಸ್ ತಯಾರು ಮಾಡುತ್ತಿದ್ದ ಆರೋಪಿಗಳಿಗೆ ತಿಂಗಳಿಗೆ 2 ಲಕ್ಷ ರೂ.ಗೆ ಒಳ ಬಾಡಿಗೆಗೆ ನೀಡಿದ್ದ ಎನ್ನಲಾಗಿದ್ದು, ಸದ್ಯ ಅಜ್ಮಲ್ ನನ್ನು ಪೊಲೀಸರು ಬಂಧಿಸಿದ್ದಾರೆ.



ಸಸ್ಪೆಂಡೆಡ್ ಪಿಐ ಲಕ್ಷ್ಮೀಕಾಂತ ತಳವಾರ




ದ್ರವ ರೂಪದಲ್ಲಿದ್ದ ಮಾದಕ ವಸ್ತುವನ್ನು ಪೌಡರ್ ಮಾಡಿ ಪೂರೈಸುತ್ತಿದ್ದರು. ಡ್ರಗ್ಸ್ ಮಾರಾಟಕ್ಕಾಗಿ ಬೇರೆಯದೇ ತಂಡವಿದ್ದು, ಈ ಜಾಲದ ಪತ್ತೆಗೆ ತನಿಖೆ ಮುಂದುವರಿದಿದೆ. ಶೆಡ್ ಪಕ್ಕದಲ್ಲೇ ಇರುವ ಟೀ ಅಂಗಡಿಗೆ ತಂಡದಲ್ಲಿದ್ದ ಯುವಕನೊಬ್ಬ ಬಂದು ಆಗಾಗ ಟೀ ತೆಗೆದುಕೊಂಡು ಹೋಗುತ್ತಿದ್ದ. ಮತ್ಯಾರೂ ಶೆಡ್ ನಿಂದ ಹೊರಕ್ಕೆ

☞ 14

## ಗುಪ್ತಚರ ಇಲಾಖೆ ಏನು ಮಾಡುತ್ತಿದೆ?!

ಈ ಹಿಂದೆ ರಾಜಧಾನಿ ಬೆಂಗಳೂರಿನಲ್ಲಿ ಹಾಗೂ ಹೊರವಲಯದ ಕೆಲ ಬಡಾವಣೆಗಳಲ್ಲಿ ಮಾದಕ ವಸ್ತುಗಳ ಜಾಲಗಳು ಸಕ್ರಿಯವಾಗಿರುವುದು ಪಸರ್ ಆಗಿತ್ತು. ವಿದೇಶಿ ಪ್ರಜೆಗಳು ಮಾದಕ ವಸ್ತುಗಳ ಪೂರೈಕೆ ಹಾಗೂ ಸರಬರಾಜಿನಲ್ಲಿ ತೊಡಗಿಸಿಕೊಳ್ಳುತ್ತಿದುದು ಪತ್ತೆಯಾಗಿತ್ತು.

ಎಲೆಕ್ಟ್ರಾನಿಕ್ಸ್ ಸಿಟಿಯ ಒಂದು ಮನೆಯಲ್ಲಿ ಮಾದಕ ವಸ್ತುಗಳ ತಯಾರಿಸುತ್ತಿದ್ದು ಅದರ ಮೇಲೆ ಸಿಸಿಬಿ ಪೊಲೀಸ್ ದಾಳಿಯಾಗಿತ್ತು. ಒಟ್ಟಾರೆ, ಬೆಂಗಳೂರಿನಲ್ಲಿ ಕಾಲಕಾಲಕ್ಕೆ ಪೊಲೀಸರು ಕಾರ್ಯಾಚರಣೆ ನಡೆಸಿ ಈ ದಂಧೆಯನ್ನು ಮಟ್ಟ ಹಾಕುತ್ತಿದ್ದರು. ಆದರೆ ಇದೀಗ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಉತ್ಪಾದಕ ಘಟಕ ಪತ್ತೆಯಾಗಿರುವುದು ರಾಜ್ಯ ಗುಪ್ತ ದಳದ ಪೊಲೀಸ್ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ಪ್ರಶ್ನಿಸುವಂತೆ ಮಾಡಿದೆ!

ನೆನಪಿರಲಿ,ಗುಪ್ತಚರ ಇಲಾಖೆಯಲ್ಲಿ ಎಡಿಜಿಪಿ, ಎಸ್ಪಿ, ಡಿವೈಎಸ್ಪಿ, ಡಿಸಿಪಿ ಮುಂತಾಗಿ ದೊಡ್ಡ ಅಧಿಕಾರಿಗಳ ಹಿಂಡೇ ಇರುತ್ತದೆ. ಇವರೆಲ್ಲ ಏನು ಮಾಡ್ತಿದ್ದಾರೆ??! ಮಾದಕ ವಸ್ತುಗಳ ವಿರುದ್ಧ ಸಮರ ಸಾರಿರುವುದಾಗಿ ಹೇಳಿಕೊಳ್ಳುತ್ತಿರುವ ಇವರ ಕಣ್ಣಿಗೆ ಮೈಸೂರಿನ ರಿಂಗ್ ರಸ್ತೆಯ 'ಬೆಳವತ್ತ' ದಲ್ಲಿದ್ದ ಸಿಂತೆಟಿಕ್ ಡ್ರಗ್ಸ್ ತಯಾರಿಕಾ ಘಟಕ ಕಾಣದೇ ಇದ್ದದ್ದು ಹೇಗೆ ಎಂಬ ಪ್ರಶ್ನೆಗಳು ಉದ್ಭವಿಸಲಾರಂಭಿಸಿವೆ!ಮುಖ್ಯವಾಗಿ, ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರೂರು! ಅವರು ಈ ಹಿಂದೆ ಪ್ರತಿನಿಧಿಸುತ್ತಿದ್ದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿದ ಬೆಳವತ್ತ ಗ್ರಾಮದಲ್ಲೇ ಈ ಡ್ರಗ್ಸ್ ಫ್ಯಾಕ್ಟರಿ ಕಾರ್ಯ ನಿರ್ವಹಿಸುತ್ತಿತ್ತು ಎಂದರೆ?! ಮೇಲ್ನೋಟಕ್ಕೆ ಅದು ಸ್ಕೂಟರ್ ಗ್ಯಾರೇಸ್. ಒಳಗೆ ನುಗ್ಗಿದರೆ ಸಿಂಥೆಟಿಕ್ ಡ್ರಗ್ ತಯಾರಿಕಾ ಘಟಕ!! ಇಲ್ಲಿ ನಿಷೇದಿತ ಹಾಗೂ ಅವಧಿ ಮೀರಿದ ಮಾತ್ರೆಗಳನ್ನು ಗುಡ್ಡೆ ಹಾಕೊಂಡು ವಿವಿಧ ನಮೂನೆಯ ಮಾಧಕ ವಸ್ತುಗಳನ್ನು ತಯಾರಿಸಲಾಗುತ್ತಿತ್ತು!



ಇಲ್ಲಿಂದ ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಗೆ ಸರಬರಾಜು ಮಾಡುತ್ತಿದ್ದ ವಿಚಾರ ಇಲ್ಲಿನ ಪೊಲೀಸರಿಗೆ ಗೊತ್ತೇ ಆಗಿಲ್ಲ ನೋಡ್ರಿ! ದೂರದ ಮಹಾರಾಷ್ಟ್ರದ ಪೊಲೀಸರು ಇದನ್ನು ಪತ್ತೆ ಹಚ್ಚಿ ಇಲ್ಲಿನ ಪೊಲೀಸರಿಗೆ ತಿಳಿಸಿದಾಗಲೇ ಗೊತ್ತಾಗಿದ್ದು ಮತ್ತು ಬೆಚ್ಚಿ ಬಿದ್ದದ್ದು! ಇದೀಗ ಮಹಾರಾಷ್ಟ್ರ ಪೊಲೀಸ್ ಜೊತೆ ಮೈಸೂರು ಪೊಲೀಸ್ ಸೇರಿಕೊಂಡು ಬೆಳವತ್ತ ಗ್ರಾಮದ ಈ ನಿಗೂಢ ಡ್ರಗ್ಸ್ ಫ್ಯಾಕ್ಟರಿ ಮೇಲೆ ದಾಳಿ ನಡೆಸಿ ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಈ ದಾಳಿಯಲ್ಲಿ 381.96 ಕೋಟಿ ರೂ. ಮೌಲ್ಯದ 187.97 ಕೆಜಿ ಮೆಫೆಡ್ರೋನ್, ಎಂಡಿಎಂಎ (ಎಕ್ಸ್‌ಟೇಸಿ) ಮಾಧಕವನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, 50 ಕೆ.ಜಿ. ದ್ರವರೂಪದ ಆಶೀಶ್ ಪತ್ತೆಯಾಗಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಮೌಲ್ಯ ಸುಮಾರು 100 ಕೋಟಿ ರೂ ಎಂದು ಅಂದಾಜಿಸಲಾಗಿದೆ! ಅಂದಹಾಗೆ, ಮಹಾರಾಷ್ಟ್ರದಲ್ಲಿ ಬಂಧಿತನಾದ ಡ್ರಗ್ ಪೆಡ್ಲರ್ ಒಬ್ಬ, ತನಗೆ ಮೈಸೂರಿನಿಂದ ಎಂಡಿಎಂಎ ಸರಬರಾಜು ಆಗುತ್ತಿರುವುದಾಗಿ ಮಾಹಿತಿ ನೀಡಿದ್ದು,ಅವನ ಮಾಹಿತಿ ಆಧರಿಸಿ ಮೈಸೂರಿಗೆ ಗುಟ್ಟಾಗಿ ಆಗಮಿಸಿದ ಮಹಾರಾಷ್ಟ್ರ ಪೊಲೀಸರು, ಈ ಕಾರ್ಯಾಚರಣೆ ನಡೆಸಿದಾಗ ಈ ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾಗಿದೆ ಎಂಬುದು ಬ್ರೇಕಿಂಗ್ ನ್ಯೂಸ್! ಮೇಲ್ನೋಟಕ್ಕೆ ಗ್ಯಾರೇಜ್ನಂತೆ ಕಂಡು ಬರುವ ತಾತ್ಕಾಲಿಕ ಶೆಡ್ನಲ್ಲಿ ಎರಡು ವಿಭಾಗಗಳನ್ನು ನಿರ್ಮಿಸಿ, ಒಂದು ಭಾಗದಲ್ಲಿ ವಾಹನಗಳನ್ನು ರಿಪೇರಿ ಮಾಡುತ್ತಿದ್ದರೆ, ಮತ್ತೊಂದು ಭಾಗದಲ್ಲಿ ಸಿಂಥೆಟಿಕ್ ಡ್ರಗ್ಸ್ ತಯಾರಿಸುತ್ತಿರುವುದು ಕಂಡು ಬಂದಿದೆ. ಇಲ್ಲಿ ಉತ್ಪಾದಿಸಿದ ಮಾಧಕವನ್ನು ದೇಶದ ನಾನಾ ಭಾಗಗಳಿಗೆ ಸರಬರಾಜು ಮಾಡಿ ಅನವನ್ನು ಕೊಳ್ಳೆ ಹೊಡೆಯಲಾಗುತ್ತಿತ್ತು ಎಂದು ಹೇಳಲಾಗುತ್ತಿದೆ.

ಬೆಂಗಳೂರು, ಮಂಗಳೂರು, ಬಳ್ಳಾರಿ, ಬೆಳಗಾವಿ, ಬಿಜಾಪುರ, ಕಲಬುರಗಿ, ರಾಯಚೂರು, ಮುಂತಾದ ಜಿಲ್ಲೆಗಳಿಗೆ ಪೂರೈಸಲಾಗುತ್ತಿತ್ತು ಎಂಬ ಅನುಮಾನಗಳಿವೆ. ಅಂಥ ಬಡಾ ಸಿಟಿ ಮುಂಬೈಗೆ ಹೋಗ್ತಿತ್ತು ಅಂದಮೇಲೆ ಈ ಜಿಲ್ಲೆಗಳೆಲ್ಲ ಯಾವ ಲೆಕ್ಕಕ್ಕೆ ಅಲ್ವಾ?! ಸದ್ಯ,ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸುತ್ತಿದ್ದಾರೆ.

ನರಸಿಂಹರಾಜ ಠಾಣೆಯ ಪಿಐ ಲಕ್ಷ್ಮೀಕಾಂತ್ ತಳವಾರನನ್ನು ಸಸ್ಪೆಂಡ್ ಮಾಡಿ, ಸಿಸಿಬಿಯ ದಕ್ಷ ಪೊಲೀಸ್ ಆಫೀಸರ್ ಶಬ್ಬೀರ್ ಹುಸೇನ್ ಅವರನ್ನು ತನಿಖೆಗೆ ಹಚ್ಚಲಾಗಿದೆ. ಈ ಡ್ರಗ್ಸ್ ಜಾಲದ ಫ್ಲಾಶ್‌ಬ್ಯಾಕ್ ಬಗ್ಗೆ ಹೇಳಬೇಕು ಅಂದ್ರೆ, ಕಳೆದ ಏಪ್ರಿಲ್‌ನಲ್ಲಿ ಸಾಕಿ ನಾಕಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೆಫೆಡ್ರೋನ್ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿದಾಗ ಅಸಲಿ ತನಿಖೆ ಪ್ರಾರಂಭವಾಗಿತ್ತು. ನಂತರ 'ಸಾಕಿ ನಾಕಾ' ಪೊಲೀಸರು ವಸಾಯಿ ಪೂರ್ವದ ಕಾಮನ್ ಪ್ರದೇಶದಲ್ಲಿ ಮಾದಕ ದ್ರವ್ಯ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿದ್ದರು. ಜುಲೈ 25ರಂದು ನಾರ್ಕೋಟಿಕ್ ಪೊಲೀಸರು ಡ್ರಗ್ಸ್ ಜಾಲವನ್ನು ಭೇದಿಸಿದಾಗ ಮುಂಬೈ ಡ್ರಗ್ಸ್ ಪೆಡ್ಲರ್ಸ್ ಪೈಕಿ ಒಬ್ಬನಾದ ಬಾಂದ್ರಾ ಪಶ್ಚಿಮದ ರಾಹುಲ್‌ನಗರದ ನಿವಾಸಿ ಸಲೀಂ ಇಮ್ತಿಯಾಸ್ ಶೇಖ್ ಅಲಿಯಾಸ್ ಸಲೀಂ ಲಂಗ್ಡಾ (45) ಸಿಕ್ಕಿಬಿದ್ದಿದ್ದ. ಅವನ ವಿಚಾರಣೆಯ ಸಮಯದಲ್ಲಿ ತಾನು ಮೈಸೂರಿನಿಂದ ಸಿಂಥೆಟಿಕ್ಸ್ ಡ್ರಗ್ಸ್ ಪಡೆದುಕೊಂಡಿದ್ದಾಗಿ ಮಾಹಿತಿ ನೀಡಿದ್ದ!

ಬಳಿಕ ಮೈಸೂರಿಗೆ ಆಗಮಿಸಿದ್ದ ಮಹಾರಾಷ್ಟ್ರ ಪೊಲೀಸ್ ತಂಡವು ಇಲ್ಲಿಯ ಪೊಲೀಸರ ಸಹಕಾರದಿಂದ ಬೆಳವತ್ತ ಗ್ಯಾರೇಸ್ ಡ್ರಗ್ಸ್ ಫ್ಯಾಕ್ಟರಿಗೆ ನುಗ್ಗಿ ಸುಮಾರು 381.96 ಕೋಟಿ ರೂ. ಮೌಲ್ಯದ 187.97 ಕೆಜಿ ಮೆಫೆಡ್ರೋನ್ ಮಾದಕವನ್ನು ವಶಪಡಿಸಿಕೊಳ್ಳಲಾಯಿತು! ಮುಂಬೈನಲ್ಲಿ 8 ಕೋಟಿ ರೂ. ಮೌಲ್ಯದ ಸಿಂಥೆಟಿಕ್ ಡ್ರಗ್ಸ್ ಮಾರುತ್ತ ಸಿಕ್ಕಿಬಿದ್ದ ಡ್ರಗ್ ಪೆಡ್ಲರ್ ಲಂಗ್ಡಾನಿಂದಾಗಿ, ಮೈಸೂರು ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾದದ್ದು, ಇಲ್ಲಿಂದ ಸರಿ ಸುಮಾರು 400 ಕೋಟಿ ಮೊತ್ತದ ಡ್ರಗ್ಸ್ ಸೀಸ್ ಆದದ್ದು ಮುಂಬೈ ಪೊಲೀಸರ ಸಾಹಸ ವೆಂದೇ ಬಿಂಬಿತಗೊಂಡಿದೆ! ಅಲ್ಲಿನ ಪೊಲೀಸ್ ಮುಖ್ಯಸ್ಥರಾದ ದೇವನ್ ಭಾರ್ತಿ ಹಾಗೂ ಬಾಂದ್ರಾ ಡಿಸಿಪಿ ದತ್ತ ನಲವಾಡೆ ಈ ಮಾಹಿತಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ಸಂಭ್ರಮಿಸಿದ್ದಾರೆ! ಆದರೆ ಇಲ್ಲಿ? ನಮ್ಮ ಸಿ.ಎಂ. ಸಿದ್ದರಾಮಯ್ಯ ಮೈಸೂರು ಪೊಲೀಸ್ ಮುಖ್ಯಸ್ಥೆ ಸೀಮಾ ಲಾಟ್ಕರ್ ಮುಖವನ್ನು ದಿಟ್ಟಿಸಿ ಹಲ್ ಹಲ್ ಕಡಿಯುತ್ತಿದ್ದಾರೆ!! ☯



ಬಾಲಕನ ಕಿಡ್ನಾಪ್ ಮಾಡಿರುವ ಸಿಸಿ ಫುಟೇಜ್

3 ☞

ವಿಸ್ಮಿತರಾಗುತ್ತೀರಿ... ಬಾಲಕ ನಿಶ್ಚಿತ್ ಬುಧವಾರ ಸಂಜೆ ಟ್ಯೂಷನ್ ಮುಗಿಸಿಕೊಂಡು ಮನೆಗೆ ಮರಳುವ ವೇಳೆಯಲ್ಲಿ ಬೈಕ್‌ನಲ್ಲಿ ಬಂದ ಆರೋಪಿಗಳು ಅವನನ್ನು ಅಪಹರಿಸಿದ್ದರು. ಮರುದಿನ ಅಪರಿಚಿತ ನಂಬರ್‌ನಿಂದ




ಆರೋಪಿಗಳಿಗೆ ಗುಂಡೇಟು ತಿನ್ನಿಸಿ ಆಸ್ಪತ್ರೆಗೆ ಒಯ್ದಿರುವುದು

ಮೆಸೇಜ್ ಮೂಲಕ 5 ಲಕ್ಷ ರೂ. ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ಟ್ಯೂಷನ್‌ಗೆ ತೆರಳಿದ ಪುತ್ರ ಮನೆಗೆ ಬಾರದ ಹಿನ್ನೆಲೆಯಲ್ಲಿ ಬುಧವಾರ ಸಂಜೆಯೇ ಅಚ್ಯುತ್ ಅವರು ಹುಳಿಮಾವು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಮನೆಯ ಆಸುಪಾಸಿನ ಪರಿಸರದಲ್ಲಿ ಹುಡುಕಾಡಿದಾಗ ಅರಕೆರೆ ಪಾರ್ಕ್ ಬಳಿ ಬಾಲಕನ ಸೈಕಲ್ ಪತ್ತೆಯಾಗಿತ್ತು. ವಾಚ್‌ಮ್ಯಾನ್ ಬಳಿ ವಿಚಾರಿಸಿದಾಗ ಪಲ್ಸರ್ ಬೈಕ್‌ನಲ್ಲಿ ಬಂದವರ್‍ಯಾರೋ ಕರೆದುಕೊಂಡು ಹೋಗಿದ್ದಾರೆ ಎಂದಿದ್ದ. ಈ ಮಾಹಿತಿ ಜತೆಗೆ, ವಾಟ್ಸ್‌ಅಪ್ ಮೆಸೇಜ್ ಬಂದಿದ್ದ ಫೋನ್ ನಂಬರ್ ಜಾಡು ಹಿಡಿದು ಪೊಲೀಸರು ಆರೋಪಿಗಳ ಶೋಧ ಕೈಗೊಂಡಿದ್ದರು.

ಈ ನಡುವೆ ಗುರುವಾರ ಮುಂಜಾನೆ ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯ ಕಗ್ಗಲೀಪುರ ರಸ್ತೆ ಬಳಿ ಶವ ಸುಟ್ಟಿರುವುದನ್ನು ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅದರಂತೆ ಬಾಲಕನ ಪೋಷಕರು ಸ್ಥಳಕ್ಕೆ ತೆರಳಿ ಗುರುತು ಪತ್ತೆ ಹಚ್ಚಿದ್ದರು.

**ಆರೋಪಿ ಗುರುಮೂರ್ತಿ ಸಾಮಾನ್ಯನಲ್ಲ!**

ಸಾಮಾನ್ಯ ಡ್ರೈವರ್ ಆಗಿದ್ದ ಆರೋಪಿ ಗುರುಮೂರ್ತಿ, ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ (ವಿಪಿಎನ್), ವಾಯ್ಸ್ ಓವರ್ ಇಂಟರ್‌ನೆಟ್ ಪ್ರೋಟೋಕಾಲ್ (ವಿಒಐಪಿ) ಮೂಲಕ ಬಾಲಕನ ಪೋಷಕರನ್ನು ಸಂಪರ್ಕಿಸಿದ್ದ! ಈತನಿಂದ ಇದೆಲ್ಲಾ ಹೇಗೆ ಸಾಧ್ಯವಾಯಿತು? ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾಗ, ಗುರುಮೂರ್ತಿಯ ಸಹೋದರನೊಬ್ಬ ಪೊಲೀಸ್ ಪೇದೆಯಾಗಿದ್ದು, ವೈರ್‌ಲೆಸ್, ಸೈಬರ್ ಕ್ರೈಂ ವಿಭಾಗದಲ್ಲಿ ಕೆಲಸ ಮಾಡಿದ್ದ ಸಂಗತಿ ತಿಳಿಯಿತು! ಅವನ ಬಳಿ ಇದೆಲ್ಲ ಟೆಕ್ನಿಕ್ ಕಲಿತಿದ್ದನಾ ಪಾಖಂಡಿ ಗುರುಮೂರ್ತಿ?! ಈ ಕಿಡ್ನಾಪ್ ಕೇಸ್ ದಾಖಲಾದಾಗ ಹುಳಿಮಾವು ಪೊಲೀಸರು, ಗುರುಮೂರ್ತಿಯನ್ನು ದೊಡ್ಡ ಕ್ರಿಮಿನಲ್ ಎಂದು ಭಾವಿಸಿದ್ದರು. ಕಾರಣ, ಆತ ವಿದೇಶಿ ಫೋನ್ ನಂಬರ್ ಬಳಸಿ ಕರೆ ಮಾಡುತ್ತಿದ್ದ! ಆತ ಕೇವಲ ಒಂದು ವಾಟ್ಸಾಪ್ ವಾಯ್ಸ್ ಕಾಲ್ ಮಾಡಿ, ಉಳಿದ ಸಂವಹನವನ್ನು ವಾಟ್ಸಾಪ್ ಮೆಸೇಂಜರ್ ಮೂಲಕ ಮಾಡಿದ್ದ! ಆತ ಇಂಗ್ಲಿಷ್‌ನಲ್ಲಿ ಟೈಪ್ ಮಾಡಿದರೂ, ಮೆಸೇಜ್‌ಗಳು ಫೋನ್‌ನಲ್ಲಿ ಹಿಂದಿಯಲ್ಲಿ ಕಾಣಿಸುತ್ತಿದ್ದವು! ಪೊಲೀಸರಿಗೆ ಸಾಮಾನ್ಯ ವಿಧಾನಗಳನ್ನು ಬಳಸಿ ಸಂಖ್ಯೆಯನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಏಕೆಂದರೆ ಆರೋಪಿ ವಿಪಿಎನ್ ಅಥವಾ ವಿಒಐಪಿ ಮೂಲಕ ಕರೆಗಳನ್ನು ಮಾಡಿದ್ದ!!



ಇನ್‌ಸ್ಪೆಕ್ಟರ್ ಕುಮಾರಸ್ವಾಮಿ

ಇನ್‌ಸ್ಪೆಕ್ಟರ್ ಬಿ.ಜಿ. ಕುಮಾರಸ್ವಾಮಿ ಮತ್ತು ಅವರ 20 ಜನರ ತಂಡ ಗುರುಮೂರ್ತಿಯನ್ನು ಹಿಡಿಯಲು ಹಗಲಿರುಳು ಶ್ರಮಿಸಿದೆ. ಆತ ದೊಡ್ಡಕಲ್ಲಸಂದ್ರ ಮತ್ತು ಯಲಚೇನಹಳ್ಳಿ ನಡುವೆ ತನ್ನ ಅಡ್ಡಾವನ್ನು ಆಗಾಗ್ಗೆ ಬದಲಾಯಿಸುತ್ತಲೇ ಇದ್ದ. ಅಲ್ಲದೆ, ಆಗಾಗ ಆಫ್‌ಲೈನ್‌ಗೆ ಹೋಗುತ್ತಿದ್ದ. ಅವನನ್ನು ಪತ್ತೆಹಚ್ಚಲು ಪೊಲೀಸರು ಹರಸಾಹಸ ಪಟ್ಟಿದ್ದರು. ರಾಜ್ಯ ಗುಪ್ತಚರ ಘಟಕ ಮತ್ತು ಸಿಸಿಬಿ ಪೊಲೀಸ್ ಸಹಾಯ ಪಡೆದರು.




**ಮತ್ತೊಂದು ನಂಬರ್ ಸಿಕ್ಕಿತ್ತು!**

ಒಂದು ಹಂತದಲ್ಲಿ ಡಿಸಿಪಿ ನಾರಾಯಣ ಅವರಿಗೆ ಗುರುಮೂರ್ತಿಯ ಮತ್ತೊಂದು ಮೊಬೈಲ್ ನಂಬರ್ ಇರೋ ಮಾಹಿತಿ ಸಿಕ್ಕಿತ್ತು. ಅದರ ಜಾಡು ಹಿಡಿದಾಗ, ಐನಾತಿ ಆರೋಪಿಗಳು ಕೊಲೆ ನಡೆದ ಕಗ್ಗಲೀಪುರ ರಸ್ತೆಯ ಅರಣ್ಯ ಪ್ರದೇಶದಲ್ಲೇ ಇರುವುದು ದೃಢಪಟ್ಟಿತ್ತು! ಈ ಹಿನ್ನೆಲೆಯಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಕುಮಾರ ಸ್ವಾಮಿ, ಸಬ್‌ಇನ್‌ಸ್ಪೆಕ್ಟರ್‌ಗಳಾದ ಅರವಿಂದ್, ರವಿ, ಸಂತೋಷ್ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಗೆ ಇಳಿದಿದ್ದರು. ಈ ವೇಳೆ ಆರೋಪಿಗಳನ್ನು ಬಂಧಿಸಲು ಮುಂದಾದಾಗ ಆರೋಪಿಗಳು ಪೊಲೀಸರ ಮೇಲೆಯೇ ಹಲ್ಲೆ ನಡೆಸಿದ್ದರು. ಈ ವೇಳೆ ಸಬ್‌ಇನ್‌ಸ್ಪೆಕ್ಟರ್ ಅರವಿಂದ್ ಕೈಗೆ ಡ್ಯಾಗರ್‌ನಿಂದ ಹಲ್ಲೆ ಮಾಡಿದ್ದು ತಮ್ಮ ಆತ್ಮರಕ್ಷಣೆಗಾಗಿ ಆರೋಪಿಗಳ ಕಾಲಿಗೆ ಗುಂಡು ಹೊಡೆದು ಬಂಧಿಸಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದಾರೆ.

ಎಲ್ಲಾ ಸರಿ, ಈ ಪ್ರಕರಣದಲ್ಲಿ ಹುಳಿಮಾವು ಪೊಲೀಸರು ಚುರುಕಾಗಿ, ಚಾಣಾಕ್ಷತನದಿಂದ ಕಾರ್ಯೋನ್ಮುಖರಾಗಿದ್ದರೆ ಆ ರಕ್ಕಸರಿಂದ ಆ ಪುಟ್ಟ ಬಾಲಕನನ್ನು ರಕ್ಷಿಸಬಹುದಿತ್ತೇನೋ! ಹೀಗೆ ವೈಫಲ್ಯ ಮೆರೆದಿದ್ದೇಕೆ? ಈ ಹಿಂದೆ ಬಿ.ಕೆ. ಶಿವರಾಂ, ಅಬ್ದುಲ್ ಅಜೀಂ, ಬಿ.ಬಿ. ಅಶೋಕ್‌ಕುಮಾರ್, ಸಂಗ್ರಾಮ್ ಸಿಂಗ್ ಕಾಲದಲ್ಲಿ ಎಂತೆಂಥ ಕಿಡ್ನಾಪ್ ಕೇಸ್ ಭೇದಿಸಿಲ್ಲವೆ? ಅದು ಇವರಿಗೆ ಗೊತ್ತಿಲ್ಲವೇ? ಇಂಥದ್ದೇ ಒಂದು ಕಿಡ್ನಾಪ್ ಕೇಸ್‌ನಲ್ಲಿ ರೌಡಿ ಸೋಮನ (ಈತ ಡೆಡ್ಲಿಯೂ ಅಲ್ಲ, ಇಡ್ಲಿಯೂ ಅಲ್ಲ, ಚೈಲ್ಡ್ ಕಿಡ್ನಾಪರ್) ಕಥೆ ಮುಗಿಸಿದ್ದು ಕಣ್ಣ ಮುಂದೆಯೇ ಇಲ್ಲವೇ! ಥೇ.... ☯

## ಕೋಳಿ ಫಾರಂ ಲೇಔಟ್ ಎಂಬ ಖತರ್ನಾಕ್ ಕೊಂಪೆ!

ಈ ಪ್ರಕರಣದ ಎ1 ಆರೋಪಿ ಗುರುಮೂರ್ತಿ ಅಲಿಯಾಸ್ ಗೋಪಿ ಕೋಳಿ ಫಾರಂ ಲೇಔಟ್‌ನ ಸುರೇಶ ಎಂಬ ವ್ಯಕ್ತಿಯ ಮಗ. ಇವನ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಹದಿನಾರರ ಬಡ ಹುಡುಗಿಯೊಬ್ಬಳನ್ನು ಮಿಸ್ ಯೂಸ್ ಮಾಡಿಕೊಂಡು ಬೇಜಾನ್ ಮಜಾ ಮಾಡಿದ ಆಸಾಮಿ, ಕಡೆಗೆ ಮದುವೆಯಾಗದೆ ಮೋಸ ಮಾಡಿದ ತಪ್ಪಿಗೆ, ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಹಾಕಿ ಜೈಲಿಗೆ ಕಳುಹಿಸಲಾಗಿತ್ತು.

ಇವನ ಅಣ್ಣನೊಬ್ಬ ಸ್ಟೇಟ್ ಇಂಟಲಿಜೆಂಟ್ಸ್‌ನಲ್ಲಿ ಕೆಲಸ ಮಾಡ್ತಿದ್ದಾನೆ. ಸೈಬರ್ ಎಕ್ಸ್‌ಪರ್ಟ್. ಹೀಗಾಗಿ, ಪೊಲೀಸ್ ಇಲಾಖೆ ಅವನನ್ನು ಹೆಚ್ಚಿನ ತರಭೇತಿ ಗಾಗಿ ವಿದೇಶಕ್ಕೆ ಕಳುಹಿಸಿದೆ. ಪೊಲೀಸ್ ಇಲಾಖೆಯಲ್ಲಿ ನಿಪುಣನಾಗಿರೋ ಅಣ್ಣಯ್ಯ, ಮನೇಲಿರೋ ಕಂತ್ರಿ ತಮ್ಮನಿಗೆ ಅದೇನೇನು ತಾಂತ್ರಿಕ ವಿದ್ಯೆ ಕಳುಸಿದ್ದಾನೋ ಏನೋ! ಅದನ್ನು ಬಳಸಿಕೊಂಡೆ ಈ ಕ್ರಿಮಿನಲ್ ಗುರುಮೂರ್ತಿ ಮೊನ್ನೆ ಅಮಾಯಕ ಬಾಲಕ ನಿಶ್ಚಿತ್‌ನನ್ನು ಕಿಡ್ನಾಪ್ ಮಾಡಿಕೊಂಡಿರೋದು! ಇಲ್ಲೇ ಹುಳಿಮಾವು ಕೋಣನಕುಂಟೆ ಬನ್ನೇರುಘಟ್ಟ ಮುಂತಾದ ಕಡೆ ನಿಂತುಕೊಂಡು, ಬಾಲಕನ ಕುಟುಂಬಕ್ಕೆ ವಿದೇಶದಿಂದ ಕಾಲ್ ಮಾಡಿದ್ದು(!) ಪೊಲೀಸರೆ ದಂಗಾಗುವಂತೆ ಧಿಕ್ಕು ತಪ್ಪಿಸಿದ್ದೆಲ್ಲ ಅಣ್ಣನಿಂದ ಕಲಿತಿದ್ದ ತಾಂತ್ರಿಕ ವಿದ್ಯೆಯಿಂದಲ್ಲದೆ ಮತ್ತೇನು??

ಅದಿರಲಿ, ಈ ಕೋಳಿ ಫಾರಂ ಲೇಔಟ್ ಇದೆಯಲ್ಲ, ಇದು ಬಲೇ ಡೇಂಜರಸ್ ಕೊಂಪೆ! ಬನ್ನೇರುಘಟ್ಟ ರೋಡ್, ನೈಸ್ ರೋಡ್ ಪಕ್ಕದಲ್ಲಿ ಪಿಲ್ಲಗಾನಹಳ್ಳಿಗೆ (ಗಾಂಧಿ ಗ್ರಾಮ) ಅಂಟಿಕೊಂಡು ಮಲಗಿರಿರುವ ಕೋಳಿ ಫಾರಂ ಲೇಔಟ್‌ನಲ್ಲಿ ಸಾವಿರಾರು ಎಕರೆ ಸರ್ಕಾರಿ ಜಾಗದಲ್ಲಿ ವಿವಿಧ ರಾಜ್ಯಗಳ ಜನ ಮನೆ ಕಟ್ಟಿಕೊಂಡು ನೆಲೆಸಿದ್ದಾರೆ. ನೋಡಿದರೆ ಬಾಂಬೆ ಧಾರವಿ ಸ್ಲಂ ಥರಾ ಕಾಣಿಸುತ್ತೆ! ಸಿಟಿಯಲ್ಲಿ ಕ್ರೈಂ ಮಾಡಿದ ಪಾತಕಿಗಳು, ಇನ್ನಾರೋ ಕ್ರಿಮಿನಲ್ಸ್ ಇಲ್ಲಿಗೆ ನುಗ್ಗಿ ಬಚ್ಚಿಟ್ಟುಕೊಂಡರೆ ಯಾವ ಸಾಂಗ್ಲಿಯಾನ ಬಂದ್ರೂ ಪತ್ತೆ ಮಾಡುವುದಕ್ಕೆ ಆಗೋದಿಲ್ಲ!

ಈಗಾಗಲೇ ಅಲ್ಲಿ ತುಂಬಾ ಕ್ರೈಂ ನಡೆಯುತ್ತವೆ, ಮೂಟೆ ಗಾಂಜಾ ಜಪ್ತಿ ಆಗಿದೆ... ಅಲ್ಲಿ ತುಂಬಾ ಜನ ರೌಡಿಗಳು ಅಡ್ಡಾ ಹಾಕ್ತಾರೆ ಅಂತೆಲ್ಲ ಸುದ್ದಿ ಓಡಾಡುತ್ತಿವೆ! ಹೀಗಾಗಿ, ಹುಳಿಮಾವು, ಕೋಣನಕುಂಟೆ, ಬನ್ನೇರುಘಟ್ಟ ಮೂರೂ ಠಾಣೆಗಳ ಪೊಲೀಸರು ಕೋಳಿ ಫಾರಂ ಲೇಔಟ್ ಮೇಲೆ ಹದ್ದಿನ ಕಣ್ಣು ಇಟ್ಟಿದ್ರೆ ಒಳ್ಳೇದು!! ☯

## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,


ಬೆಂಗಳೂರು-560 079. ಫೋನ್: 080-23588510, ಮೊ : 9513892666

4

ಈ ಸ್ಕೆಚ್ ಹಾಕಿಕೊಟ್ಟವನೇ ಮೊದಲ ಪ್ರಿಯಕರ ಯೋಗೇಶ್.

**ಸುಫಾರಿ ಕೊಟ್ಟ ಪತ್ನಿ ಚಂದ್ರಕಲಾ**

ಗಂಡ ಲೋಕೇಶ್‌ನನ್ನು ಕೊಲೆ ಮಾಡಬೇಕೆಂದು ಒಂದು ತಿಂಗಳ ಹಿಂದೆಯೇ ಸ್ಕೆಚ್ ಹಾಕಿದ್ದ ಚಂದ್ರಕಲಾ, ತಿಂಗಳ ಹಿಂದೆಯೇ ಹೊಸ ಮೊಬೈಲ್ ನಂಬರ್ ಸಿಮ್



ಕುಮಾರಸ್ವಾಮಿ ಜೊತೆ ಲೋಕೇಶ್


ಕಾರ್ಡ್ ಖರೀದಿ ಮಾಡಿದ್ದಳು. ನಿರಂತರ ಸಂಪರ್ಕದಲ್ಲಿದ್ದ ಪ್ರಿಯಕರ ಯೋಗೇಶನಿಗೆ ಕಾರ್ ಕೊಡಿಸಿದ್ದಳು, ಎರಡನೇ ಪ್ರಿಯಕರ ವರಲಿಂಗ ಅಲಿಯಾಸ್ ಪ್ರದೀಪನಿಗೆ ಹೊಸ ಬೈಕ್ ಕೊಡಿಸಿದ್ದಳು. ಈ ಇಬ್ಬರು ಪ್ರಿಯಕರನನ್ನು ಒಗ್ಗೂಡಿಸಿಕೊಂಡು, ಯೋಗೇಶನ ತನ್ನ ಸ್ವಗ್ರಾಮವಾದ ಮಂಡ್ಯದ ನವಿಲೆ ಗ್ರಾಮದ ರೌಡಿಶೀಟರ್‌ಗಳನ್ನು ಸಂಪರ್ಕ ಮಾಡಿ ಮಾಕಳಿ ಲೋಕೇಶ್‌ನನ್ನು ಕೊಲೆ ಮಾಡುವ ಸುಫಾರಿಯನ್ನು ಕೊಟ್ಟು, ಲೋಕೇಶ್‌ನ ಚಲನವಲನವನ್ನು

ಶ್ರೀನಿವಾಸ್‌ಗೌಡ, ಚನ್ನಪಟ್ಟಣ ಡಿವೈಎಸ್ಪಿ ಶ್ರೀಗಿರಿರವರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಸಿಪಿಐ ಪ್ರಕಾಶ್‌ರವರ ನೇತೃತ್ವದಲ್ಲಿ ಎಂ.ಕೆ. ದೊಡ್ಡಿ ಪಿಎಸ್‌ಐ ಸಹನಾ ಪಾಟೀಲ್ ಹಾಗೂ ತಂಡದವರು ಲೋಕೇಶ್‌ನ ಶವ ಪತ್ತೆಯಾದ ಸ್ಥಳ ಮಹಜರ್ ಮಾಡುವ ಸಂದರ್ಭದಲ್ಲಿ ಮೃತ ಲೋಕೇಶ್‌ನ ಬಗ್ಗೆ ಹೆಂಡತಿ ಚಂದ್ರಕಲಾಳನ್ನು ಕೆಲವು ವಿಷಯಗಳ ಬಗ್ಗೆ ಕಲೆ ಹಾಕುವ ಸಂದರ್ಭದಲ್ಲಿ ಎಲ್ಲಾ ವಿಚಾರ ಹೇಳಿ, ಕೊನೆಗೆ ನಿಮ್ಮ ಮೊಬೈಲ್ ನಂಬರ್ ಹೇಳಿ ಎಂದಾಗ, ನಾನು ಮೊಬೈಲ್ ಬಳಸುತ್ತಿಲ್ಲ. ಹಾಗಾಗಿ ನಂಬರ್ ಇಲ್ಲ ಎಂದಿದ್ದಾಳೆ ಚಂದ್ರಕಲಾ. ಆ ಸಂದರ್ಭದಲ್ಲಿ ಇಬ್ಬರು ಪ್ರಿಯಕರರಾದ ಯೋಗೇಶ್ ಮತ್ತು ವರಲಿಂಗ ಸ್ಥಳದಲ್ಲಿದ್ದು, ಸಾಕ್ಷಿಗಳಿಗೆ ಯೋಗೇಶ್ ಸಹಿ ಹಾಕಿದ್ದಾನಂತೆ. ಜೊತೆಗೆ ಮೃತ ಲೋಕೇಶನ ಮಗ ಹರ್ಷ ಕೆಂಗಲ್ ಬಳಿಯಿರುವ ವರಾಕಲ್ ಕಾಲೇಜು ವಸತಿ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದ ಮಗನನ್ನು ಚಂದ್ರಕಲಾಳೆ ಕರೆತಂದಿದ್ದಳು. ಅಲ್ಲಿ ಪೊಲೀಸರಿಗೆ ಕುಟುಂಬಸ್ಥರಿಗೆ ಲೋಕೇಶ್ ಮೃತಪಟ್ಟಿರುವ ವಿಚಾರ ತಿಳಿಯುವ ಮುನ್ನವೇ ಮಗನನ್ನು ಕಾಲೇಜಿನಿಂದ ನಿಮ್ಮ ಅಪ್ಪ ಸತ್ತು ಹೋಗಿದ್ದಾರೆ ಎಂದು ಹೇಳಿ ಕರೆತಂದಿದ್ದಳು. ನಂತರ ಲೋಕೇಶ್‌ನ ಶವದ ಮುಂದೆ ಗೋಳಾಡಿ, ಕಣ್ಣೀರು ಸುರಿಸಿ ಎಲ್ಲರ ಮುಂದೆ ಇದು ಆದ್ಮಹತ್ಯೆಯಲ್ಲ ಯಾರೋ ಕೊಲೆ ಮಾಡಿದ್ದಾರೆ ಎಂದು ಕಿರುಚಿಕೊಂಡಿದ್ದಳು. ಪೊಲೀಸರು ಶವವನ್ನು ಮಹಜರ್ ಮಾಡಿ ಮರಣೋತ್ತರ ಪರೀಕ್ಷೆಗೆ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ರವಾನಿಸಿ, ನಂತರ ಮೃತ ಲೋಕೇಶ್‌ನ ಶವವನ್ನು ವಾರಸುದಾರರಿಗೆ ಒಪ್ಪಿಸಿದ್ದರು.



ಸುಪಾರಿ ಪಡೆದ ಆರೋಪಿಗಳು

ಯಾಗಿದ್ದಾನೆ. ಆ ನಂತರ ಚಂದ್ರಕಲಾಳು ಹೊಸ ಸಿಮ್ ಖರೀದಿ ಮಾಡಿ ಮೃತ ಲೋಕೇಶನನ್ನು ಕೊಲೆ ಮಾಡಲು ಸ್ಕೆಚ್ ಹಾಕಿದ್ದ ವಿಚಾರವನ್ನು ಆ ಸಿಮ್ ನಿಂದಲೇ ಎಲ್ಲಾ ಮಾಹಿತಿ ಕೊಡುತ್ತಿದ್ದಳಂತೆ. ಪೊಲೀಸರು ಚಂದ್ರಕಲಾಳನ್ನು ಈ ಎಲ್ಲಾ ಆಧಾರದ ಮೇಲೆ ಆಕೆಯನ್ನು ವಿಚಾರಣೆಗೆ ಕರೆತಂದು ವಿಚಾರಣೆ ನಡೆಸಿದಾಗ ನಡೆದ ಕೊಲೆಯ ರಹಸ್ಯ ಬಯಲಾಗಿದೆ.



ಚಂದ್ರಕಲಾ ಚಿಕ್ಕಪ್ಪ ರಾಮಣ್ಣ

**ಮಹಾನಟಿಯಂತೆ ನಟಿಸಿದ್ದ ಚಂದ್ರಕಲಾ ಸಿಕ್ಕಿಬಿದ್ದಳು**

ಕೋಟಿ ಕೋಟಿ ಹಣ ಹೊಂದಿದ್ದ ಮಹಾನಟಿ ಕೋಳಿ ಅಂಗಡಿ ಚಂದ್ರಕಲಾ ಫುಲ್ ಎಂಜಾಯ್ ಮಾಡುತ್ತಿದ್ದಳಂತೆ. ಜೊತೆಗೆ ಕಾಮದಾಹದಲ್ಲಂತೂ ವಿಪರೀತ, ಇವಳಿಗೆ ಗಂಡನ ಸುಖಕ್ಕಿಂತ ಮಿಂಡಂದಿರ ಸುಖವೇ ಸ್ವರ್ಗ ಎಂದು

ಲೋಕೇಶ್ ಕಾರ್‌ಗೆ ಡಿಕ್ಕಿ ಹೊಡೆಯಲಾಗಿ, ಕಾರ್‌ನಿಂದ ಲೋಕೇಶ್ ಕೆಳಗೆ ಇಳಿದು ಡಿಕ್ಕಿ ಹೊಡೆದವರಿಗೆ ಚರ್ಚಿಸಲಾಗಿ, ಸ್ಕೆಚ್ ಹಾಕಿದಂತೆ ಲೋಕೇಶ್‌ನನ್ನು ಆತನ ಕಾರಿನ ಹಿಂಬದಿಯ ಸೀಟ್‌ಗೆ ತಳ್ಳಿ ಕೈಕಾಲುಗಳನ್ನು ಹಿಡಿದುಕೊಂಡು ಬಾಯಿಗೆ ವಿಷ ಕುಡಿಸಿ, ಲೋಕೇಶ್ ಮೃತಪಟ್ಟಿರುವುದು ಖಚಿತ ಮಾಡಿಕೊಂಡು ಕ್ಯಾಸಾಪುರ ರಸ್ತೆಯ ಪಕ್ಕದಗ ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿ, ಶವದ ಪಕ್ಕ ವಿಷದ ಬಾಟಲ್ ಇಟ್ಟು ಪರಾರಿಯಾಗಿದ್ದರು. ಅಲ್ಲಿಂದ ಎಸ್ಕೇಪ್ ಆದ ಸುಫಾರಿ ಕಿಲ್ಲರ್‌ಗಳು ಹುಲಿಯೂರು ದುರ್ಗದ ಕಾಲುವೆಯೊಂದರ ಬಳಿ ತಮ್ಮ ಬಟ್ಟೆಗಳನ್ನೆಲ್ಲಾ ಸುಟ್ಟು ಹಾಕಿ, ಆ ಕಾಲುವೆಯಲ್ಲಿ ಸ್ನಾನ ಮಾಡಿಕೊಂಡು ತಮಿಳುನಾಡಿಗೆ ಪರಾರಿಯಾಗಿದ್ದರು.

ಚಂದ್ರಕಲಾಳಿಂದ ಪ್ರಿಯಕರರಾದ ಯೋಗೇಶ್



ಆರೋಪಿಗಳನ್ನು ಬಂಧಿಸಿ ಪೊಲೀಸರು ಸ್ಥಳ ಮಹಜರ್ ನಡೆಸುತ್ತಿರುವುದು



ಪೊಲೀಸರು ಮಾಹಿತಿ ಸಂಗ್ರಹಿಸುತ್ತಿರುವುದು



ಚಂದ್ರಕಲಾ ಪ್ರಿಯಕರರನ್ನು ಬಂಧಿಸಿರುವುದು

ಚಂದ್ರಕಲಾಳಿಂದ ತಿಳಿದು ಆ ಎಲ್ಲಾ ಮಾಹಿತಿಯನ್ನು ಈ ರೌಡಿಶೀಟರ್‌ಗಳಿಗೆ ಕೊಡುತ್ತಿರುತ್ತಾನೆ ಯೋಗೇಶ್.

ಅಂದು ಜೂನ್ 24ರಂದು ರಾಮನಗರ ಮತ್ತು ಚನ್ನಪಟ್ಟಣದ ಗಡಿಭಾಗವಾದ ಕೃಷ್ಣಾಪುರದೊಡ್ಡಿ ಬಳಿ ವಿಷ ಸೇವನೆ ಮಾಡಿದ ರೀತಿಯಲ್ಲಿ ಶವವಾಗಿ ಪತ್ತೆಯಾಗಿದ್ದ ಲೋಕೇಶ್, ಈ ಸಾವಿನ ಬಗ್ಗೆ ಲೋಕೇಶ್‌ನ ಕುಟುಂಬದವರು, ಸ್ನೇಹಿತರು, ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಗೆ ದೂರು ಕೊಡಲಾಗಿ, ದೂರು ಕೊಟ್ಟಿದ್ದೇ ಲೋಕೇಶ್‌ನ ಹೆಂಡತಿ ಚಂದ್ರಕಲಾ, ದೂರು ದಾಖಲಿಸಿಕೊಂಡ ಪೊಲೀಸರು ವಿವಿಧ ಅಂತದಲ್ಲಿ ಲೋಕೇಶ್‌ನ ಸಾವಿನ ತನಿಖೆ ನಡೆಸಲು ಮುಂದಾಗಿದ್ದರು. ಒಂದೆಡೆ ಮೃತ ಲೋಕೇಶ್‌ನ ಪತ್ನಿ ಚಂದ್ರಕಲಾ ನನ್ನ ಪತಿಗೆ ಯಾರೂ ವೈರಿಗಳಿಲ್ಲ, ಅವರ ಸಾವಿಗೆ ನ್ಯಾಯ ಕೊಡಿಸಿ ಎಂದು ಚನ್ನಪಟ್ಟಣದ ಪ್ರವಾಸಿ ಮಂದಿರದಲ್ಲಿ ತನ್ನ ಕುಟುಂಬದವರಾದ ಲೋಕೇಶ್‌ನ ತಮ್ಮ ಕುಮಾರ, ಈಕೆಯ ಚಿಕ್ಕಪ್ಪ ರಾಮಯ್ಯ ಮತ್ತು ಗ್ರಾಮಸ್ಥರು ಜೊತೆಗೂಡಿ ಪತ್ರಿಕಾಗೋಷ್ಠಿ ನಡೆಸಿ, ಪೊಲೀಸರಿಗೆ ಸವಾಲೆಸೆಯುತ್ತಾ, ನನ್ನ ಗಂಡನ ಸಾವು ಆತ್ಮಹತ್ಯೆಯಲ್ಲ, ಅದು ಕೊಲೆ. ಆ ಕೊಲೆ ಮಾಡಿದವರನ್ನು ಸಾಕ್ಷಿ ಸಮೇತ ಪತ್ತೆ ಮಾಡಿಕೊಡಿ ನಮಗೂ ನೆಮ್ಮದಿ ಸಿಗುತ್ತದೆ ಜೊತೆಗೆ ಲೋಕೇಶ್‌ನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ಮನವಿ ಮಾಡಿಕೊಂಡಿದ್ದಳು.

ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್ಪಿ

ಕುಟುಂಬಸ್ಥರು ಮತ್ತು ಚಂದ್ರಕಲಾ ಕಾರ್ಯಗಳನ್ನು ಮುಗಿಸಿ, ಮೂರನೇ ದಿನ ಹಾಲುತುಪ್ಪ ಬಿಟ್ಟು, 11ನೇ ದಿನದ ಪುಣ್ಯತಿಥಿಯನ್ನು ಮಾಡಿ, ಕೊನೆಗೆ ತಿಂಗಳ ತಿಥಿ ಕಾರ್ಯವನ್ನು ಸಹ ಮುಗಿಸುತ್ತಾರೆ. ಈ ಎಲ್ಲಾ ಕಾರ್ಯಗಳನ್ನು ಚಂದ್ರಕಲಾ ಮಾಕಳಿ ಗ್ರಾಮದ ಗಂಡನ ಮನೆಯಲ್ಲೇ ಇದ್ದು, ಎಲ್ಲಾ ಕುಟುಂಬಸ್ಥರ ಜೊತೆ ಏನೂ ಗೊತ್ತಿಲ್ಲದ ಹಾಗೆ ನಟಿಸುತ್ತಿದ್ದಳು.

ಇತ್ತ ಈ ಪ್ರಕರಣದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಪೊಲೀಸರು, ಮೃತ ಲೋಕೇಶ್‌ನ ಹೆಂಡತಿ ಮೊಬೈಲ್ ನಂಬರ್ ಇಲ್ಲ ಎಂದಿದ್ದ ವಿಚಾರದಲ್ಲಿ ಅನುಮಾನಗೊಂಡು, ಚಂದ್ರಕಲಾಳ ಚಿಕ್ಕಪ್ಪ ರಾಮಣ್ಣ ಮತ್ತು ಕುಟುಂಬದವರನ್ನು ವಿಚಾರಣೆ ಮಾಡಲಾಗಿ ಆಕೆ ಬಳಸುತ್ತಿದ್ದ ಮೊಬೈಲ್ ನಂಬರನ್ನು ಪೊಲೀಸರಿಗೆ ಕೊಡಲಾಗಿ, ಸುಮಾರು ಆರು ಸಾವಿರ ಫೋನ್ ಕಾಲ್ ಸಿಡಿಆರ್ ಕಲೆ ಹಾಕಲಾಗಿ ಚಂದ್ರಕಲಾ ಮೊದಲ ಪ್ರಿಯಕರ ಯೋಗೇಶನು ಪತ್ತೆ





ಮೃತ ಲೋಕೇಶ್‌ನ ತಂದೆ, ತಾಯಿ ಅಕ್ಕ ಹಾಗೂ ತಮ್ಮ ಕುಮಾರ್

ಬಯಲಾಗಿದೆ. ಮೊದಲನೇ ಪ್ರಿಯಕರ ಯೋಗೇಶನು ಅದೇನು ಮೋಡಿ ಮಾಡಿದ್ದನೋ ಅವನೆಂದರೆ ಇವಳಿಗೆ ಪ್ರಾಣ ಕಾಮದಾಟದಲ್ಲಿ, ಇವನು ಕೊಡುವ ಸುಖ ಸಾಲುತ್ತಿರಲಿಲ್ಲ. ಮಾಕಳಿ ಗ್ರಾಮದ ವೀರಲಿಂಗ ಅಲಿಯಾಸ್ ಪ್ರದೀಪನು ಸಹ ಇವಳ ಮೋಹಕ್ಕೆ ಬಿದ್ದಿದ್ದ. ಅದೇನೇ ಇರಲಿ ಕೊಲೆ ಮಾಡಲು ಸ್ಕೆಚ್ ಹಾಕಲು ಈ ಇಬ್ಬರು ಇವಳಿಗೆ ಕೈ ಜೋಡಿಸಿದ್ದು ನೋಡಿದರೆ ಇವಳ ಹತ್ತಿರ ಹಣ ಇದೆ. ನಮ್ಮ ಜೀವನ ಸೂಪರ್ ಎಂದುಕೊಂಡಿದ್ದರು. ಅದರಂತೆ ಮೃತ ಲೋಕೇಶ್‌ನನ್ನು ಮುಗಿಸಲು ತೀರ್ಮಾನಿಸಿ ಜೂನ್ 23 ಸೋಮವಾರ ರಾತ್ರಿ ಮಾಕಳಿ ಗ್ರಾಮದ ಪಕ್ಕ ಇರುಳಿಗರದೊಡ್ಡಿಯಲ್ಲಿ ನಾಟಕ ಪ್ರದರ್ಶನವಿತ್ತು. ಈ ಲೋಕೇ ಶ್‌ಗೂ ನಾಟಕ ಎಂದರೆ ಹುಚ್ಚು. ಈತನು ನಾಟಕದಲ್ಲಿ ಅಭಿನಯಿಸುತ್ತಿದ್ದ. ಆ ನಾಟಕ ನೋಡಲು ಬೆಂಗಳೂರಿನಿಂದ ಸಂಜೆ ಗ್ರಾಮದತ್ತ ಹೊರಟಾಗ, ಮೊದಲೇ ಸಂಚು ರೂಪಿಸಿಕೊಂಡಿದ್ದರಿಂದ ಎಲ್ಲಾ ಮಾಹಿತಿಯನ್ನು ಲೋಕೇಶ್ ಹೆಂಡತಿ ಚಂದ್ರಕಲಾ ಪ್ರಿಯಕರ ಯೋಗೇಶನಿಗೆ ಕೊಡುತ್ತಿದ್ದಳು. ಲೋಕೇಶ್ ಬರುವ ದಾರಿಯನ್ನೇ ಕಾಯುತ್ತಿದ್ದ ಸುಫಾರಿ ಹಂತಕರು, ಲೋಕೇಶ್‌ನ ಕಾರು ಕಾಣಿಸುತ್ತಿದ್ದಂತೆ ಆ ಕಾರ್ ಫಾಲೋ ಮಾಡಿ ಬೇರೊಂದು ಕಾರು ಮತ್ತು ಬೈಕ್‌ನಲ್ಲಿದ್ದ ಹಂತಕರು

ಮತ್ತು ವೀರಲಿಂಗ ಸುಫಾರಿ ಪಡೆದು ನವಿಲೆ ಗ್ರಾಮದ ಇಬ್ಬರು ಅರ್ಕೆರೆಯ ಇಬ್ಬರು ರೌಡಿ ಶೀಟರ್‌ಗಳಿಗೆ ಮತ್ತೆ ಸುಫಾರಿ ಕೊಟ್ಟು 5 ಲಕ್ಷಕ್ಕೆ ಡೀಲ್ ಮುಗಿಸಿ ಮೊದಲು 2.50 ಲಕ್ಷ ರೂ. ಪಡೆದ ನಂತರ 1 ಲಕ್ಷ ಪಡೆದಿರುವುದು ಪೊಲೀಸ್ ತನಿಖೆಯಲ್ಲಿ ಚಂದ್ರಕಲಾಳ ಬ್ಯಾಂಕ್ ಸ್ಟೇಟ್‌ಮೆಂಟ್ ಮಾಹಿತಿ ಸಿಕ್ಕಿದೆ. ಈ ಎಲ್ಲಾ ಆಧಾರದ ಮೇಲೆ ಮತ್ತು ಮೃತ ಲೋಕೇಶ್ ತಂದೆ ಕೊಟ್ಟ ದೂರಿನನ್ವಯ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಮೊದಲು ಯುಡಿಆರ್ ಸಂಖ್ಯೆ 06/2025 ರಿತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ನಂತರ ಮೊ.ಸಂ. 84/2025 ಕಲಂ 103(1) ಜೊತೆಗೆ 3(5) ಬಿಎನ್‌ಎಸ್ ರಿತ್ಯಾ ಪ್ರಕರಣ ದಾಖಲಿಸಿಕೊಂಡು, ತನಿಖೆಯಲ್ಲಿ ಎಲ್ಲಾ ರೀತಿ ಮಾಹಿತಿಯನ್ನು ಸಂಗ್ರಹಿಸಿಕೊಂಡು ಚಂದ್ರಕಲಾ ಮತ್ತು ಯೋಗೇಶ್, ವೀರಲಿಂಗ ಹಾಗೂ ಇತರೆ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಡೆದ ಕೃತ್ಯದ ಘಟನೆಯ ಬಗ್ಗೆ ತಿಳಿಸಿದ್ದಾರೆ ಮತ್ತು ಒಳ ಸಂಚು ರೂಪಿಸಿ, ವಿಷ ಕುಡಿಸಿ ಕೊಲೆ ಮಾಡಿರುವುದು ಕಂಡು ಬಂದಿರುತ್ತದೆ. ಕೊನೆಗೆ ಎಲ್ಲರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ಮೃತ ಲೋಕೇಶ್‌ನ ಕೊಲೆ ಪ್ರಕರಣವನ್ನು ಭೇದಿಸಿದ ಚನ್ನಪಟ್ಟಣ ಗ್ರಾಮಾಂತರ ವೃತ್ತ ನಿರೀಕ್ಷಕರಾದ ಪ್ರಕಾಶ್ ಮತ್ತು ಎಂ.ಕೆ. ದೊಡ್ಡಿ ಪೊಲೀಸ್ ಠಾಣೆ ಪಿಎಸ್‌ಐ ಸಹನಾ ಪಾಟೀಲ್ ಹಾಗೂ ಸಿಬ್ಬಂದಿ ವರ್ಗದವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀನಿವಾಸ್‌ಗೌಡರವರು ಪ್ರಶಂಸಿಸಿದ್ದಾರೆ.

2 ☞

ರಲ್ಲಿ 1.00 ಎಕರೆ ಸರ್ಕಾರಿ ಗೋಮಾಳವನ್ನು ನಾಗಮ್ಮ ಎಂಬುವವರಿಗೆ ಮತ್ತು ಸರ್ವೆ ನಂ: 236ರಲ್ಲಿ 3.00 ಎಕರೆ ಸರ್ಕಾರಿ ಗೋಮಾಳವನ್ನು ನೀಲಮ್ಮ ಎಂಬುವವರಿಗೆ ಮಂಜೂರಾದ (Grant) ದಾಖಲೆಗಳನ್ನು ಸೃಷ್ಟಿಸಲಾಗಿದ್ದು, ಒಟ್ಟಾರೆಯಾಗಿ ಮಂಜೂರಾದ (?) 8.00 ಎಕರೆ ಸರ್ಕಾರೀ ಗೋಮಾಳ ಸ್ವತ್ತನ್ನು ಮಾಗಡಿ ಕ್ಷೇತ್ರದ ಶಾಸಕ ಹೆಚ್.ಸಿ. ಬಾಲಕೃಷ್ಣ ರವರ ಧರ್ಮಪತ್ನಿ ರಾಧಾ ಬಾಲಕೃಷ್ಣ ಅವರ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಳ್ಳಲಾಗಿದೆ. ನಂತರ ಈ 8.00 ಎಕರೆ ವಿಸ್ತೀರ್ಣದ ಸ್ವತ್ತಿನ ಖಾತೆಯನ್ನು ಶ್ರೀಮತಿ ರಾಧಾ ಬಾಲಕೃಷ್ಣ ಅವರ ಹೆಸರಿಗೆ ಮಾಡಲಾಗಿದೆ! ಈ 8.00 ಎಕರೆ ವಿಸ್ತೀರ್ಣದ ಅಮೂಲ್ಯ ಸರ್ಕಾರೀ ಸ್ವತ್ತಿನ ಮಾರು ಕಟ್ಟೆ ಬೆಲೆ ಸುಮಾರು ರೂ. 54 ಕೋಟಿ ರೂ.ಗಳಿಗೂ ಅಧಿಕವಾಗಿರುತ್ತದೆ!

ಇದರ ಜೊತೆ ಜೊತೆಗೇ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ರಲ್ಲಿ 1) ರಂಗಮ್ಮ W/o ಮುನಿ ನರಸಯ್ಯ ಹೆಸರಿಗೆ 2.30 ಎಕರೆ, 2) ವೆಂಕಟಮ್ಮ W/o ಪುಟ್ಟ ಮಾದಯ್ಯ ಹೆಸರಿಗೆ 6.00 ಎಕರೆ, 3) ಬಿ. ವಿ. ಚಂದರ್‌ರಾವ್ S/o ಆರ್. ವಿಜೇಂದ್ರ ರಾವ್ ಹೆಸರಿಗೆ 1.20 ಎಕರೆ, 4) ಬಿ. ವಿ. ಮನೋಹರ್ ಬಾಬಡೆ S/o ಆರ್. ವಿಜೇಂದ್ರ ರಾವ್ ಹೆಸರಿಗೆ 1.00 ಎಕರೆ, 5) ಶಿವಣ್ಣ S/o ನರಸಿಂಹಯ್ಯ ಹೆಸರಿಗೆ 3.00 ಎಕರೆ ಮತ್ತು 6) ಅಬ್ದುಲ್ ಸತ್ತರ್ S/o ಮಹಮದ್ ಇಸ್ಮಾಯಿಲ್ ಹೆಸರಿಗೆ 4.00 ಎಕರೆ ಸೇರಿದಂತೆ ಒಟ್ಟು 18.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳವನ್ನು ಮಂಜೂರು ಮಾಡಿರುವಂತೆ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಮೇಲೆ ತಿಳಿಸಿರುವ ಎಲ್ಲಾ ಆರು ಜನರು ಮಾಜಿ ಸಚಿವ ಹಾಲಿ ಶಾಸಕ ಎಸ್.ಟಿ. ಸೋಮಶೇಖರ್ ಅವರ ಆಪ್ತರಾಗಿದ್ದಾರೆ. ಸದರಿ ಆರು ಮಂದಿಯ ಹೆಸರಿಗೆ ಮಂಜೂರು ಮಾಡಿದಂತೆ ದಾಖಲೆಗಳನ್ನು ತಿದ್ದಲಾಗಿರುವ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ರ ಒಟ್ಟು 18.10 ಎಕರೆ ವಿಸ್ತೀರ್ಣದ ಅಮೂಲ್ಯ ಸರ್ಕಾರೀ ಸ್ವತ್ತಿನ ಮಾರುಕಟ್ಟೆ ಬೆಲೆ ಸುಮಾರು ರೂ. 110 ಕೋಟಿ ರೂ.ಗಳಿಗೂ ಅಧಿಕವಾಗಿರುತ್ತದೆ!


ಅಂದರೆ, ಕೆಲವೇ ದಿನಗಳ ಅಂತರದಲ್ಲಿ - ತಾವರೆಕೆರೆ ಹೋಬಳಿ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158ರ ಒಟ್ಟು 130.29 ಎಕರೆ ವಿಸ್ತೀರ್ಣದ ಅತ್ಯಮೂಲ್ಯ ಸರ್ಕಾರಿ ಗೋಮಾಳಸ್ವತ್ತಿನ ಪೈಕಿ ಈಗಾಗಲೇ ಶ್ರೀಮತಿ ರಾಧಾ ಬಾಲಕೃಷ್ಣ ಸೇರಿದಂತೆ ಒಟ್ಟು ಹದಿನೈದು ಮಂದಿ ಅನುಮಾನಾಸ್ಪದ ವ್ಯಕ್ತಿಗಳ ಹೆಸರುಗಳಲ್ಲಿ ಸುಮಾರು ರೂ. 150 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 26.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಸ್ವತ್ತನ್ನು ಕಬಳಿಸಲಾಗಿದೆ!

ಒಟ್ಟು 130.29 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಸ್ವತ್ತಿನ ಪೈಕಿ, ಇನ್ನುಳಿದಿರುವ 104.19 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಪ್ರದೇಶವನ್ನು ಸದ್ದಿಲ್ಲದೇ ಕಬಳಿಸುವ ನಿರಂತರ ಪ್ರಯತ್ನಗಳು ಪ್ರತೀ ದಿನ / ಪ್ರತೀ ಕ್ಷಣ ಯಾವುದೇ ಎಗ್ಗಿಲ್ಲದೇ ನಡೆಯುತ್ತಿದೆ!

**The Karnataka Land Revenue Act,** 1964 ನಿಯಮಗಳನುಸಾರ, ಯಾವುದೇ ಮಂಜೂರಾತಿ ಜಮೀನನ್ನು (Grant land) ಕನಿಷ್ಠ 15 ವರ್ಷಗಳ ತನಕ ಮಾರಾಟ ಮಾಡುವಂತಿಲ್ಲ, ಹಾಗೆಯೇ 15 ವರ್ಷಗಳ ನಂತರವೂ ಮಾರಾಟ ಮಾಡಬೇಕಿದ್ದಲ್ಲಿ ಸರ್ಕಾರದ ಕಂದಾಯ ಇಲಾಖೆಯ ಮುಖ್ಯಸ್ಥರಿಂದ Sale Permission (ಮಾರಾಟಕ್ಕೆ ಅನುಮತಿ) ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅಲ್ಲದೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಡಿ ಪ್ರದೇಶದಿಂದ 18 ಕಿ. ಮೀ. ಒಳಗಿರುವ ಸರ್ಕಾರೀ ಸ್ವತ್ತನ್ನು Grant ಮಾಡುವಂತಿಲ್ಲವೆಂಬ ನಿಯಮವಿದೆ. ಆದರೆ, ಈ ಎಲ್ಲ ನಿಯಮಗಳನ್ನು ಕುರುಬರ ಹಳ್ಳಿ ಗ್ರಾಮದ ಸರ್ಕಾರಿ ಗೋಮಾಳಪ್ರದೇಶದಲ್ಲಿ ಉಲ್ಲಂಘಿಸಲಾಗಿದೆ.

ಪ್ರಸ್ತುತ ಆಡಳಿತ ಪಕ್ಷದ ಪ್ರಭಾವೀ ಶಾಸಕರಾಗಿರುವ ಮಾಗಡಿ ಕ್ಷೇತ್ರದ ಹೆಚ್.ಸಿ. ಬಾಲಕೃಷ್ಣರವರು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿ, ಕಾನೂನಿನ ಎಲ್ಲಾ ನಿಯಮಗಳನ್ನು ಮೀರಿ - ಸುಮಾರು ರೂ. 54 ಕೋಟಿಗೂ ಹೆಚ್ಚು ಮೌಲ್ಯದ 8.00 ಎಕರೆ ಸರ್ಕಾರಿ ಗೋಮಾಳ ಸ್ವತ್ತನ್ನು ತಮ್ಮ ಧರ್ಮಪತ್ನಿ ಶ್ರೀಮತಿ ರಾಧಾ ಬಾಲಕೃಷ್ಣರವರ ಹೆಸರಿಗೆ ಮಾಡಿಸಿಕೊಂಡಿರುವುದು ದಾಖಲೆಗಳಿಂದ ಸ್ಪಷ್ಟವಾಗಿದೆ!

ಕೆಂಗೇರಿ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 03/04/2025ರಂದು (1) ಶ್ರೀಮತಿ ನೀಲಮ್ಮ ಮತ್ತು ಆಕೆಯ ಮಗ ಅರುಣ್ ಬಸವರಾಜ್‌ರವರುಗಳು 3.00 ಎಕರೆ ಸರ್ಕಾರಿ ಸ್ವತ್ತನ್ನು, (2) ಶ್ರೀಮತಿ ನಾಗಮ್ಮ



FIGHT AGAINST CORRUPTION

ರಮೇಶ್ ಎನ್.ಆರ್.
ಆಡಳಿತ ಪಕ್ಷದ ಮಾಜಿ ನಾಯಕರು : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಅಧ್ಯಕ್ಷರು : ಭ್ರಷ್ಟಾಚಾರ ವಿರೋಧಿ ವೇದಿಕೆ (ರಿ.)
ಮೊ : 9880011999
Page 1 of 4

ನಂ. 2910, 14ನೇ 'ಎ' ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070. | e-mail : rameshnrbbmp@gmail.com

ಉಲ್ಲೇಖ : 118/RO/2025-26 ದಿನಾಂಕ : 31/07/2025

ಇವರಿಗೆ,
ಅಪರ ಪೋಲೀಸ್ ಮಹಾ ನಿರ್ದೇಶಕರು,
ಕರ್ನಾಟಕ ಲೋಕಾಯುಕ್ತ,
ಅಂಬೇಡ್ಕರ್ ವೀದಿ,
ಬೆಂಗಳೂರು.

ಮಾನ್ಯರೇ,

ವಿಷಯ:– "54 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ 8.00 ಎಕರೆ ಸರ್ಕಾರಿ ಸ್ವತ್ತನ್ನು ಕಬಳಿಸಿರುವ ಶಾಸಕ H. C. ಬಾಲಕೃಷ್ಣ ಅವರ ಧರ್ಮಪತ್ನಿ ಸೇರಿದಂತೆ 09 ಮಂದಿಯ ವಿರುದ್ಧ ಹಾಗೂ 110 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ 18.10 ಎಕರೆ ವಿಸ್ತೀರ್ಣದ ಸರ್ಕಾರಿ ಸ್ವತ್ತನ್ನು ಕಬಳಿಸಿರುವ ಇತರೆ 06 ಮಂದಿ ಪ್ರಭಾವಿಗಳ ವಿರುದ್ಧ ಹಾಗೂ ಸಂಬಂಧಪಟ್ಟ ಭ್ರಷ್ಟ ಅಧಿಕಾರಿಗಳ ವಿರುದ್ಧ ದೂರು."

ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ – ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ರಲ್ಲಿ ಒಟ್ಟು 130.29 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ "ಸರ್ಕಾರಿ ಗೋಮಾಳ" ಪ್ರದೇಶವಾಗಿರುತ್ತದೆ. ಪ್ರಸ್ತುತ ಕುರುಬರ ಹಳ್ಳಿ ಗ್ರಾಮದ ಪ್ರತೀ ಎಕರೆ ಜಮೀನಿಗೆ ಕನಿಷ್ಠ ಆರು ಕೋಟಿ ರೂ. ಗಳಿಗೂ ಅಧಿಕವಿದ್ದು, ಒಟ್ಟಾರೆ 130.29 ಎಕರೆ ವಿಸ್ತೀರ್ಣದ ಜಮೀನಿನ ಮಾರುಕಟ್ಟೆ ಬೆಲೆ ಸುಮಾರು 800 ಕೋಟಿ ರೂ. ಗಳಿಗೂ ಅಧಿಕವಾಗಿರುತ್ತದೆ.

ಇಂತಹ ಅತ್ಯಮೂಲ್ಯ ಸರ್ಕಾರಿ ಸ್ವತ್ತಿನ ಮೇಲೆ ತಮ್ಮ ಕಾಕದೃಷ್ಟಿ ಬೀರಿರುವ ಪ್ರಭಾವೀ ಸರ್ಕಾರಿ ನೆಲಗಳ್ಳರು, ನಕಲಿ ದಾಖಲೆಗಳನ್ನು ಸೃಷ್ಟಿಸಿ – ಈ "ಸರ್ಕಾರಿ ಗೋಮಾಳ"ದ ಸ್ವತ್ತಿನಲ್ಲಿ ಸ್ವಲ್ಪ ಸ್ವಲ್ಪವೇ ಪ್ರಮಾಣದಲ್ಲಿ ಕಬಳಿಸುವ ಕಾನೂನು ಬಾಹಿರ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿದ್ದಾರೆ !!!

ಇಂತಹ ಪ್ರಭಾವೀ ಸರ್ಕಾರಿ ನೆಲಗಳ್ಳರ ಒತ್ತಡಗಳಿಂದಾಗಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ಕ್ಕೆ ಹೊಸದಾಗಿ ಸರ್ವೆ ನಂ: 233, 234, 235 ಮತ್ತು 236 ಎಂದು ಪೋಡಿ ಮಾಡಿ ಬದಲಾಯಿಸಲಾಗಿದೆ.


ಪ್ರಸ್ತುತ ಬೆಂಗಳೂರು ದಕ್ಷಿಣ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುವ "ತಾವರೆಕೆರೆ ಹೋಬಳಿ"ಯು ಈ ಮೊದಲು ಮಾಗಡಿ ತಾಲ್ಲೂಕು ಕಛೇರಿಯ ವ್ಯಾಪ್ತಿಗೆ ಒಳಪಟ್ಟಿತ್ತು. ಮಾಗಡಿ ತಾಲ್ಲೂಕು ಕಛೇರಿಯಲ್ಲಿದ್ದ ಬಹುತೇಕ ದಾಖಲೆಗಳನ್ನು ತಿದ್ದುಪಡಿಸುವಂತಹ ಕಾನೂನು ಬಾಹಿರ ಕಾರ್ಯಗಳನ್ನು, ಆ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ / ನೌಕರರ ಮೂಲಕ ಪ್ರಭಾವೀ ರಾಜಕಾರಣಿಗಳು ಮಾಡಿಸಿದ್ದಾರೆ.

ಮತ್ತು ಆಕೆಯ ಮಗ ಸಿದ್ಧರಾಜುರವರುಗಳು 1.00 ಎಕರೆ ಸರ್ಕಾರಿ ಸ್ವತ್ತನ್ನು, (3) ಶ್ರೀಮತಿ ಗಂಗೂಬಾಯಿ ಮತ್ತು ಆಕೆಯ ಮಕ್ಕಳಾದ ಜಗದೀಶ್ ಕೆ., ನಾಗೇಶ್ ಕೆ., ಶ್ರೀಮತಿ ಕಸ್ತೂರಿ ಕೆ. ಅವರುಗಳು 1.00 ಎಕರೆ ಸರ್ಕಾರಿ ಸ್ವತ್ತನ್ನು ಹಾಗೂ ದಿನಾಂಕ 15/05/2025 ರಂದು (4) ದಿವಂಗತ ನರಸಿಂಹಯ್ಯನವರ ಪುತ್ರ ಎನ್. ಶಿವಣ್ಣ ರವರುಗಳು 3.00 ಎಕರೆ ಸರ್ಕಾರಿ ಸ್ವತ್ತನ್ನು ಮಾಗಡಿ ಕ್ಷೇತ್ರದ ಶಾಸಕರಾಗಿರುವ ಹೆಚ್.ಸಿ. ಬಾಲಕೃಷ್ಣ ರವರ ಧರ್ಮಪತ್ನಿ ಶ್ರೀಮತಿ ರಾಧ ಕೆ. ಎಸ್. ರವರ ಹೆಸರಿಗೆ ಪ್ರತ್ಯೇಕ ಕ್ರಯ ಪತ್ರಗಳನ್ನು ಮಾಡಿಕೊಟ್ಟಿದ್ದಾರೆ!

ಹಾಗೆಯೇ, ಯಶವಂತಪುರ ಕ್ಷೇತ್ರದ ಶಾಸಕ ಮತ್ತು ಮಾಜಿ ಸಚಿವ ಎಸ್.ಟಿ. ಸೋಮಶೇಖರ್ ಅವರ ಆರು ಮಂದಿ ಆಪ್ತರು ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಸುಮಾರು ರೂ. 110 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 18.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಸ್ವತ್ತನ್ನು ಕಬಳಿಸಿರುವುದೂ ಸಹ ದಾಖಲೆಗಳಿಂದ ಸ್ಪಷ್ಟವಾಗಿದೆ!

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ರ ಒಟ್ಟು 130.29 ಎಕರೆ ವಿಸ್ತೀರ್ಣದ ಸುಮಾರು ರೂ. 800 ಕೋಟಿಗೂ ಹೆಚ್ಚುಮೌಲ್ಯದ ಸರ್ಕಾರಿ ಗೋಮಾಳದ ಪೈಕಿ, ಈಗಾಗಲೇ ಕಬಳಿಕೆಯಾಗಿರುವ ಸುಮಾರು ರೂ. 165 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 26.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳಪ್ರದೇಶವನ್ನು ಕೂಡಲೇ ಸರ್ಕಾರದ ವಶಕ್ಕೆ ತೆಗೆದುಕೊಂಡು ಎಲ್ಲಾ ಸರ್ಕಾರಿ ನೆಲಗಳ್ಳರವಿರುದ್ಧ ನಿಷ್ಪಕ್ಷಪಾತವಾಗಿ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡರನ್ನು ಒತ್ತಾಯಿಸಲಾಗಿದೆ ಹಾಗೂ ಕೂಡಲೇ ಈ ಅತ್ಯಮೂಲ್ಯ ಸರ್ಕಾರಿ ಸ್ವತ್ತಿಗೆ ರಕ್ಷಣಾ ಬೇಲಿ ಅಳವಡಿಸುವ ಸಂಬಂಧ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಲಾಗಿದೆ.

ಕಾನೂನಿನ ಸ್ಪಷ್ಟ ಅರಿವಿದ್ದರೂ ಸಹ, ಶಾಸಕ ಹೆಚ್.ಸಿ. ಬಾಲಕೃಷ್ಣ ಅವರು ಕಾನೂನಿನ ಎಲ್ಲಾ ನಿಯಮಗಳನ್ನೂ ಮೀರಿ ತಮ್ಮ ಧರ್ಮಪತ್ನಿ ಶ್ರೀಮತಿ ರಾಧ ಕೆ. ಎಸ್. ರವರ ಹೆಸರಿಗೆ ರೂ. 54 ಕೋಟಿಗೂ ಹೆಚ್ಚು ಮೌಲ್ಯದ 8.00 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಸ್ವತ್ತನ್ನು ನೊಂದಣಿ ಮಾಡಿಸಿಕೊಂಡಿರುವ ಶಾಸಕ ಎ. ಇ. ಬಾಲಕೃಷ್ಣ ಮತ್ತು ಅವರ ಧರ್ಮಪತ್ನಿ ಶ್ರೀಮತಿ. ರಾಧ ಕೆ. ಎಸ್. ಅವರುಗಳ ವಿರುದ್ಧ ಹಾಗೂ ಇವರೊಂದಿಗೆ ಷಾಮೀಲಾಗಿರುವ ಶ್ರೀಮತಿ. ನೀಲಮ್ಮ ಮತ್ತು ಆಕೆಯ ಮಗ ಅರುಣ್ ಬಸವರಾಜ್, ಶ್ರೀಮತಿ



KARNATAKA GOVERNOR'S SECRETARIAT No. 6611 30/07/25 RECEIVED RAJBHAVAN, BENGALURU
080-22254102

Date:30/07/2025
Place: Bengaluru

To
**His Excellency,**
**The Hon'ble Governor of Karnataka**
Raj Bhavan,
Bengaluru 560 001

Respected Sir,

I, RAMESH N. R. S/o Late Narayan Raju aged 56 years residing at #2910, 14TH "A" Cross Banashankari 2nd stage, Bengaluru 560 070 wish to bring to your kind notice and seek your esteemed authority's **sanction for approval of investigation under Section 17-A of the Prevention of Corruption Act, 1988,** the following persons for acts amounting to serious abuse of power, violation of public trust, and criminal misconduct:

1. **Sri. H. C. Balakrishna**
S/o Late H. G. Chennappa
Member of Legislative Assembly (MLA),
Magadi Assembly Constituency,
No: 06, Hulikatte Village,
Chakrabavi Post,
Magadi Hobli, Magadi Taluk,
Bangalore South District.
(Ramanagara District)

Page 1 of 6

ನಾಗಮ್ಮ ಮತ್ತು ಆಕೆಯ ಮಗ ಸಿದ್ಧರಾಜು, ಶ್ರೀಮತಿ ಗಂಗೂಬಾಯಿ ಮತ್ತು ಆಕೆಯ ಮಕ್ಕಳಾದ ಜಗದೀಶ್ ಕೆ., ನಾಗೇಶ್ ಕೆ., ಶ್ರೀಮತಿ ಕಸ್ತೂರಿ ಕೆ. ಹಾಗೂ ದಿವಂಗತ ನರಸಿಂಹಯ್ಯ ನವರ ಪುತ್ರ ಎನ್. ಶಿವಣ್ಣ ಇವರುಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಸಹ ಒತ್ತಾಯಿಸಲಾಗಿದೆ.


ಹಾಗೆಯೇ, ನಕಲಿ ದಾಖಲೆಗಳನ್ನು ಸೃಷ್ಟಿಸಿ, ರೂ. 110 ಕೋಟಿಗೂ ಹೆಚ್ಚು ಮೌಲ್ಯದ 18.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಪ್ರದೇಶವನ್ನು ಅಕ್ರಮವಾಗಿ ತಮ್ಮದನ್ನಾಗಿಸಿಕೊಂಡಿರುವ ಮಾಜಿ ಸಚಿವ / ಶಾಸಕ ಎಸ್.ಟಿ. ಸೋಮಶೇಖರ್ ಅವರ ಆಪ್ತರಾಗಿರುವ ರಂಗಮ್ಮ, ವೆಂಕಟಮ್ಮ, ಬಿ.ವಿ. ಚಂದರ್ ರಾವ್, ಬಿ ವಿ. ಮನೋಹರ್ ಬಾಬಡೆ, ಶಿವಣ್ಣ ಮತ್ತು ಅಬ್ದುಲ್ ಸತ್ತರ್ ಅವರುಗಳ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಕಂದಾಯ ಸಚಿವರನ್ನು ಆಗ್ರಹಿಸಲಾಗಿದೆ.

ಅಲ್ಲದೇ, ಸುಮಾರು 165 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 26.10 ಎಕರೆ ವಿಸ್ತೀರ್ಣದ ಸರ್ಕಾರಿ ಭೂ ಕಬಳಿಕೆಗೆ ಎಲ್ಲ ರೀತಿಯ ಸಹಕಾರ ನೀಡಿರುವ ಭ್ರಷ್ಟ ಅಧಿಕಾರಿಗಳಾದ ಕುರುಬರ ಹಳ್ಳಿ ಗ್ರಾಮದ ರಾಜಸ್ವ ನಿರೀಕ್ಷಕ ಮೋನಿಷ್, ಗ್ರಾಮ ಲೆಕ್ಕಿಗ (VA) ನಂಜೇಗೌಡ, ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಶೇಷ ತಹಸೀಲ್ದಾರ್ ಕೃಷ್ಣಮೂರ್ತಿ ಮತ್ತು ಬೆಂಗಳೂರು ನಗರ ಜಿಲ್ಲೆಯ ಉಪ ವಿಭಾಗಾಧಿಕಾರಿ (AC) ಅಪೂರ್ವ ಬಿದರಿ ಅವರುಗಳ ವಿರುದ್ಧವೂ ಸಹ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಕಂದಾಯ ಸಚಿವರನ್ನು ಆಗ್ರಹಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ: 158 ರಲ್ಲಿರುವ ರೂ. 150 ಕೋಟಿ ರೂ.ಗಳಿಗೂ ಹೆಚ್ಚುಟ್ಟಿಲ್ಯದ 26.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಪ್ರದೇಶವನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಲಾಗಿರುವ ಈ ಬೃಹತ್ ಭೂ ಕಬಳಿಕೆ ಹಗರಣವನ್ನು ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ಅಥವಾ ಇಐಈ ತನಿಖೆಗೆ ವಹಿಸುವ ಸಂಬಂಧ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಕಂದಾಯ ಸಚಿವರನ್ನು ಆಗ್ರಹಿಸಲಾಗಿದೆ.

**ಯಾರೆಲ್ಲರ ವಿರುದ್ಧ ದೂರು?!**

(1) ತಮ್ಮ ರಾಜಕೀಯ ಪ್ರಭಾವ ಬಳಸಿ ಮತ್ತು ಕಾನೂನಿನ ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿ - ಸುಮಾರು ಛ 54 ಕೋಟಿಗೂ ಹೆಚ್ಚು ಮೌಲ್ಯದ 8.00



FIGHT AGAINST CORRUPTION

Ramesh N.R.
Former Ruling Party Leader, BBMP
President : Anti-Corruption Forum (Regd.)
Phone : 9880011999

#2910, 14th 'A' Cross, BSK 2nd Stage, Bangalore - 560 070. | e-mail : rameshnrbbmp@gmail.com

Ref 116/RO/2025-26 Date 30/07/2025

To,
**The Joint Director,**
Enforcement Directorate,
K. H. Road, Shanthinagar,
Bangalore – 560 027

प्रवर्तन निदेशालय

Respected Sir,

Subject: "Complaint against MLA H. C. Balakrishna's wife Smt. Radha Balakrishna who has grabbed an 8.00 acres of government land worth more than ₹ 54 crores with the help of her husband and H. C. Balakrishna, MLA for using his power & influence to grab the precious govt: land by creating fake documents and other 06 influential people grabbed 18.10 acres government land worth more than ₹ 110/crores"

130.29 acres of Sy # 158 of Kurubara Halli village, Bangalore South Taluk of Yashavanthapura Assembly Constitution is completely Govt: Land (Sarkaari Gomaala).

Present market value of this 130.29 acres of Sy # 158 of Kurubara Halli village is more than ₹ 800 crores.

Because of some influential land grabbers, Revenue department officials changed the syrvey number 158 into the new Survey No: 233, 234, 235 and 236.

"Thavarekere Hobli" which is currently under the jurisdiction of Bangalore South Taluk, has previously been under the jurisdiction of the Magadi Taluk Office.

Most of the documents in the Magadi Taluk office have been illegally rectified the original documents by the official / employees who are working in Magadi Taluk office.

Similarly, the documents created for 8.00/acres of govt: land in the names of Narasimhiah, Gangu Bai, Nagamma and Neelamma ( 3.00 acres of govt: land in Sy # 233 in the name ofr Narasimhaiah, 1.00 acre of govt: land in Sy # 234 in the name of Gangu Bai, 1.00 acre of govt: land in Sy # 235 in the name of Nagamma and 3.00 / acres of govt: land in Sy # 236/in the name of Neelamma ) as a Grant land.

Then this 8.00 acres of Govt: Land worth more than ₹ 54 crores purchased by Smt. Radha Balakrishna w/o H. C. Balakrishna, MLA of Magadi Assembly constituency.

Page 1 of 3

ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳವನ್ನು ತಮ್ಮ ಪತ್ನಿಯ ಹೆಸರಿಗೆ ಮಾಡಿಸಿಕೊಂಡಿರುವ ಮಾಗಡಿ ಕ್ಷೇತ್ರದ ಶಾಸಕ ಎ. ಇ. ಬಾಲಕೃಷ್ಣ ಮತ್ತು ಅವರ ಧರ್ಮಪತ್ನಿ ಶ್ರೀಮತಿ. ರಾಧಾ ಬಾಲಕೃಷ್ಣ ಹಾಗೂ ಒಂಬತ್ತು ಮಂದಿ ಭೂ ಕಬಳಿಕೆದಾರರ ವಿರುದ್ಧ ಮತ್ತು (2) ಸುಮಾರು ಛ 110 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 18.10 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳವನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮದಾಗಿಸಿಕೊಂಡಿರುವ ರಂಗಮ್ಮ, ವೆಂಕಟಮ್ಮ, ಬಿ. ವಿ. ಚಂದರ್ ರಾವ್, ಬಿ. ವಿ. ಮನೋಹರ್ ಬಾಬಡೆ, ಶಿವಣ್ಣ ಮತ್ತು ಅಬ್ದುಲ್ ಸತ್ತರ್ ಅವರ ವಿರುದ್ಧ ಹಾಗೂ (3) ಸುಮಾರು 165 ಕೋಟಿಗೂ ಹೆಚ್ಚು ಮೌಲ್ಯದ ಒಟ್ಟು 26.10 ಎಕರೆ ವಿಸ್ತೀರ್ಣದ ಸರ್ಕಾರಿ ಭೂ ಕಬಳಿಕೆಗೆ ಎಲ್ಲ ರೀತಿಯ ಸಹಕಾರ ನೀಡಿರುವ ಭ್ರಷ್ಟ ಅಧಿಕಾರಿಗಳಾದ ಕುರುಬರ ಹಳ್ಳಿ ಗ್ರಾಮದ ರಾಜಸ್ವ ನಿರೀಕ್ಷಕ ಮೋನಿಷ್, ಗ್ರಾಮ ಲೆಕ್ಕಿಗ (VA) ನಂಜೇಗೌಡ, ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಶೇಷ ತಹಸೀಲ್ದಾರ್ ಕೃಷ್ಣಮೂರ್ತಿ ಮತ್ತು ಬೆಂಗಳೂರು ನಗರ ಜಿಲ್ಲೆಯ ಉಪ ವಿಭಾಗಾಧಿಕಾರಿ (AC) ಅಪೂರ್ವ ಬಿದರಿ ಅವರುಗಳ ವಿರುದ್ಧ...

ಲೋಕಾಯುಕ್ತದಲ್ಲಿ ಮತ್ತು ಜಾರಿ ನಿರ್ದೇಶನಾಲಯದಲ್ಲಿ ಸಂಪೂರ್ಣ ದಾಖಲೆಗಳ ಸಹಿತ ಸರ್ಕಾರಿ ಭೂ ಕಬಳಿಕೆ, ಭ್ರಷ್ಟಾಚಾರ, ವಂಚನೆ, ಅಧಿಕಾರ ದುರುಪಯೋಗ ಮತ್ತು ನಕಲಿ ದಾಖಲೆ ತಯಾರಿಕೆ ಪ್ರಕರಣಗಳನ್ನು ದಾಖಲಿಸಲಾಗಿದೆ.

(4) ಶಾಸಕ ಹೆಚ್.ಸಿ. ಬಾಲಕೃಷ್ಣ ಮತ್ತು ಶ್ರೀಮತಿ ರಾಧಾ ಬಾಲಕೃಷ್ಣ ಅವರ ವಿರುದ್ಧ ತನಿಖೆ ನಡೆಸಲು ಪ್ರಾಸಿಕ್ಯೂಷನ್ ಪರ್ಮಿಷನ್ ನೀಡುವಂತೆ ಘನತೆವೆತ್ತ ರಾಜ್ಯಪಾಲರಿಗೆ ದೂರು ನೀಡಲಾಗಿದೆ.

# ಸ್ನೇಹಿತನ ಪತ್ನಿಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಮಿತ್ರ ದ್ರೋಹಿ ಮರ್ಡರ್!



ಎ1 ಆರೋಪಿ ಇರ್ಫಾನ್



**ಸ್ನೇಹಿತನೊಬ್ಬ ತನ್ನ ಗೆಳೆಯನ ಮನೆಗೆ ಬಂದು ಹೋಗುವಾಗ ಆತನ ಪತ್ನಿಯನ್ನು ಪಟಾಯಿಸಿಕೊಂಡು ಆಕೆಯೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಂಡಿದ್ದನು. ಈ ವಿಷಯದ ಬಗ್ಗೆ ಇಬ್ಬರು ಸ್ನೇಹಿತರ ನಡುವೆ ಗಲಾಟೆಯಾಗಿ ಪತ್ನಿಯೊಂದಿಗೆ ಸಂಬಂಧವನ್ನು ಬಿಡುವಂತೆ ಹೇಳಿದರೂ ಕೇಳದೆ, ಪತ್ನಿಗೆ ಫೋನ್ ಮಾಡಿ ದೇಹಸುಖಕ್ಕಾಗಿ ಪುಸಲಾಯಿಸುತ್ತಾ ಟಾರ್ಚರ್ ಕೊಡುತ್ತಿದ್ದನು. ಸ್ನೇಹಿತ ಬದುಕಿದ್ದರೆ ನಮಗೆ ಮತ್ತು ನಮ್ಮ ಮನೆಗೆ ಮರ್ಯಾದೆ ಹೋಗುವುದೆಂದು ಗೆಳೆಯ ತನನ ಪತ್ನಿಯೊಂದಿಗೆ ಸೇರಿ ಸಂಚು ರೂಪಿಸಿ ಸ್ನೇಹಿತನೊಂದಿಗೆ ರಾಜಿ ಸಂಧಾನದ ಬಗ್ಗೆ ಮಾತನಾಡಬೇಕೆಂದು ಫೋನ್ ಮಾಡಿ ಮಾಡಿ ಕರೆಸಿಕೊಂಡು, ಮಾಂಸ ಕತ್ತರಿಸುವ ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿ, ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಕೋಲಾರ ನಗರದ ಗಲ್‌ಪೇಟೆ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**

**ಕೋಲಾರ**

✍ ಕೋಲಾರ ಮಂಜು




ಕೊಲೆಯಾದ ಅಮೀನ್



ಆರೋಪಿ ಹುಸ್ನಾಬೇಗಂ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಪಟ್ಟಣದ ವಾಸಿ ಅಮೀನ್ (28) ಜಿಮ್‌ವೊಂದರಲ್ಲಿ ಟ್ರೈನರ್ ಆಗಿ ಕೆಲಸ ಮಾಡುತ್ತಿರುತ್ತಾನೆ. ಇದೇ ಹೊಸಕೋಟೆ ಪಟ್ಟಣದ ಗಂಗಮ್ಮನ ಗುಡಿ ರಸ್ತೆಯಲ್ಲಿ ವಾಸವಾಗಿರುವ ಲೇಟ್ ಮಹಮದ್ ರಹಮತ್ ಉಲ್ಲಾರವರ ಮಗ ಎಂ.ಡಿ. ಇರ್ಫಾನ್ ಅಲಿಯಾಸ್ ಮಹಮದ್ ಇರ್ಫಾನ್ (35) ಮಟನ್ ಮಾರುಕಟ್ಟೆಯಲ್ಲಿ ಮಟನ್ ಅಂಗಡಿಯೊಂದನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುತ್ತಾನೆ. ಇವನು ಹುಸ್ನಾ ಬೇಗಂ ಎನ್ನುವವಳನ್ನು ಮದುವೆಯಾಗಿದ್ದು, ಇವರಿಗೆ ಇಬ್ಬರು ಮಕ್ಕಳಿರುತ್ತಾರೆ. ಜಿಮ್ ಟ್ರೈನರ್ ಅಮೀನ್ ಮತ್ತು ಮಟನ್ ಸ್ಟಾಲ್‌ನ ಇರ್ಫಾನ್ ಇಬ್ಬರು ಜೀಗರಿ ದೋಸ್ತುಗಳಾಗಿದ್ದು, ಅಮೀನ್‌ಗೆ ಜಿಮ್‌ನಲ್ಲಿ ಕೆಲಸ ಇಲ್ಲದಿರುವಾಗ ಇರ್ಫಾನ್‌ನ ಮಟನ್ ಸ್ಟಾಲ್‌ಗೆ ಬಂದು ಕಾಲ ಕಳೆಯುತ್ತಿದ್ದನು. ಅದೇ ರೀತಿ ಇರ್ಫಾನ್ ಸಹ ಬಿಡುವು ಇದ್ದಾಗ ಜಿಮ್‌ಗೆ ಹೋಗಿ ಅಮೀನ್‌ನನ್ನು ಮಾತನಾಡಿಸಿಕೊಂಡು ಬರುತ್ತಿದ್ದನು. ಅಂಗಡಿ ಮತ್ತು ಜಿಮ್‌ಗೆ ರಜಾ ಇದ್ದಾಗ ಇಬ್ಬರು ಸೇರಿ ಬೆಂಗಳೂರಿಗೆ ಹೋಗಿ ಸುತ್ತಾಡಿಕೊಂಡು ಬರುತ್ತಿದ್ದರು.

ಸುಮಾರು ವರ್ಷಗಳಿಂದ ಇಬ್ಬರು ಸ್ನೇಹಿತರಾಗಿದ್ದರು. ಇವರ ಮಾತುಕತೆ, ವ್ಯವಹಾರವೆಲ್ಲವನ್ನು ಹೊರಗಡೆ ಮಾಡುತ್ತಿದ್ದರು ವಿನಃ ಮನೆಗಳವರೆಗೂ ಬರುತ್ತಿರಲಿಲ್ಲ. ಕಳೆದ ಒಂದು ವರ್ಷದ ಹಿಂದೆ ಒಂದು ದಿನ ಸಂಜೆ ಅಮೀನ್ ಜಿಮ್ ಮುಗಿಸಿಕೊಂಡು ಇರ್ಫಾನ್ ಮಟನ್ ಸ್ಟಾಲ್ ಬಳಿಗೆ ಹೋದಾಗ, ಅಂಗಡಿಯಲ್ಲಿ ಕೆಲಸಗಾರ ಜಾಕೀರ್‌ಪಾಷ ಮಾತ್ರ ಇದ್ದನು. ಆಗ ಅವನ ಬಳಿ ಸ್ನೇಹಿತ ಇರ್ಫಾನ್‌ನ ಬಗ್ಗೆ ಕೇಳಲಾಗಿ ನಮ್ಮ ಯಜಮಾನರಿಗೆ ಮೈಹುಷಾರಿಲ್ಲ ಅದಕ್ಕೆ ಬಂದಿಲ್ಲ, ಅಂಗಡಿಯನ್ನು ನಾನೇ ನೋಡಿಕೊಳ್ಳುತ್ತಿರುವುದಾಗಿ ಹೇಳಿದನು. ಆಗ ಅಮೀನ್ ಪಟ್ಟಣದ ಗಂಗಮ್ಮನ ಗುಡಿ ರಸ್ತೆಯಲ್ಲಿರುವ ಇರ್ಫಾನ್ ಮನೆಯನ್ನು ಹುಡುಕಿಕೊಂಡು ಹೋಗುತ್ತಾನೆ. ಅಲ್ಲಿ ಇರ್ಫಾನ್‌ನ ಪತ್ನಿ ಬಾಗಿಲನ್ನು ತೆಗೆದು ಯಾರು ನೀವು ಎಂದು ಕೇಳುತ್ತಾಳೆ. ಅದಕ್ಕೆ ಅಮೀನ್ ನಾನು ಇರ್ಫಾನ್ ಸ್ನೇಹಿತನೆಂದು ಹೇಳುತ್ತಾನೆ. ಆಗ ಇರ್ಫಾನ್‌ನ ಪತ್ನಿ ಕೊಠಡಿಯಲ್ಲಿ ಮಲಗಿದ್ದ ಗಂಡನ ಬಳಿಗೆ ಹೋಗಿ, ಅಮೀನ್ ಎನ್ನುವವರು ನಿಮ್ಮನ್ನು ಹುಡುಕಿಕೊಂಡು ಬಂದಿರುವುದಾಗಿ ಹೇಳುತ್ತಾಳೆ. ಜ್ವರದಿಂದ ಬಳಲುತ್ತಿದ್ದ ಇರ್ಫಾನ್ ಅವನು ನನ್ನ ಗೆಳೆಯ. ಮನೆ ಒಳಗೆ ಕರೆದುಕೊಂಡು ಬರುವಂತೆ ತಿಳಿಸುತ್ತಾನೆ. ಅದರಂತೆ ಪತ್ನಿಯು ಅಮೀನ್‌ನನ್ನು ಮನೆ ಒಳಗೆ ಬರುವಂತೆ ಹೇಳುತ್ತಾಳೆ. ಆಗ ಅಮೀನ್ ತನ್ನ ಗೆಳೆಯ ಮಲಗಿದ್ದ ಕೊಠಡಿ ಒಳಕ್ಕೆ ಹೋಗಿ ಯೋಗಕ್ಷೇಮವನ್ನು ವಿಚಾರಿಸುತ್ತಿರುವಾಗ ಇರ್ಫಾನ್ ಪತ್ನಿಯು ಟೀ ಮಾಡಿಕೊಂಡು ಬಂದು ಅಮೀನ್‌ಗೆ ಕುಡಿಯಲು ಕೊಡುತ್ತಾಳೆ. ಆಗ ಗಂಡ ಇರ್ಫಾನ್ ಇವನು ನನ್ನ ಸ್ನೇಹಿತ ಅಮೀನ್, ಜಿಮ್‌ವೊಂದರಲ್ಲಿ ಟ್ರೈನರ್ ಆಗಿ ಕೆಲಸ ಮಾಡುತ್ತಿದ್ದಾನೆಂದು ಪತ್ನಿಗೆ ಪರಿಚಯ ಮಾಡಿಕೊಡುವುದಲ್ಲದೆ, ಇವಳು ನನ್ನ ಪತ್ನಿ ಹುಸ್ನಾ ಬೇಗಂ ಎಂದು ಅಮೀನ್‌ಗೆ ಪರಿಚಯ ಮಾಡಿಕೊಡುತ್ತಾನೆ. ನಂತರ ಅಮೀನ್ ಸ್ವಲ್ಪ ಹೊತ್ತು ಗೆಳೆಯನೊಂದಿಗೆ ಇದ್ದು ಹೊರಡುವಾಗ ಇನ್ನು ಸ್ವಲ್ಪ ದಿನ ಅಂಗಡಿಗೆ ಹೋಗುವುದಿಲ್ಲ. ನೀನೇ ಮನೆಗೆ ಬಂದು ಹೋಗುತ್ತಿರು ಎಂದು ಹೇಳುತ್ತಾನೆ. ಆಗ ಅಲ್ಲಿಯೇ ಇದ್ದ ಇರ್ಫಾನ್‌ನ ಪತ್ನಿ ಹುಸ್ನಾ ಬೇಗಂ ಸಹ ಗಂಡ ಒಬ್ಬರೇ ಇರುತ್ತಾರೆ, ತಾವೇ ಮನೆಗೆ ಬಂದು ಮಾತನಾಡಿಸಿಕೊಂಡು ಹೋಗುತ್ತಿರಿ ಎಂದು ಹೇಳುತ್ತಾಳೆ. ಅದರಂತೆ ಅಮೀನ್, ಗೆಳೆಯ ಮನೆಯಲ್ಲಿದ್ದ ಹತ್ತು ದಿನಗಳ ಕಾಲ ಬೆಳಿಗ್ಗೆ, ಸಂಜೆ ಬಂದು ಹೋಗುತ್ತಾನೆ.



ಎಸ್ಪಿ ನಿಖಿಲ್



ಎಎಸ್ಪಿ ರವಿಶಂಕರ್



ಡಿವೈಎಸ್ಪಿ ಎಂ.ಹೆಚ್. ನಾಗ್ತೆ



ಪಿಐ ಎಂ.ಜೆ. ಲೋಕೇಶ್



ಪಿಎಸ್ಐ ವಿಠಲ್ ತಳವಾರ್

**ಹುಸ್ನಾ ಬೇಗಂನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡ ಸ್ನೇಹಿತ**

ಗೆಳೆಯನ ಮನೆಗೆ ಬಂದು ಹೋಗುತ್ತಾ ಇರುವಾಗ ಇರ್ಫಾನ್‌ನ ಪತ್ನಿ ಹುಸ್ನಾ ಬೇಗಂ ಮತ್ತು ಅಮೀನ್ ನಡುವೆ ಸ್ನೇಹ ಬೆಳೆದು ದಿನಗಳು ಕಳೆದಂತೆ ಅಮೀನ್‌ನ ಮೈಕಟ್ಟಿಗೆ ಮನಸೋತ ಹುಸ್ನಾ ಬೇಗಂ ಅವನನ್ನು ಪ್ರೀತಿಸುತ್ತಾ, ಅವನ ಜೊತೆ ಅನೈತಿಕ ಸಂಬಂಧವನ್ನು ಬೆಳೆಸಿಕೊಳ್ಳುತ್ತಾಳೆ. ಇರ್ಫಾನ್ ಮಟನ್ ಸ್ಟಾಲ್‌ಗೆ ಹೋಗುತ್ತಿದ್ದಂತೆ ಹುಸ್ನಾ ಬೇಗಂ ಅಮೀನ್‌ಗೆ ಫೋನ್ ಮಾಡಿ ಮನೆಗೆ ಕರೆಸಿಕೊಂಡು ಇಬ್ಬರು ಸುಖಿಸುತ್ತಿದ್ದರು. ಗಂಡ ಮತ್ತು ಅಕ್ಕಪಕ್ಕದ ಮನೆಯವರಿಗೆ ಗೊತ್ತಾಗದ ರೀತಿಯಲ್ಲಿ ಸುಮಾರು ತಿಂಗಳುಗಳಿಂದ ಮನೆಯಲ್ಲಿ ಇಬ್ಬರು ಸೇರುತ್ತಿದ್ದರು. ಒಂದು ದಿನ ಮಧ್ಯಾಹ್ನ ಕೆಲಸಗಾರ ಜಾಕೀರ್ ಪಾಷ ಅಂಗಡಿಯಿಂದ ಮಟನ್ ತೆಗೆದುಕೊಂಡು ಬಂದಾಗ, ಮನೆ ಬಾಗಿಲು ಮುಚ್ಚಿರುತ್ತದೆ. ಆಗ ಅವನು ಕದ ತಟ್ಟುತ್ತಾನೆ. ಬಾಗಿಲನ್ನು ತೆರೆದ ಹುಸ್ನಾ ಬೇಗಂ ಏನು ಎಂದು ಕೇಳುತ್ತಾಳೆ. ಅದಕ್ಕೆ ಅವನು ಅಣ್ಣ ಮಟನ್ ಕಳುಹಿಸಿದ್ದಾರೆಂದು ಹೇಳಿ ಮನೆ ಒಳಗೆ ಹೋಗಿ ಮಟನ್ ಇಡಲು ಹೋದಾಗ ಕೊಠಡಿಯಲ್ಲಿ ಜಿಮ್ ಟ್ರೈನರ್ ಅಮೀನ್ ಇರುವುದನ್ನು ನೋಡಿದ ಜಾಕೀರ್‌ಪಾಷ ತನಗೆ ಏನು ಗೊತ್ತಿಲ್ಲದವನಂತೆ ಅಂಗಡಿಗೆ ಹೊರಟು ಬಿಡುತ್ತಾನೆ. ಅಂಗಡಿಯಲ್ಲಿದ್ದ ಇರ್ಫಾನ್ ಕೆಲಸಗಾರನಿಗೆ ಮಟನ್ ಕೊಟ್ಟು ಬಂದೆಯಾ ಎಂದು ಕೇಳಿದಕ್ಕೆ ನಾನು ಮನೆಗೆ ಹೋದಾಗ ಅಮೀನ್ ಅಕ್ಕನ ಜೊತೆ ಮಾತನಾಡುತ್ತಾ ಇದ್ದರು, ಅಣ್ಣ ಮಟನ್ ಕಳುಹಿಸಿದ್ದಾರೆಂದು ಹೇಳಿ ಕೊಟ್ಟು ಬಂದೆನೆಂದು ಹೇಳಿದನು.

ಇದೇ ರೀತಿ ಒಂದು ಸಂಜೆ ಇರ್ಫಾನ್ ಮನೆಗೆ ಬಂದಾಗ ಸ್ನೇಹಿತ ಅಮೀನ್ ಇರುವುದನ್ನು ನೋಡಿ, ಇಲ್ಲಿ ಏಕೆ ಬಂದೆ. ನಾನು ಅಂಗಡಿಯಲ್ಲಿಯೇ ಇದ್ದೇನಲ್ಲ ಎಂದು

☞15



ಆರೋಪಿಗಳಾದ ಮಹಮದ್ ಸಾಕೀಬ್ ಹಾಗೂ ಜಾಕೀರ್‌ಪಾಷ

# ಮಕ್ಕಳಿಗೆ ಅಪ್ಪ ಅರ್ಥವಾಗಿಬಿಟ್ಟರೆ ಅಪ್ಪನ ಜನ್ಮ ಸಾರ್ಥಕ..!




ಅಪ್ಪ ಅಷ್ಟು ಸುಲಭವಾಗಿ ಮಕ್ಕಳಿಗಾಗಲಿ, ಮಡದಿಗಾಗಲಿ, ಅರ್ಥವಾಗುವುದೇ ಇಲ್ಲ, ಅಪ್ಪನ ಅಂತರಾಳ ಅರ್ಧಾಂಗಿ ಎನಿಸಿಕೊಂಡು ಸದಾ ಅಪ್ಪನ ಮಗ್ಗುಲಲ್ಲೇ ಇರುವ ಅಮ್ಮನಿಗೂ ಸಹ ಅರ್ಥವಾಗುವುದಿಲ್ಲ, ಮೇಲಾಗಿ ಅಪ್ಪನನ್ನು ಅರ್ಥ ಮಾಡಿಕೊಳ್ಳಲು ಅಮ್ಮ ಬಿಡುವುದೇ ಇಲ್ಲ, ನಿಮ್ಮಪ್ಪ ಯಾವಾಗಲೂ ಹೀಗೆ, ಅನ್ನುತ್ತಲೇ ಇರುತ್ತಾಳೆ..

ನಿಜ ಹೇಳಬೇಕೆಂದರೆ ಸಾಲಗಾರರಿಗೆ ಅಪ್ಪ ಚೂರುಪಾರು ಅರ್ಥವಾಗಿರುತ್ತಾನೆ.. ತನ್ನಗೆಳೆಯರಲ್ಲಿ ಒಬ್ಬಿಬ್ಬರಿಗೆ ಅಪ್ಪ ಕಾಲು ಭಾಗ ಮಾತ್ರ ಅರ್ಥ ಆಗಿರುತ್ತಾನೆ. ಅಪ್ಪನ ಸವೆದು ಹೋಗಿರುವ ಚಪ್ಪಲಿಗಳಿಗೆ, ಅಪ್ಪ ವರ್ಷಗಟ್ಟಲೆ ಹಾಕಿದ ಹಳೆಯ ಬಟ್ಟೆಗಳಿಗೆ ಮಕ್ಕಳು ಮತ್ತು ಮಡದಿಗಿಂತಲೂ ಅಪ್ಪ ಚೆನ್ನಾಗಿ ಅರ್ಥ ಆಗಿರುತ್ತಾನೆ..

ಅವುಗಳು ಹಳೆಯದಾದರೂ ಅಪ್ಪ ಅವುಗಳನ್ನೇ ಪ್ರೀತಿಯಿಂದ ಬಳಸುತ್ತಾನೆ..ಅಪ್ಪ ಅವುಗಳನ್ನು ಬದಲಿಸುವುದಿಲ್ಲ, ಆ ಹಳೆಯ ವಸ್ತುಗಳಲ್ಲಿಯೇ ಅಪ್ಪ ಹೊಸದನ್ನು ಕಂಡುಕೊಂಡಿದ್ದಾನೆ..

ಅಪ್ಪ ಹಳೆಯ ಕಾಲದವ... ಆತನಿಗೆ ಹೊಳೆಯುವುದೆಲ್ಲಾ ಬರೀ ಹಳೆಯ ಯೋಚನೆಗಳು, ಅಪ್ಪ ಈಗಿನ ಕಾಲಕ್ಕೆ ತಕ್ಕಂತೆ ಆಗಿಲ್ಲ ಅನ್ನುವ ಮಡದಿ ಮಕ್ಕಳು .ಅಪ್ಪ ಆದರೂ ಅಪ್ಪನ ಬೆಲೆ ಮೂರು ಕಾಸು.. ಅಪ್ಪನ ಆಸೆ ಆಕಾಂಕ್ಷೆಗಳಿಗೆ ಮಕ್ಕಳ ದೃಷ್ಟಿಯಲ್ಲಿ ಅರ್ಥವೇ ಇಲ್ಲ... ಅಪ್ಪನ ಪರಿಶ್ರಮ ತ್ಯಾಗಕ್ಕೆ ಬೆಲೆಯೂ ಇಲ್ಲ, ಎಲ್ಲರೂ ಮಲಗಿರುವಾಗಲೂ, ಎಚ್ಚರವಾಗಿರುವ ಅಪ್ಪ ಮಲಗಿದ ತನ್ನ ಹೆಂಡತಿ ಮತ್ತು ಮಕ್ಕಳ ಮುಖದಲ್ಲಿ ತನ್ನನ್ನು ಹುಡುಕಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನಿಸಿ ವಿಫಲನಾಗುತ್ತಾನೆ

ಹಬ್ಬ, ಉತ್ಸವ, ಮದುವೆ, ಪ್ರವಾಸ ಎಲ್ಲದಕ್ಕೂ ಬಣ್ಣಬಣ್ಣದ ಹೊಸ ಬಟ್ಟೆ ಖರೀದಿಸುವ ಮನೆಮಂದಿಯ ಕಣ್ಣಿಗೆ ಅಪ್ಪನ ಹಳೆಯ ಪ್ಯಾಂಟ್ ಹರಿದ ಷರ್ಟ್, ಸವೆದುಹೋದ ಓಬವ್ವನ ಕಾಲದ ಚಪ್ಪಲಿಗಳು ಕಾಣುವುದೇ ಇಲ್ಲ.. ಸರಿ ರಾತ್ರಿಯಲ್ಲಿ ಮಲಗಿ ನಿದ್ರಿಸುತ್ತಿರುವ ತನ್ನವರ ಮುಖಗಳನ್ನು ಒಮ್ಮೆ ದಿಟ್ಟಿಸಿ ನೋಡಿ ತನ್ನ ಸ್ಥಿತಿಗೆ, ಅಸಹಾಯಕತೆಗೆ, ಮಮ್ಮಲ ಮರುಗುವ ಅಪ್ಪನ ಕಂಗಳಲ್ಲಿ ಸುರಿವ ಧಾರಾಕಾರ ಕಣ್ಣೀರು... ಒರೆಸುವರಾರು..?.

ತನ್ನ ಮಕ್ಕಳು ಮಡದಿಗೆ ಸಣ್ಣ ಜ್ವರ ಬಂದರೂ, ಚಿಕಿತ್ಸೆ ಕೊಡಿಸಿದ ನಂತರವೂ, ಸಾವಿರ ದೇವರನ್ನು ತನ್ನವರ ಅರೋಗ್ಯ ಭಾಗ್ಯಕ್ಕಾಗಿ ಪ್ರಾರ್ಥಿಸುವ ಅಪ್ಪ.. ಅದೇ ಅಪ್ಪನ ಅರೋಗ್ಯ, ಗಂಭೀರ ಸ್ಥಿತಿಗೆ ತಲುಪಿ ವಾರಗಟ್ಟಲೆ ಅಪ್ಪ ಏಕಾಂಗಿಯಾಗಿ ಆಸ್ಪತ್ರೆಗಳಿಗೆ ಅಲೆದರೂ, ಕಂಡೂ ಕಾಣದಂತಿರುವ ಕುಟುಂಬಸ್ಥರು. ಜನರೇಷನ್ ಗ್ಯಾಪ್ ಎನ್ನುವುದು ನಿಜಕ್ಕೂ ಇಷ್ಟೊಂದು ಬೀಕರವೇ..? ಅಯ್ಯೋ ದುರ್ವಿಧಿಯೇ...? ಎಂದು ಒಡಲಲ್ಲಿಯೇ ನೋವ ನುಂಗಿ ನಗುವ ಅಪ್ಪ.

ಅಪ್ಪನ ಹಳೆಯ ಉಡುಪುಗಳೊಳಗೆ ಅವಿತಿರುವ ಸುಂದರ ಮನಸ್ಸು ಯಾರಿಗೂ ಕಾಣಿಸುವುದಿಲ್ಲ.. ಅಪ್ಪನ ಮುಗುಳ್ನಗುವಿನಲ್ಲಿ ಅವಿತ ಅಸಂಖ್ಯಾತ ನೋವುಗಳು ಯಾರಿಗೂ ಅರ್ಥ ಆಗುವುದಿಲ್ಲ..

**ಯಾಕೆ ಹುಟ್ಟಿಸಬೇಕಿತ್ತು...?**
**ಒಮ್ಮೊಮ್ಮೆ ಮಡದಿ ಮಕ್ಕಳ ಪ್ರಶ್ನೆ...?**

ಎಲ್ಲದಕ್ಕೂ ಉತ್ತರ ತನ್ನ ಬಳಿಯಿದ್ದರೂ, ಯಾವ ಪ್ರಶ್ನೆಗಳಿಗೂ ಉತ್ತರ ನೀಡಲಾಗದ ಅಸಹಾಯಕ ಅಪ್ಪ. ಎಲ್ಲಾ ಇದ್ದರೂ ಏಕಾಂಗಿ.

ಅಪ್ಪನ ಮಾತು ಹಿಡಿಸುವುದಿಲ್ಲ, ಅಪ್ಪನ ಹಠ ಇಷ್ಟವಾಗುವುದಿಲ್ಲ, ಉಪದೇಶವಂತೂ ಮಕ್ಕಳ ಅಪಹಾಸ್ಯಕ್ಕೆ ಈಡಾಗುತ್ತದೆ. ಅವರ ಸಹಭಾಗಿತ್ವವೂ ಬೇಕಿಲ್ಲ, ಅಪ್ಪ ಸದಾ ಅನಗತ್ಯ ಪ್ರಶ್ನೆ ಕೇಳುವ ಅಧಿಕ ಪ್ರಸಂಗಿ. ಮಕ್ಕಳು ಬೆಳೆದಂತೆ ಅಪ್ಪನ ಬಗೆಗಿನ ನಕಾರಾತ್ಮಕ ಪಟ್ಟಿಯೂ ಬೆಳೆಯತೊಡಗುತ್ತದೆ. ತನ್ನ ಐಹಿಕ ಸುಖ ಮತ್ತು ಆಡಂಬರಗಳನ್ನೆಲ್ಲಾ ಕುಟುಂಬಕ್ಕಾಗಿ ತಿಲಾಂಜಲಿ ಇಟ್ಟ ಅಪ್ಪ ಇಂದು ಎಲ್ಲರಿಂದಲೂ ಕಟು ಮಾತುಗಳನ್ನು ಕೇಳುವ ಸಹನಾಮಯಿ.

ಕುಟುಂಬದ ಭದ್ರತೆಗಾಗಿ, ಪ್ರತಿಷ್ಠೆಗಾಗಿ, ಐಕ್ಯತೆಗಾಗಿ, ಸಮಾಧಾನಕ್ಕಾಗಿ ಸಂಕಷ್ಟಗಳನ್ನು ಪ್ರಕಟಿಸದೆ ಹೃದಯದೊಳಗೆ ಅದುಮಿಟ್ಟ ಅಪ್ಪ, ತನ್ನ ಮಕ್ಕಳು LKG ಯಿಂದ ಉನ್ನತ ವಿದ್ಯಾಭ್ಯಾಸ, ಟ್ಯೂಷನ್ ಹೀಗೆ ಮಕ್ಕಳ ಬಗ್ಗೆ ಆಸೆ ಆಕಾಂಕ್ಷೆ, ಕನಸುಗಳನ್ನು ಕಟ್ಟಿಕೊಂಡೇ ಅಪ್ಪನ ಜೀವನ ಸವೆದು ಹೋಯಿತು. ವಯಸ್ಸಾದಂತೆ, ಅನಾರೋಗ್ಯ ಪೀಡಿತರಾದಾಗ ಕ್ಷೀಣರಾಗುತ್ತಾರೆ. ಮಡದಿ ಮಕ್ಕಳಿಗೆ ಭಾರ ಎಂದು ಅನಿಸತೊಡಗುತ್ತದೆ.

ಮಕ್ಕಳು ಕೂಡ ಅಮ್ಮನೊಂದಿಗೆ ಮಾತ್ರ ವ್ಯವಹರಿಸುತ್ತಾರೆ. ತನ್ನ ಇಷ್ಟಾರ್ಥಗಳನ್ನೆಲ್ಲ ಬದಿಗಿಟ್ಟು, ಕನಸುಗಳನ್ನೆಲ್ಲಾ ನುಚ್ಚುನೂರು ಮಾಡಿ ತನ್ನನ್ನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ ಎಂಬ ವಿಷಾದ. ಇದು ಕೇವಲ ಒಂದು ಅಪ್ಪನ ಸಮಸ್ಯೆಯಲ್ಲ, ಸುತ್ತಮುತ್ತಲ ಲಕ್ಷಾಂತರ ಅಪ್ಪಂದಿರ ದುಃಖ. ಅಮ್ಮನ ಮಹತ್ವವನ್ನು ಎಲ್ಲರೂ ಕೊಂಡಾಡುತ್ತಾರೆ, ಕಣ್ಣೀರಿಡುವ ಅಮ್ಮನನ್ನು ಮಕ್ಕಳು ನೋಡುತ್ತಾರೆ. ಆದರೆ ಕಣ್ಣೀರಿಡುವ ಅಪ್ಪನನ್ನು ಕಾಣುವುದಿಲ್ಲ, ಅಪ್ಪ ಅವರೆದುರೂ ಕಣ್ಣೀರು ಇಡುವುದೂ ಇಲ್ಲ..

ಒಂಬತ್ತು ತಿಂಗಳು ಹೊತ್ತ ಅಮ್ಮನ ಕಥೆಯನ್ನು ಮಕ್ಕಳು ಕೇಳುತ್ತಾರೆ. ಹೆರಿಗೆಯ ನೋವು, ಬೆಳೆಸಿದ ಕಷ್ಟ ಇವುಗಳ ಬಗ್ಗೆ ಕತೆ, ಕವನ, ನಾಟಕ, ಬರಹ ಸಾಕಷ್ಟಿದೆ. ಪತ್ನಿಯ ಗರ್ಭ ಕಾಲದಲ್ಲಿ ಹುಟ್ಟುವ ಮಗುವಿನ ಆರೋಗ್ಯಕ್ಕಾಗಿ ಪೋಷಕಾಂಶ ಆಹಾರ, ಹಣ್ಣುಹಂಪಲು, ವೈದ್ಯರ ಶುಶ್ರೂಷೆ, ಮಕ್ಕಳ ತಜ್ಞರ ಬಳಿ ಓಡಾಡಿದ ಅಪ್ಪನ ಬಗ್ಗೆ ಯಾರೂ ಕೇಳಿರುವುದಿಲ್ಲ ಹೇಳಿರುವುದಿಲ್ಲ.. ಪ್ರೀತಿ ಪ್ರಕಟಿಸಲು ತಿಳಿಯದ ಅಪ್ಪ, ಮಕ್ಕಳನ್ನು ತಿದ್ದಲು ಹೊರಟರೆ 'ಇದು ನಿಮ್ಮ ಹಳೆಯ ಕಾಲವಲ್ಲ' ಎಂದು ಹೇಳುವ ಅಮ್ಮಂದಿರು.



ಇದೇ ಕಾರಣದಿಂದ ಅಪ್ಪ ಮನೆಯಲ್ಲಿ ಅನ್ಯನಾಗುತ್ತಾನೆ. ಮನೆಯೊಳಗಡೆ ಪಬ್ಜಿ, ಟಿಕ್‌ಟಾಕ್, ಗೇಮ್ಸ್, ಟಿ.ವಿ. ಸೀರಿಯಲ್‌ಗಳು ನೋಡುವಾಗ ನ್ಯೂಸ್ ನೋಡಲಾಗದ ಸ್ಥಿತಿಯಲ್ಲಿ ಅಪ್ಪ ಮೂಲೆಯಲ್ಲಿ ಯಾವುದೋ ಹಳೆಯ ಪೇಪರ್ ಓದುವಂತೆ ನಟಿಸುತ್ತಾನೆ. ಮಕ್ಕಳು ಅಪ್ಪನಿಗೆ ಮಾರುತ್ತರ ಕೊಡುವಾಗ ಅವರ ಕಣ್ಣುಗಳನ್ನೊಮ್ಮೆ ನೋಡಿ.. ಸಾಗರದಷ್ಟು ದುಃಖವನ್ನು ಮನಸ್ಸಿನೊಳಗಿಟ್ಟು ಅಭಿಮಾನದಿಂದ ತಲೆ ಎತ್ತಿ ನಡೆಯುವ ಅಪ್ಪನ ಗೌರವ ಮತ್ತು ಸಹನೆಯನ್ನು ತಿಳಿಯಬೇಕಾದರೆ ಪ್ರತೀ ಮಗನೂ ಸಹ ತಂದೆಯಾಗಬೇಕು.


ಮಕ್ಕಳಿಗೆ ನಿಜವಾಗಿಯೂ ಇದೆಲ್ಲವೂ ಅರ್ಥವಾಗಿ ಅಪ್ಪನನ್ನು ನೆನೆದು ಪಶ್ಚಾತ್ತಾಪ ಪಡುವ ಹೊತ್ತಿಗೆ ಅಪ್ಪ ಕಾಣದ ಲೋಕಕ್ಕೆ ಯಾತ್ರೆ ಹೊರಟಿರುತ್ತಾನೆ. ಅಪ್ಪಾ, ಅಪ್ಪಾ ಎಂದು ಬೊಬ್ಬಿಟ್ಟು ಕರೆದರೂ, ಮರಳಿ ಬಾರದ ಲೋಕಕ್ಕೆ. ಆದರೂ ಅಪ್ಪ ಕೊನೆಯವರೆಗೂ ಮಕ್ಕಳ ಯಶಸ್ವಿಗಾಗಿಯೇ ಪ್ರಾರ್ಥಿಸುತ್ತಾನೆ. ಕೋಪ ತೋರಿಸುವ ಪ್ರೀತಿಗಾಗಿ ಅದನ್ನೆಲ್ಲಾ ನುಂಗುವ ಹೇಡಿಯಾಗಿದ್ದಾನೆ.. ☯

7 ☞ (ಯು/ಎಸ್-103(1), 351(2), 352, ರೆಡ್‌ವಿತ್ 3(5) ರಿತ್ಯಾ ಕಾಯ್ದೆ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಮೃತ ದರ್ಶನ್ ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಕಂಪನಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೋ ಇಲ್ಲ ಬೇರೆಯವರು ದೂರಿನಲ್ಲಿ ದಾಖಲಾಗಿರುವ ಆರೋಪಿಗಳೆಂದು ಬಿಂಬಿತರಾಗಿರುವವರು ಕೊಲೆ ಮಾಡಿ ನೇಣು ಬಿಗಿದಿದ್ದಾರೋ ಪೊಲೀಸ್ ತನಿಖೆಯಿಂದಷ್ಟೇ ತಿಳಿಯಬೇಕಾಗಿದೆ.

ಏನೇ ಆದರೂ ಇಂತಹ ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಏನೇ ಅನಾಹುತಗಳಾದರೂ ಕೇಂದ್ರ ಕಚೇರಿಯ ಆಡಳಿತ ಂಡಳಿಯವರು ಯಾರು ಎಂಬುದು ಯಾರಿಗೂ ಗೊತ್ತಾಗುವುದೇ ಇಲ್ಲ. ಏಕೆಂದರೆ ಮೃತ ದರ್ಶನ್ ಪ್ರಕರಣದಲ್ಲಿ ಒಬ್ಬರ ಮೇಲೊಬ್ಬರು ಮ್ಯಾನೇಜರ್‌ಗಳೆಂದು ಉತ್ತರ ಹೇಳಿಕೊಳ್ಳುತ್ತಾರೆ. ಆದರೆ ಕೇಂದ್ರ ಕಚೇರಿ ಮುಖ್ಯ ಆಡಳಿತ ಮಂಡಳಿ



ಬಿಎಸ್‌ಎಸ್ ಕಚೇರಿಯ ದ್ವಾರ ಬಾಗಿಲು




ಕಚೇರಿಯಲ್ಲಿ ನಾಮಫಲಕ ಹಾಕಿರುವುದು

ಯವರು ಮೃತ ದಶರ್ಶನ್ ಕುಟುಂಬ ವರ್ಗಕ್ಕೆ ಒಂದು ಸಾಂತ್ವಾನ ಆಗಲಿ ನೆರವಾಗಲಿ ಯಾರೂ ಹೇಳಿಲ್ಲ ಎಂಬುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಜೊತೆಗೆ ಈ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ದೇವರೇ ಕಾಪಾಡಬೇಕು. ☯

9 ☞ ಬರುತ್ತಿರಲಿಲ್ಲ, ಶೆಡ್‌ನೊಳಗೆ ಗಾಳಿ, ಬೆಳಕು ಬಾರದಂತೆ ಮುಚ್ಚಲಾಗಿತ್ತು. ಸ್ಥಳೀಯರಿಗೆ ಗ್ಯಾರೇಜ್ ನಲ್ಲಿ ಎಷ್ಟು ಮಂದಿ ಇದ್ದಾರೆ ಎಂಬುದರ ಬಗ್ಗೆ ಮಾಹಿತಿಯೂ ಇರಲಿಲ್ಲ ಎಂದು ಹೇಳಲಾಗುತ್ತಿದೆ.

ಸದ್ಯ ಮೈಸೂರು ಪೊಲೀಸರು ಎಚ್ಚೆತ್ತು ಕೊಂಡಿದ್ದಾರೆ. ಈಗಾಗಲೇ ಎನ್‌ಆರ್ ಠಾಣೆಯ ಇನ್ಸ್ ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್ ಅವರನ್ನು ಅಮಾನತು ಮಾಡಲಾಗಿದೆ. ಅಷ್ಟೇ ಅಲ್ಲದೆ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಡ್ರಗ್ಸ್ ಜಾಲವನ್ನು ಭೇದಿಸಲು ಏಳು ವಿಶೇಷ ತಂಡಗಳನ್ನು ರಚನೆ ಮಾಡಿದ್ದು, ಈಗಾಗಲೇ ನಗರದ ಮಂಡಿ ಮತ್ತು ಉದಯಗಿರಿ ಪೊಲಿಸ್ ಠಾಣೆ ವ್ಯಾಪ್ತಿಯ ಪುಲಕೇಶಿ ರಸ್ತೆ, ಮೀನಾ ಬಜಾರ್, ಮಹದೇವಪುರ ರಸ್ತೆ ಸೇರಿದಂತೆ ಹಲವು ಬಡಾವಣೆ ವ್ಯಾಪ್ತಿಯ ಉದ್ಯಾನಗಳಲ್ಲಿ ರಾತ್ರಿ ವೇಳೆ ಗಸ್ತು ನಡೆಸಿ ಮಾದಕ ವ್ಯಸನಿಗಳನ್ನು ಪತ್ತೆ



ಹಚ್ಚಿದಲ್ಲದೆ, ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರದ ಹಲವು ಕಡೆಗಳಲ್ಲಿ ಮಾದಕ ವ್ಯಸನಿಗಳಿದ್ದು, ಅವರನ್ನು ಹಿಡಿದು ಅವರಿಗೆ ಎಲ್ಲಿಂದ ಸಪ್ಲೈ ಆಗುತ್ತಿದೆ ಎಂಬುದನ್ನು ಪತ್ತೆ ಹಚ್ಚಬೇಕಿದೆ. ಸದ್ಯ ಡ್ರಗ್ಸ್ ಫ್ಯಾಕ್ಟರಿಯನ್ನೇ ತೆರೆಯಲಾಗಿತ್ತು ಎಂಬ ವಿಚಾರ ಇಡೀ ಮೈಸೂರು ಜನರನ್ನು ಆತಂಕಕ್ಕೆ ತಳ್ಳಿದೆ. ಇನ್ನು ಮುಂದೆಯಾದರೂ ಸಂಶಯಾಸ್ಪದ ಶೆಡ್‌ಗಳು, ಗಾಂಜಾ ಮಾರಾಟ, ಮಾದಕ ವ್ಯಸನಿಗಳ ಓಡಾಟದ ಬಗ್ಗೆ ಮಾಹಿತಿ ಬಂದರೆ ಸಾರ್ವಜನಿಕರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದೇ ಆದರೆ ಮಾದಕ ವಸ್ತುಗಳ ಮಾರಾಟ ಮತ್ತು ವ್ಯಸನಿಗಳನ್ನು ಹತ್ತಿಕ್ಕಲು ಸಾಧ್ಯವಾಗಬಹುದೇನೋ? ☯

13 ☞

ಹೇಳಿದಕ್ಕೆ, ಯಾವುದೋ ಕೆಲಸದ ಮೇಲೆ ಈ ಕಡೆ ಬಂದಿದ್ದೆ. ಹಾಗೆಯೇ ಹುಸ್ನಾ ಬೇಗಂರವರನ್ನು ಮಾತನಾಡಿಸಿಕೊಂಡು ಹೋಗೋಣವೆಂದು ನಿಮ್ಮ ಮನೆಗೆ ಬಂದಿರುವುದಾಗಿ ಹೇಳಿ ಅಮೀನ್ ಅಲ್ಲಿಂದ ಹೊರಟು ಬಿಡುತ್ತಾನೆ. ಹುಸ್ನಾ ಬೇಗಂಳ ಜೊತೆಗಿನ ಸಂಬಂಧ ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತಿದ್ದಂತೆ, ಅಮೀನ್ ತನ್ನ ಇರ್ಫಾನ್‌ನನ್ನು ನೋಡಲು ಮಟನ್ ಅಂಗಡಿ ಬಳಿ ಹೋಗುವುದನ್ನೇ ಬಿಟ್ಟಿದ್ದನು. ಇವನು ಅಂಗಡಿ ಬಳಿಗೆ ಬರದೇ ಇರುವುದರಿಂದ ಅನುಮಾನಗೊಂಡ ಇರ್ಫಾನ್ ಒಂದು ಮಧ್ಯಾಹ್ನ ಏಕಾಏಕಿ ಮನೆಗೆ ಹೋದಾಗ,


ಕೃತ್ಯಕ್ಕೆ ಉಪಯೋಗಿಸಿದ್ದ ಆಯುಧಗಳನ್ನು ತೆಗೆದುಕೊಡುತ್ತಿರುವ ಆರೋಪಿಗಳು

ಅಮೀನ್ ಮನೆಯಲ್ಲಿ ಇರುವುದನ್ನು ನೋಡಿದ ಇರ್ಫಾನ್, ನೀವಿಬ್ಬರು ಮಾಡುತ್ತಿರುವುದು ಸರಿ ಇಲ್ಲ. ಈ ವಿಚಾರ ನನಗೆ ಗೊತ್ತಾಯಿತು. ಆದರೆ ಹೊರಗಡೆ ಗೊತ್ತಾದರೆ ನಮ್ಮ ಹಾಗೂ ಮನೆ ಮರ್ಯಾದೆ ಹೋಗುವುದು. ಅದಕ್ಕೆ ಇಬ್ಬರು ನಿಲ್ಲಿಸಿಬಿಡಿ ಎಂದು ಬುದ್ಧಿ ಹೇಳಿದನು. ಇರ್ಫಾನ್ ಹೇಳಿದ ಮಾತಿನಂತೆ ಸ್ವಲ್ಪ ದಿನಗಳ ಕಾಲ ಇಬ್ಬರು ಪರಸ್ಪರ ಭೇಟಿಯಾಗದೆ ದೂರವಾಗಿದ್ದರು. ಆದರೆ ಎಷ್ಟು ದಿನ ದೂರ ಇರಲು ಸಾಧ್ಯ, ಚಂಗೂಲಿ ಆಟವಾಡಲು ಎರಡು ದೇಹಗಳು ಚಡಪಡಿಸುತ್ತಿದ್ದವು. ಅಮೀನ್, ಹುಸ್ನಾ ಬೇಗಂಗೆ ಫೋನ್ ಮಾಡಿ ನಿನ್ನ ಜೊತೆ ಸೇರಿ ಎಷ್ಟು ದಿನಗಳಾಯಿತು. ಹೊರಗಡೆ ಎಲ್ಲಿಯಾದರು ನಾವಿಬ್ಬರು ಸೇರೋಣ ಬರುತ್ತಿಯೋ ಎಂದು ಕರೆದನು. ಅದಕ್ಕೆ ಹುಸ್ನಾಬೇಗಂ ಸಹ ನನಗೂ ನಿನ್ನನ್ನು ಬಿಟ್ಟಿರಲಾರೆನು ಎಂದು ಫೋನ್‌ನಲ್ಲಿಯೇ ತಮ್ಮಿಬ್ಬರ ನಡುವಿನ ವಿರಹ ವೇದನೆಯನ್ನು ಹಂಚಿಕೊಳ್ಳುತ್ತಿದ್ದರು. ಇಬ್ಬರು ಫೋನ್‌ನಲ್ಲಿ ಹೆಚ್ಚಾಗಿ ಮಾತನಾಡಿಕೊಳ್ಳುತ್ತಿರುವ ವಿಷಯ ಗಂಡ ಇರ್ಫಾನ್‌ಗೆ ಗೊತ್ತಾಗಿ, ಪತ್ನಿ ಹುಸ್ನಾ ಬೇಗಂಳಿಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಲು ಪ್ರಾರಂಭಿಸಿದನು. ಗಂಡ ನೀಡುತ್ತಿದ್ದ ಕಿರುಕುಳದಿಂದ ಬೇಸತ್ತಿದ್ದ ಹುಸ್ನಾಬೇಗಂ ಗಂಡನ ವಿರುದ್ಧ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದಳು. ಗಂಡ ಇರ್ಫಾನ್‌ನನ್ನು ಠಾಣೆಗೆ ಕರೆಸಿದ ಪೊಲೀಸರು ಬುದ್ಧಿ ಹೇಳಿ ಕಳುಹಿಸಿದರು. ಸ್ನೇಹಿತ ಅಮೀನ್ ಕೊಟ್ಟಿರುವ ಕುಮ್ಮಕ್ಕಿನಿಂದ ಹೆಂಡತಿಯು ನನ್ನ ವಿರುದ್ಧ ಠಾಣೆಯಲ್ಲಿ ದೂರು ಕೊಡುವಂತಾಯಿತು. ಇದಕ್ಕೆಲ್ಲ ಕಾರಣನಾದ ಸ್ನೇಹಿತ ಅಮೀನ್‌ನನ್ನು ಬಿಡಬಾರದೆಂದು ಅವನ ಮೇಲೆ ದ್ವೇಷ ತೀರಿಸಿಕೊಳ್ಳಲು ಕಾಯುತ್ತಿದ್ದನು.


ಮನೆ ಮುಂದೆ ಸೇರಿರುವ ಸಾರ್ವಜನಿಕರು

### ಪತ್ನಿಯೊಂದಿಗೆ ಸೇರಿ ಸ್ನೇಹಿತನ ಕೊಲೆ

ಹೊಸಕೋಟೆ ಪಟ್ಟಣದ ನಿವಾಸಿ ಮುಬಾರಕ್‌ರವರು ಮೇ 22ರಂದು ಕೋಲಾರ ನಗರದ ಗಲ್‌ಪೇಟೆ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ಅಣ್ಣನ ಮಗ ಜಿಮ್ ಟ್ರೈನರ್ ಅಮೀನ್ ಮತ್ತು ಮಟನ್ ಸ್ಟಾಲ್‌ನ ಮಹ್ಮದ್ ಇರ್ಫಾನ್ ಸ್ನೇಹಿತರಾಗಿದ್ದರು. ಇರ್ಫಾನ್ ಪತ್ನಿಯೊಂದಿಗೆ ಅಮೀನ್ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು, ಈ ವಿಚಾರ ಗಂಡ ಇರ್ಫಾನ್‌ಗೆ ಗೊತ್ತಾಗಿ ಸ್ನೇಹಿತರ ನಡುವೆ ಆಗಾಗ ಗಲಾಟೆಗಳಾಗುತ್ತಿತ್ತು. ಇರ್ಫಾನ್ ತನ್ನ ಸ್ನೇಹಿತನಿಗೆ ಹೆಂಡತಿಯ ಸಹವಾಸ ಮಾಡದಂತೆ ಎಚ್ಚರಿಕೆ ನೀಡಿದ್ದರು. ಇವನ ಮಾತನ್ನು ಕೇಳದೆ ಇಬ್ಬರು ಹೆಚ್ಚಾಗಿ ಫೋನ್‌ನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಇದರಿಂದ ಕೋಪಗೊಂಡ ಇರ್ಫಾನ್, ಅಮೀನ್‌ನನ್ನು ಕೊಲೆ ಮಾಡುವ ಉದ್ದೇಶದಿಂದ ಕೋಲಾರದಲ್ಲಿರುವ ಸಂಬಂಧಿಕರ ಮನೆಯಲ್ಲಿ ಮಾತನಾಡಬೇಕೆಂದು ಕರೆಸಿಕೊಂಡು ಮಚ್ಚು, ಚಾಕುಗಳಿಂದ ಭೀಕರವಾಗಿ ಕೊಚ್ಚಿ ಸಾಯಿಸಿ ಪರಾರಿಯಾಗಿರುವ ಆರೋಪಿಗಳನ್ನು ಪತ್ತೆ ಮಾಡಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದ ಹಿನ್ನೆಲೆಯಲ್ಲಿ ಪಿಎಸ್‌ಐ ವಿಠಲ್ ತಳವಾರ್‌ರವರು ಮೊ. ಸಂ. 63/2025 ಕಲಂ 61, 103 ರೆಡ್‌ವಿತ್ 3(5) ಬಿಎನ್‌ಎಸ್ ಆಕ್ಟ್‌ನಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಪ್ರಕರಣದ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದರು.

ಸ್ಥಳಕ್ಕೆ ಎಸ್ಪಿ ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿಗಳಾದ ಎಂ.ಹೆಚ್. ನಾಗ್ತೆ ಮತ್ತು ರಾಜೇಶ್, ಪಿಐ ಎಂ.ಜೆ. ಲೋಕೇಶ್, ಬೆರಳಚ್ಚು ತಜ್ಞರು, ಶ್ವಾನದಳ ಮತ್ತು ಸಿಬ್ಬಂದಿ ವರ್ಗದೊಂದಿಗೆ ಆಗಮಿಸಿ ಸ್ಥಳ ಮತ್ತು ಶವದ ಮಹಜರ್ ನಡೆಸಿದ ನಂತರ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ ಅಲ್ಲಿ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ಮೇಲೆ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ಸ್ನೇಹಿತನನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ನಿಖಿಲ್ ಮತ್ತು ಡಿವೈಎಸ್ಪಿ ಎಂ.ಹೆಚ್. ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ಎಂ.ಜೆ. ಲೋಕೇಶ್‌ರವರ ನೇತೃತ್ವದಲ್ಲಿ ಪಿಎಸ್‌ಐ ವಿಠಲ್ ತಳವಾರ್, ಸಿಬ್ಬಂದಿ ವರ್ಗದವರಾದ ವಾಸುದೇವಮೂರ್ತಿ, ಸುಜ್ಞಾನ್‌ಕುಮಾರ್, ಅಂಜಿನಪ್ಪ, ಷಫೀ, ವೆಂಕಟೇಶ್, ನವಾಜ್ ಪಾಷ, ಮರೇಗೌಡ, ಕೃಷ್ಣಮೂರ್ತಿ, ಗಂಗಾಧರ್, ಶ್ರೀನಿವಾಸ್, ಮಂಜುನಾಥ್ ಮುಂತಾದವರ ವಿಶೇಷ ತಂಡವನ್ನು ರಚಿಸಲಾಯಿತು. ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಆರೋಪಿಗಳಾದ ಹೊಸಕೋಟೆ ಪಟ್ಟಣದ ಗಂಗಮ್ಮನಗುಡಿ ರಸ್ತೆಯ ವಾಸಿ ಲೇಟ್ ಮಹಮದ್ ರಹಮತ್ ಉಲ್ಲಾರವರ ಮಗ ಮಟನ್ ಅಂಗಡಿ ವ್ಯಾಪಾರಿ ಎಂ.ಡಿ. ಇರ್ಫಾನ್ ಅಲಿಯಾಸ್ ಮಹಮದ್ ಇರ್ಫಾನ್ (35), ಕೋಲಾರ ರಹಮತ್ ನಗರದ ಅಕ್ಸಾ ಮಸೀದಿ ಹಿಂಭಾಗ ವಾಸವಿರುವ ಮಹಮದ್ ಷಾಹೀದ್‌ರವರ ಮಗ ಕಾನೂನು ವಿದ್ಯಾರ್ಥಿ ಮಹಮದ್ ಸಾಕೀಬ್ (22), ಹೊಸಕೋಟೆ ಪಟ್ಟಣದ ಕನಕನಗರದ 4ನೇ ಕ್ರಾಸ್‌ನಲ್ಲಿ ವಾಸವಿರುವ ಮೂಲತ- ಕೋಲಾರ ಜಿಲ್ಲೆ ಶ್ರೀನಿವಾಸಪುರ ಪಟ್ಟಣದ ಇಂದಿರಾನಗರ ಎಪಿಎಂಸಿ ಯಾರ್ಡ್ ಬಳಿ ವಾಸವಿದ್ದ ಜಮೀರ್‌ಪಾಷರವರ ಮಗ ಇರ್ಫಾನ್ ಮಟನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಜಾಕೀರ್ ಪಾಷ (28) ಹಾಗೂ ಇರ್ಫಾನ್‌ನ ಪತ್ನಿ ಹುಸ್ನಾ ಬೇಗಂ (3) ಇವರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ, ಪತ್ನಿ ಹುಸ್ನಾ ಬೇಗಂ ನನ್ನ ವಿರುದ್ಧ ಕಳೆದ ಇಪ್ಪತ್ತು ದಿನಗಳ ಹಿಂದೆ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಅವರು ನನ್ನನ್ನು ಕರೆಸಿ ಬುದ್ಧಿ ಹೇಳಿ ಕಳುಹಿಸಿದಳು. ನಂತರ ಅವಳು ನನ್ನನ್ನು ಬಿಟ್ಟು ಕೋಲಾರದ ಕಾರಂಜಿಕಟ್ಟೆಯ ರಾಜಾ ನಗರದಲ್ಲಿ ವಾಸವಿರುವ ಅವರ ತಾಯಿ ಮನೆಗೆ ಹೋಗಿದ್ದಳು. ನಂತರ ಒಂದು ವಾರದ ಹಿಂದೆ ನಾನೂ ಸಹ ಕೋಲಾರಕ್ಕೆ ಹೋಗಿ ಅತ್ತೆ ಮನೆಯಲ್ಲಿಯೇ ಇದ್ದೆನು. ಆ ಸಮಯದಲ್ಲಿ ಅಮೀನ್ ನಡುವಿನ ಸಂಬಂಧವನ್ನು ಬಿಡದಿದ್ದರೆ ವಿಚಾರವನ್ನು ಎಲ್ಲರಿಗೂ ಗೊತ್ತಾಗಿ ನಮ್ಮ ಹಾಗೂ ನಮ್ಮ ಮನೆಗೆ ಮರ್ಯಾದೆ ಹೋಗುತ್ತದೆ ಎಂದು ಪತ್ನಿಗೆ ಬುದ್ಧಿ ಹೇಳಿದನು. ಅದಕ್ಕೆ ಅವಳಿಗೆ ಅಮೀನ್ ನಿನ್ನ ಗಂಡ ಮತ್ತು ಮಕ್ಕಳನ್ನು ಬಿಟ್ಟು ನನ್ನ ಬಳಿ ಬಂದು ಬಿಡು ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳುತ್ತಿದ್ದಾನೆ. ಅದಕ್ಕೆ ನಾನು ಇಷ್ಟು ದಿನ ಆಡಿದ ಆಟಗಳು ಸಾಕು. ಎಲ್ಲವನು ನಿಲ್ಲಿಸಿಬಿಡೋಣ ಎಂದು ಹೇಳಿದಕ್ಕೆ ನಿನ್ನನ್ನು ಬಿಟ್ಟು ಇರಲಾರೆನೆಂದು ಟಾರ್ಚರ್ ಕೊಡುತ್ತಿದ್ದಾನೆಂದು ಹೇಳಿದಳು. ಆಗ ನಾನು ಇವನನ್ನು ಮುಗಿಸಿ ಬಿಡೋಣ ಅದಕ್ಕೆ ನೀನು ನನಗೆ ಸಹಕಾರವನ್ನು ನೀಡುವಂತೆ ಪತ್ನಿಗೆ ಹೇಳಿದೆ. ಆನಂತರ ನಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಜಾಕೀರ್ ಪಾಷನ ಬಳಿ ಮಾತನಾಡಿ ಅಮೀನ್ ಬದುಕಿದ್ದರೆ ನನಗೆ ಮತ್ತು ನನ್ನ ಹೆಂಡತಿಗೆ ಮರ್ಯಾದೆ ಹೋಗುತ್ತದೆ. ಇವನನ್ನು ಮುಗಿಸಲು ನೀನು ನನಗೆ ಸಹಕಾರ ಕೊಡಬೇಕೆಂದು ಹೇಳಿದ್ದೆನು. ಅದರಂತೆ ಜಾಕೀರ್ ಪಾಷ ನನ್ನ ಜೊತೆಯಲ್ಲಿ ಇರುವುದಾಗಿ ಹೇಳಿದನಲ್ಲದೆ ಸಹಾಯಕ್ಕಾಗಿ ಕೋಲಾರದಲ್ಲಿ ನನಗೆ ಪರಿಚಯ ಇರುವ ಮಹಮದ್ ಸಾಕೀಬ್ ಎಂಬ ಯುವಕನನ್ನು ಕರೆದುಕೊಂಡು ಬರುವುದಾಗಿ ಹೇಳಿದನು.


ಕೃತ್ಯ ನಡೆದ ಸ್ಥಳ ಮಹಜರ್ ನಡೆಸುತ್ತಿರುವ ಪೊಲೀಸರು


ಕೃತ್ಯಕ್ಕೆ ಉಪಯೋಗಿಸಿದ್ದ ಆಯುಧಗಳು

ಎಲ್ಲರೂ ಸೇರಿಕೊಂಡು ಸಂಚು ರೂಪಿಸಿ ಹುಸ್ನಾ ಬೇಗಂ ಮೂಲಕ ಅಮೀನ್‌ಗೆ ಫೋನ್ ಮಾಡಿಸಿ ನನ್ನ ಹಾಗೂ ನಿನ್ನ ನಡುವಿನ ಸಂಬಂಧಧ ವಿಚಾರವಾಗಿ ರಾಜಿ, ಸಂಧಾನದ ಮಾತನಾಡಲು ಕೋಲಾರದ ಪ್ರಶಾಂತ್‌ನಗರದಲ್ಲಿರುವ ಅಕ್ಕ ಆಸ್ಮಾತಾಜ್ ಮತ್ತು ಭಾವ ಅಸೀಫ್‌ರವರ ಮನೆಗೆ ಬರುವಂತೆ ಕರೆದಳು. ಅದರಂತೆ ಅಮೀನ್ ಆಸ್ಮಾತಾಜ್‌ರವರ ಮನೆಗೆ ಬಂದನು. ಆಗ ನಾವುಗಳೆಲ್ಲ ಅವನ ಜೊತೆ ರಾಜಿ ಸಂಧಾನದ ಮಾತುಗಳನ್ನು ಆಡುತ್ತಿರುವಾಗ ಮಾತಿಗೆ ಮಾತು ಬೆಳೆದು ಎಲ್ಲರೂ ಸೇರಿಕೊಂಡು ಅವನ ಮೇಲೆ ಹಲ್ಲೆ ಮಾಡಿ ನಂತರ ಮಾಂಸ ಕತ್ತರಿಸುವ ಮಚ್ಚು, ಚಾಕುಗಳಿಂದ ಮನ ಬಂದಂತೆ ಕೊಚ್ಚಿ, ಚುಚ್ಚಿ ಸಾಯಿಸಿ ಅಲ್ಲಿಂದ ಪರಾರಿಯಾಗಿದ್ದ ನಮ್ಮನ್ನು ಬಂಧಿಸಿರುವುದಾಗಿ ತಿಳಿಸಿದನು.

ಹೇಳಿಕೆ ನಂತರ ಆರೋಪಿಗಳನ್ನು ಕೋಲಾರದ ಪ್ರಶಾಂತ್‌ನಗರದಲ್ಲಿ ಕೃತ್ಯ ನಡೆದ ಹುಸ್ನಾ ಬೇಗಂರವರ ಅಕ್ಕ ಆಸ್ಮಾತಾಜ್‌ರವರ ಮನೆಗೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಕೃತ್ಯಕ್ಕೆ ಉಪಯೋಗಿಸಿದ್ದ ಆಯುಧಗಳನ್ನು ಗಿಡಗಳ ಕೆಳಗೆ ಅಡಗಿಸಿಟ್ಟಿದ್ದ ಅವುಗಳನ್ನು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ನಂತರ ಆರೋಪಿಗಳನ್ನು ನ್ಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 3.8.2025


# ಹಾಸ್ಯ-ಹಾರರ್ ಸಮ್ಮಿಶ್ರಣ 'ಸು ಫ್ರಮ್ ಸೋ' ಬಿಗ್ ಹಿಟ್!

ಕೆಲವು ಸಿನಿಮಾಗಳೇ ಹೀಗೆ. ಹೆಚ್ಚು ಪ್ರಚಾರವಿಲ್ಲದೆ ಅಥವಾ 'ಸ್ಟಾರ್' ಗಳಿಲ್ಲದಿದ್ದರೂ ಸದ್ದಿಲ್ಲದೆ ಸೂಪರ್ ಹಿಟ್ ಆಗಿ ಪ್ರೇಕ್ಷಕರ ನೆನಪಿನಲ್ಲಿ ಬಹುಕಾಲ ನೆಲೆಗೊಳ್ಳುತ್ತವೆ! 'ಸು ಫ್ರಮ್ ಸೋ' ಸಿನಿಮಾ ಕೂಡ ಅಂತಾ ಅಪರೂಪದ ಆವಿಷ್ಕಾರಗಳಲ್ಲಿ ಒಂದಾಗಿದೆ. ಈ ಸಿನಿಮಾ ಹೆಚ್ಚು 'ಗಮನ'ವನ್ನು ಬೇಡುವುದಿಲ್ಲ. ನೀವು ಏನೆಂದು ಅರಿಯುವ ಮುನ್ನವೇ ತನ್ನ ವಿಲಕ್ಷಣ ಹಾಸ್ಯ ಮತ್ತು ಭಾವನಾತ್ಮಕ ಜಗತ್ತಿನಲ್ಲಿ ಮುಳುಗಿಸಿ ಬಿಡುತ್ತೆ! 'ಸು ಫ್ರಮ್ ಸೋ' ಇದೀಗ 2ನೇ ವಾರದಲ್ಲಿ ಮುನ್ನುಗ್ಗುತ್ತಿದ್ದು, ಬಾಕ್ಸಾಫೀಸ್‌ನಲ್ಲಿ ಧೂಳ್ ಎಬ್ಬಿಸುತ್ತಿದೆ!

ಕರಾವಳಿ ಸೊಬಗಿನ ಹಾಸ್ಯ, ಭಾವನಾತ್ಮಕ ಕಥಾವಸ್ತು, ಮತ್ತು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಪ್ರೇಕ್ಷಕರನ್ನು ಮನರಂಜಿಸುತ್ತಿದೆ. ನಟ ರಾಜ್ ಬಿ. ಶೆಟ್ಟಿ ನಿರ್ಮಾಣದ 'ಸು ಫ್ರಮ್ ಸೋ' ಸಿನಿಮಾವನ್ನು ಸಪ್ತ ಸಾಗರದಾಚೆ ಎಲ್ಲೋ ಪೋಷಕ ನಟ ಜೆ.ಪಿ. ತುಮಿನಾಡು ನಿರ್ದೇಶಸಿದ್ದಾರೆ.

ಸ್ಯಾಂಡಲ್‌ವುಡ್‌ನಲ್ಲಿ ಇತ್ತೀಚೆಗೆ ಹಾಸ್ಯ ಕಥಾವಸ್ತುವುಳ್ಳ ಚಿತ್ರಗಳ ಸಂಖ್ಯೆ ಕಡಿಮೆಯಾಗಿದೆ. ಇಂತಹ ಸಮಯದಲ್ಲೇ 'ಸು ಫ್ರಮ್ ಸೋ' ರಿಲೀಸ್ ಆಗಿರುವುದು ನಿರ್ಮಾಪಕರಿಗೆ ಭಾರಿ ಲಾಭವಾಗಿದೆ! ದುಡ್ಡು ತೆತ್ತು ಥೀಯೇಟರ್‌ಗೆ ಬರುವ ಪ್ರೇಕ್ಷಕರನ್ನು ನಗಿಸುವುದೊಂದೇ ತಮ್ಮ ಕರ್ತವ್ಯ ಎಂದುಕೊಂಡಂತೆ ಕಥೆ ರಚಿಸಿದ್ದಾರೆ, ಜೆಪಿ!





'ಸು ಫ್ರಮ್ ಸೋ' ಅಪ್ಪಟ ಕಾಮಿಡಿ ಸಿನಿಮಾ. ಕೆಲವೊಮ್ಮೆ ಕಾಮಿಡಿ ಹಾದಿಗೆ ಮುಖಮಾಡುವ ಸಿನಿಮಾಗಳು ಆರಂಭದಲ್ಲಿ ಚನ್ನಾಗಿದ್ದು, ಸೆಕೆಂಡ್ ಹಾಫ್ ನಲ್ಲಿ ದಾರಿ ತಪ್ಪುತ್ತವೆ. ಆದರೆ ಈ ಚಿತ್ರದಲ್ಲಿ ಅಂತಹ ಯಾವ ಗೊಂದಲಗಳನ್ನು ಮೈ ಮೇಲೆ ಎಳೆದುಕೊಳ್ಳದೇ ಸ್ಪಷ್ಟ ಹಾಗೂ ನಿಖರವಾಗಿ ತನ್ನ ಗುರಿಯತ್ತ ಸಿನಿಮಾ ಸಾಗಿದೆ.

ಕತೆಯ ಬಗ್ಗೆ ಕೊಂಚ ಹೇಳುವುದಾದರೆ, ಕರಾವಳಿ ಭಾಗದಲ್ಲಿರುವ ಒಂದು ಗ್ರಾಮ ಮರ್ಲೂರು, ಅಲ್ಲಿನ ಒಂದಷ್ಟು ಮಂದಿ, ಅಲ್ಲೊಬ್ಬ ರವಿಯಣ್ಣ, ಏನೇ ಸಮಸ್ಯೆ ಬಂದರೂ ರವಿಯಣ್ಣ ಇದ್ದಾರೆ ಎಂಬ ಧೈರ್ಯ. ಊರಿನಲ್ಲಿ ಮೇಸ್ತ್ರಿಯಾಗಿರುವ ರವಿಯಣ್ಣ (ಶನೀಲ್ ಗೌತಮ್) ಎಲ್ಲರಿಗೂ ಅಚ್ಚುಮೆಚ್ಚು. ರವಿಯಣ್ಣನ ಮಾತೇ ವೇದವಾಕ್ಯ. ಅದೇ ಊರಿನಲ್ಲಿ ಪೇಂಟರ್ ಆಗಿ ಕೆಲಸ ಮಾಡುತ್ತಿರುವ ಅಶೋಕನಿಗೆ (ಜೆ.ಪಿ. ತೂಮಿನಾಡು) ಊರಿನ ಹುಡುಗಿಯೊಬ್ಬಳ ಮೇಲೆ ಕಣ್ಣಿನಲ್ಲೇ ಪ್ರೀತಿಯಾಗುತ್ತದೆ. ಎಲ್ಲಾ ಸಮಸ್ಯೆಗಳಿಗೂ ಪರಿಹಾರ ನೀಡುವ ರವಿಯಣ್ಣನಿಗೆ ಒಂದು ತೊಂದರೆ ಎದುರಾಗುತ್ತದೆ. ಅಲ್ಲಿಂದಲೇ ಸಿನಿಮಾ ಕತೆ ಆರಂಭವಾಗುತ್ತದೆ.

ಸಿನಿಮಾದಲ್ಲಿ ಕೇವಲ ನಗು ಮಾತ್ರ ಇಲ್ಲ, ಎಲ್ಲರನ್ನು ನಗಿಸುತ್ತಲೇ ಒಂದು ಸಮಾಜವನ್ನು ಪೀಡಿಸುತ್ತಿರುವ ಎರಡು ಪ್ರಮುಖ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ ನಿರ್ದೇಶಕರು. ಮೂಢ ನಂಬಿಕೆಗಳು, ಊಹಾಪೋಹಗಳು, ಪೂರ್ವಾಗ್ರಹಗಳು ಹೇಗೆ ನಮ್ಮ ಸಮಾಜವನ್ನು ತಪ್ಪು ದಾರಿಗೆ ಎಳೆಯುತ್ತವೆ ಎಂಬುದನ್ನು ವಿಡಂಬನಾತ್ಮಕವಾಗಿ ತೆರೆಗೆಳಿಸಿದ್ದಾರೆ. ಈ ಚಿತ್ರದಲ್ಲಿ ರಾಜ್ ಬಿ. ಶೆಟ್ಟಿ ಕೂಡ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ!

'ಸು ಫ್ರಮ್ ಸೋ' ಅಂದರೆ ಸುಲೋಚನ ಫ್ರಮ್ ಸೋಮೇಶ್ವರ ಎಂದು. ಅಷ್ಟಕ್ಕೂ ಯಾರು ಈ ಸುಲೋಚನ? ಸೋಮೇಶ್ವರಕ್ಕೂ ಈ ಸಿನಿಮಾಕ್ಕೂ ಏನು ಸಂಬಂಧ ಎಂಬುದನ್ನು ತಿಳಿದುಕೊಳ್ಳಲು ನೀವು ಥಿಯೇಟರಿಗೆ ಹೋಗಿ ನೋಡಬೇಕು... ಈ ಸಿನಿಮಾದಲ್ಲಿ ಸ್ಟಾರ್ಗಳಿಲ್ಲ, ಅಬ್ಬರಿಸುವ ವಿಲನ್‌ಗಳಿಲ್ಲ, ಕಲರ್ಫುಡಲ್ ಸೆಟ್, ಮಿಂಚುವ ಕಾಸ್ಟ್ಯೂಮ್‌ಗಳಿಲ್ಲ, ಎಲ್ಲರೂ ಕೊಚ್ಚಿ ಕೊಳ್ಳುವ ಹಾಗೆ ಬಿಗ್ ಬಜೆಟ್ ಮೊದಲೇ ಇಲ್ಲ!

ಆದರೆ, ಒಂದೊಳ್ಳೆಯ ಸಬ್ಜೆಕ್ಟ್ ಇದೆ. ಅದಕ್ಕೆ ತಕ್ಕ ನಿರೂಪಣೆ, ಕಲಾವಿದರ ನಟನೆ ಇದೆ. ಯುವ ಸಂಗೀತ ನಿರ್ದೇಶಕ ಸುಮೇಧಫ್ ಕೆ. ಹಾಗೂ ಸಂದೀಪ್ ತುಳಸಿದಾಸ್ ಚಿತ್ರದ ದೃಶ್ಯಗಳಿಗೆ ಸಂಗೀತದ ಮೂಲಕ ಜೀವ ತುಂಬಿದ್ದಾರೆ. ಎಸ್. ಚಂದ್ರಶೇಖರನ್ ಛಾಯಾಗ್ರಹಣ ಸಹಜ ಮತ್ತು ಸುಂದರ. ಕರಾವಳಿಯ ಒಂದೂರಿನ ಚಿತ್ರಣವನ್ನು ಸೊಗಸಾಗಿ ಕಟ್ಟಿಕೊಡುವಲ್ಲಿ ಸಫಲರಾಗಿದ್ದಾರೆ. ಒಟ್ಟಾರೆ, 'ಸು ಫ್ರಮ್ ಸೋ' ಹಾಸ್ಯದೊಂದಿಗೆ ತುಸು ಹಾರರ್ ಮಿಶ್ರಣ; ಕರಾವಳಿ ಸೊಬಗಿನ ರಸದೌತಣ- ಮನರಂಜನೆಯ ಹೂರಣ - ಮಿಕ್ಕಿದ್ದೆಲ್ಲಾ ಗೌಣ! ☯

# 'ದಿ ಟಾಸ್ಕ್' ಶೂಟಿಂಗ್ ಕಂಪ್ಲೀಟ್!

ರಾಘು ಶಿವಮೊಗ್ಗ ಕಲ್ಪನೆಯಲ್ಲಿ ಮೂಡಿಬರುತ್ತಿರುವ ಮೂರನೇ ಚಿತ್ರ ದಿ ಟಾಸ್ಕ್ ಯಶಸ್ವಿಯಾಗಿ ಚಿತ್ರೀಕರಣ ಮುಗಿಸಿ ಕುಂಬಳಕಾಯಿ ಎರಡು ಹೋಳಾಗಿದೆ! ರಂಗಭೂಮಿ ಹೊನಲಲ್ಲಿ ಬೆಳೆದು ಚಿತ್ರರಂಗದ ಬೆಳ್ಳಿ ಬೆಳಕಿನಲ್ಲಿ ಸದ್ದಿಲ್ಲದೇ ಬೆಳೆಯುತ್ತಿರುವ ಯುವ ಪ್ರತಿಭೆ ರಾಘು ಶಿವಮೊಗ್ಗ ಈ ಚಿತ್ರದಿಂದ ಬಿಗ್ ನೇಮ್ ಮಾಡಲಿದ್ದಾರೆ. ಈ ಹಿಂದೆ ಚೂರಿಕಟ್ಟೆ, ಪೆಂಟಗನ್ ನಂತಹ ಕ್ರೈಂ ಥ್ರಿಲ್ಲರ್ ಸಿನಿಮಾಗಳನ್ನ ಕೊಟ್ಟತಂಹ ರಾಘು ಶಿವಮೊಗ್ಗ ಇದೀಗ



ಸದ್ದಿಲ್ಲದೆ ತನ್ನ ಮೂರನೇ ಸಿನಿಮಾವನ್ನು ಯಶಸ್ವಿಯಾಗಿ ಚಿತ್ರೀಸಿದ್ದಾರೆ. ಈ ಚಿತ್ರದಲ್ಲಿ ಭೀಮ ಖ್ಯಾತಿಯ ಜಯಸೂರ್ಯ ಆರ್. ಅಜಾದ್, ರಾಘು, ಪೆಂಟಗನ್ ಸಿನಿಮಾ ಖ್ಯಾತಿಯ ಸಾಗರ್ ರಾಮ್ ಹಾಗೂ ಬೇಬಿ ಶ್ರೀಲಕ್ಷ್ಮಿ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ ಈ. ರಾಮಣ್ಣ ಮತ್ತು ವಿಜಯ್‌ಕುಮಾರ್ ದಿ ಟಾಸ್ಕ್ ನಿರ್ಮಾಪಕರು.

ಕಳೆದ 2024ರ ನವೆಂಬರ್ ತಿಂಗಳಿನಲ್ಲಿ ಈ ಚಿತ್ರದ ಮುಹೂರ್ತ ನಡೆದಿತ್ತು. ಡಿಸೆಂಬರ್ ಅಂತ್ಯದಲ್ಲಿ ಚಿತ್ರೀಕರಣ ಪ್ರಾರಂಭ ಮಾಡಿದ್ದ ಚಿತ್ರತಂಡ, ಬೆಂಗಳೂರು ಮತ್ತು ಮಡಿಕೇರಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ 46 ದಿನಗಳ ಕಾಲ ಚಿತ್ರೀಕರಣವನ್ನು ಪೂರ್ತಿಗೊಳಿಸಿದೆ. ಜಯಸೂರ್ಯ, ರಾಘು ಅವರ ಜೊತೆ ಹಿರಿಯಣ್ಣ ಅಚ್ಯುತ್‌ಕುಮಾರ್, ಬಾಲಾಜಿ ಮನೋಹರ್, ಗೋಪಾಲಕೃಷ್ಣ ದೇಶಪಾಂಡೆ, ಸಂಗೀತಾ ಭಟ್, ಹರಿಣಿ ಶ್ರೀಕಾಂತ್, ತನೀಷಾ ಕುಪ್ಪಂಡ, ಸಂಪತ್ ಮೈತ್ರೇಯ, ಅರವಿಂದ್ ಕುಪ್ಳೀಕರ್, ಕಿರಣ್ ನಾಯ್ಕ್, ಪಿ.ಡಿ. ಸತೀಶ್, ಭರತ್ ಜಿ.ಬಿ. ಮುಂತಾದ ದೊಡ್ಡ ತಾರಾ ಬಳಗ ವೇ ಈ ಚಿತ್ರದಲ್ಲಿದೆ. ಇದೀಗ ಪೋಸ್ಟ್-ಪ್ರೊಡಕ್ಷನ್ ಕೆಲಸಗಳು ಚುರುಕಾಗಿ ನಡೆಯುತ್ತಿದ್ದು, ದಿ ಟಾಸ್ಕ್ ಚಿತ್ರವು ಶೀಘ್ರದಲ್ಲೇ ತೆರೆಗೆ ಬರಲು ಸಿದ್ಧತೆ ನಡೆಸಿದೆ... ☯




# ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 09 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com